
ನನ್ನ ಪ್ರೀತಿಯ


ಮಲೆನಾಡು

ಕು. ಶಾ. ಶ್ರೀಪ್ರಕಾಶ್



ಮಲೆನಾಡು





ನನ್ನ ಪ್ರೀತಿಯ ಮಲೆನಾಡು

(ಬಾಲ್ಯದ ನೆನಪುಗಳು)

ಹು.ವಾ. ಶ್ರೀಪ್ರಕಾಶ್

ಭೋದಪ್ರಭ ಪ್ರಕಾಶನ
ನಂ. 46, ಎಸ್.ಬಿ.ಐ. ಆಫೀಸರ್ಸ್ ರೆಸಿಡೆನ್ಸಿ
ಕೋಡಿಚಿಕ್ಕನಹಳ್ಳಿ, ಬೆಂಗಳೂರು – 560 076
ದೂ : 9886409131

NANNA PREETHIYA MALENADU : Collection of articl
Kannada by **Sri H.V. Sriprakash**, Published by **Bodhapr**
Prakashana, No. 46, SBI Officer's Prime Residency, Kodichik
Halli, Bangalore - 560 076.

ಪ್ರಥಮ ಮುದ್ರಣ : 2010

ಪುಸ್ತಕದ ಆಕಾರ : 1/8 ಡೆಮಿ

ಉಪಯೋಗಿಸಿದ ಕಾಗದ : 70 ಜಿ.ಎಸ್.ಎಂ. ಮ್ಯಾಪ್ಲಿಥೋ

ಮುಖಪುಟ : ಗಿರೀಶ್

ಪುಟಗಳು : 92

ಬೆಲೆ : ರೂ. 90–00

ಮುದ್ರಣ :
ನಂದಿ ಪ್ರೋಸಸ್
ನಂ. 6/1, 4ನೇ ಅಡ್ಡರಸ್ತೆ, ನೇತಾಜಿ ರಸ್ತೆ
ನಾಗಸಂದ್ರ, ತ್ಯಾಗರಾಜನಗರ
ಬೆಂಗಳೂರು – 560 028
©: 26772292

ಮುನ್ನುಡಿ

ಕನ್ನಡ ಸಾರಸ್ವತ ಲೋಕಕ್ಕೆ ಮಲೆನಾಡಿನ ಕೊಡುಗೆಯಾಗಿರುವ ಹೆಚ್.ವಿ. ೀಪ್ರಕಾಶ್ ಭರವಸೆ ಮೂಡಿಸುತ್ತಾ ಕಾಡುವ ಬರಹಗಾರರು. ಕೊಪ್ಪ ತಾಲ್ಲೂಕು. ೀರೂರಿಗೆ ಅಂಟಿಕೊಂಡಿರುವ ಕಾಡಿನ ಮೂಲೆಯ 'ಹುಲುಸೆ' ಎಂಬ ಸುಂದರ ುಟ್ಟ ಹಳ್ಳಿಯಲ್ಲಿ ಹುಟ್ಟಿ ಬೆಳೆದು ಉದರ ಪೋಷಣೆಗಾಗಿ ಕಾಂಕ್ರೀಟ್ ನೆಲದಲ್ಲೆಲ್ಲಾ ಡಾಡಿ, ಅಲ್ಲೇ ಠಿಕಾಣಿ ಹೂಡಿ, ಬ್ಯಾಂಕ್ ಉದ್ಯೋಗದಲ್ಲಿ ನಿರತರಾದರೂ ಕಮ್ಮೂರು, ತಮ್ಮ ಜನರನ್ನು ಪ್ರೀತಿಸುತ್ತಾ ಸಾಗಿಬಂದ ಬಗೆ ಅನುಕರಣೀಯ ವಾದುದು. ಜನ್ಮತಃ ಅಂಕುರಿಸಿದ ಕವಿಪ್ರಜ್ಞೆ, ಬಾಲ್ಯದಲ್ಲಿ ಬೆರಗುಗಣ್ಣಿನಿಂದ ನೋಡಿದ ಪರಿಸರ, ಮಲೆನಾಡಿನ ಮಣ್ಣಿನ ಜನರೊಂದಿಗಿನ ಒಡನಾಟ, ಕಂಡ ಹಬ್ಬ, ಉತ್ಸವ; ಅಜೀರ್ಣವಾಗುವಷ್ಟು ಹಂಚಿಕೊಂಡ ತಂದೆ-ತಾಯಿ, ಬಂಧು-ಬಳಗದವರ ಪ್ರೀತಿ-ವಾತ್ಸಲ್ಯ, ಪ್ರತಿದಿನ ಪ್ರತಿಕ್ಷಣ ಸುತ್ತಮುತ್ತ ಕಂಡಂತಹ ಕೂಲಿ ಕಾರ್ಮಿಕರು, ಹಳ್ಳಿಯ ವಿವಿಧ ಕಸುಬುದಾರರು, ಹಳ್ಳಿಜನರ ಆಟ, ಗಾದೆ ಮಾತು, ಪಳೆಯುಳಿಕೆಯಾಗಿರುವ ಸುಮಾರು ಹತ್ತು ಅಂಕಣದ ಮನೆ, ಕೊಟ್ಟಿಗೆ, ಮನೆಯಲ್ಲಿರುವ ಹಳೆಯ ಕಾಲದ ವಸ್ತುಗಳು, ಇವುಗಳನ್ನೆಲ್ಲಾ ತಮ್ಮ ಅಂತರಂಗದಲ್ಲಿ ಮುದ್ರಿಸಿಕೊಂಡು ಪ್ರೌಢರಾಗಿ, ಮನಸ್ಸು ಪರಿಪಕ್ವವಾಗಿ, ಭಾಷೆ ಹಿಡಿತ ದಕ್ಕಿದ ಮೇಲೆ ಬರವಣಿಗೆ ಹಚ್ಚಿಕೊಂಡದ್ದು ಅವರ ಬರಹಗಳಿಗೆ ಜೀವ ತುಂಬಿದ ಅಂಶವಾಗಿದೆ.

ತಮ್ಮ ಬರಹದ ಹಸಿವೆಗೆ ತಮ್ಮ ಹುಟ್ಟೂರು ಹುಲ್ಸೆಯಲ್ಲಿ ಹುಲುಸಾಗಿ ಮೇವು ಸಿಕ್ಕಿದ್ದು ವರವಾಯಿತೆನ್ನಬಹುದು. ಶ್ರೀಪ್ರಕಾಶ್ ಎಂದೂ ಕೀರ್ತಿಗಾಗಿ, ಖ್ಯಾತಿಗಾಗಿ ಬರೆದವರಲ್ಲ. ಅವರಿಗೆ ಆ ಚಟವೂ ಇಲ್ಲ. ತಮ್ಮ ಮನಸ್ಸಿನಾಳದಲ್ಲಿ ಅನುಭವ, ಚಿಂತನೆ ಮೇಳೈಸಿಕೊಂಡು ಇನ್ನೇನು ತಾನಾಗಿಯೇ ಸ್ಫೋಟಗೊಳ್ಳುವ ಸಂದರ್ಭದಲ್ಲಿ ತಮ್ಮ ಚಿಂತನೆಯನ್ನು ಅಭಿವ್ಯಕ್ತಪಡಿಸಿದ್ದಾರೆ.

ಶ್ರೀಪ್ರಕಾಶ್‌ರಲ್ಲಿ ನಾನು ಮೆಚ್ಚಿರುವ ಒಂದಷ್ಟು ಗುಣ ವಿಶೇಷಣಗಳಿವೆ. ಅವರು ಭಾವನಾಜೀವಿ, ಮಿತಭಾಷಿ, ಸ್ನೇಹಜೀವಿ, ಅಲ್ಲದೆ ಹೃದಯ ಶ್ರೀಮಂತರು. ಹಾಗಂಥ ಅವರು ಸುಲಭವಾಗಿ ಅರ್ಥವಾಗುವವರಲ್ಲ. ಎಲ್ಲರ ಹಾಗೆ ಅವರಲ್ಲ. ಅವರಂತೆ ಇನ್ನೊಬ್ಬರಿಲ್ಲ. ಅವರ ಜೊತೆಗೆ ಬೆರೆಯುತ್ತಾ ಹೋದಂತೆ ಹತ್ತಿರವಾಗುತ್ತಾ

ಹೋಗುತ್ತಾರೆ. ಆಗ ಮಾತ್ರ ಹೃದಯ ಬಿಚ್ಚಿ ಕೊಡುತ್ತಾರೆ. ನಾನು ಕಂ ಅವರಿಗೆ ದುಃಖಿಸಿ ಅಭ್ಯಾಸವುಂಟು. ಎಂದಿಗೂ ಯಾರಲ್ಲಿಯೂ ತಮ್ಮ ಅಂತರಾ ನೋವನ್ನು ಹಂಚಿಕೊಂಡವರಲ್ಲ. ತಮ್ಮನ್ನು ಸುಡುವ ಬೇಗೆಯನ್ನು ಏಕಾಂಗಿ ಸಹಿಸಿಕೊಂಡು, ಇನ್ನೊಬ್ಬರ ಸಂತೋಷದಲ್ಲಿ ತಮ್ಮ ದುಃಖವನ್ನು ಮರೆ ಮನೋಭಾವದವರು. ಇಂತಹವರು ಎಷ್ಟು ಜನ ಇದ್ದಾರೆ? ಅವರ ಅ ಸಹನಾಶಕ್ತಿ ಸಾಮಾನ್ಯವಾದುದೇನಲ್ಲ. ತಮ್ಮ ಪ್ರೀತಿಯ ಪತ್ನಿ ಅಕಾ ಸಾವನ್ನಪ್ಪಿದಾಗ, ಪತ್ನಿ ಪ್ರೀತಿಯಿಂದ ನೀಡಿದ ಎರಡು ಪುಟ್ಟ ಹೆಣ್ಣು ಮಕ್ಕ ತಾಯಿ ಕೂಡಾ ಆಗಿ ತಮ್ಮಲ್ಲಿ ಪುಟಿದೇಳುವ ಸ್ವಾರ್ಥಪರ ಚಿಂತನೆಗಳನ್ನೆ ಮೆಟ್ಟಿ ಮಕ್ಕಳಿಗೆ ವಿದ್ಯೆ, ಬುದ್ಧಿ ಕಲಿಸಿ ಸುಸಂಸ್ಕೃತರನ್ನಾಗಿಸಿದ ಸಾಧ ಪರಿಪೂರ್ಣವಾದುದು.

ಕೆಲವಷ್ಟು ವರ್ಷಗಳ ನನ್ನ ಶ್ರೀಪ್ರಕಾಶರ ಒಡನಾಟ ಗೌರವಾದರಪೂ ಸ್ನೇಹವಾಗಿ ನನ್ನ ಪತ್ರಿಕೆ 'ನಗಾರಿ' ಹಾಗೂ ಪ್ರಕಾಶರ ಪ್ರತಿಭೆ ಸಂಗಮಿಸ ಕಾರಣವಾಯ್ತು. ಈ ಬಗ್ಗೆ ನನಗೆ ನಿಜಕ್ಕೂ ಹೆಮ್ಮೆ ಇದೆ.

"ನನ್ನ ಪ್ರೀತಿಯ ಮಲೆನಾಡು" ಈ ಕೃತಿಯಲ್ಲಿ ಮಲೆನಾಡಿನ, ಅದರಲ್ಲಿ ತಮ್ಮ ಸುಪ್ತ ಮನಸ್ಸಿನಲ್ಲಿ ಲೀನವಾಗಿರುವ 'ಹುಲ್ಸೆ' ಸುತ್ತಮುತ್ತಲಿನ ಪರಿಸ ಬದುಕು, ಪ್ರಭಾವ ಬೀರಿದ ವ್ಯಕ್ತಿಗಳ ದೈನಂದಿನ ಕುತೂಹಲಕಾರಿ ಅಂಶಗಳ ತಾವು ಸ್ವೀಕರಿಸಿ, ಅನುಭವಿಸಿ ಈ ಲೇಖನ ಮಾಲೆಯಲ್ಲಿ ಪೋಣಿಸಿದ್ದಾ ಅವರ ಲೇಖನಗಳಲ್ಲಿ ಮುಖ್ಯವಾಗಿ ಓದುವ ಹವ್ಯಾಸ, ಮನೆಗೆ ಮೂರು ಹಂ ಲಾಭ ಎರಡು ಆರು ಮತ್ತೊಂದು, ಜಿಗಳೆ ಅಂಟಿದ ಹಾಗೆ, ಅಂಗಳದಲ್ಲಿ ಕ್ಷೌರ, ಪೂಜಿಸಲೆಂದೇ ಹೂಗಳ ತಂದೆ, ಮುಂತಾದ ಲೇಖನಗಳು ಓದಿಸಿಕೊಂ ಹೋಗುತ್ತವೆ. ಇಲ್ಲಿ ಕಲ್ಪನೆ ಕ್ಷೀಣವಾಗಿ ಅನುಭವದ ಜೀವಂತಿಕೆ ಎದ್ದು ಕಾಣುತ್ತ ಭಾಷೆಯಲ್ಲಿ ಹಿಡಿತವಿದೆ. ಈ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಮರೆಯಾಗುತ್ತಿರು ವಿವಿಧ ಅಭಿರುಚಿಯ ಪುನರ್ ಪ್ರತಿಷ್ಠಾಪಿಸುವಂತಹ ಸಂಸ್ಕೃತಿ ಬಿಂಬಿಸು ಬರಹಗಳು ಈ ಪೀಳಿಗೆಯವರನ್ನು ಹೆಚ್ಚು ಓದುವ ಹವ್ಯಾಸಕ್ಕೆ ಹಚ್ಚಿದರೆ ಶ್ರೀಪ್ರಕಾಶ್ ಶ್ರಮ ಸಾರ್ಥಕವಾಗುತ್ತದೆ.

ಆತ್ಮೀಯ ಸ್ನೇಹಿತ ಶ್ರೀಪ್ರಕಾಶ್‌ರ ಲೇಖನಿಯಿಂದ ಮುಂಬರುವ ದಿನಗಳಲ್ಲಿ ಮತ್ತಷ್ಟು ಇಂತಹ ಸಾರ್ಥಕ ಕೃತಿಗಳು ಹೊರಬರಲಿ ಎಂದು ಆಶಿಸುತ್ತೇನೆ.

– ಕಿರಣಕೆರೆ ಉಮೇಶಚಂದ್ರ

ಕಾಡಿ

ನಲ್ನುಡಿ

"ಗೆಳೆಯ ಶ್ರೀಪ್ರಕಾಶ" ಪ್ರೀತಿಯ ಹೂಗೊಂಚಲ ಕವಿ.

ಪ್ರೀತಿ, ಸಂಕೋಚ, ನೋವಿನಿಂದ ಘಮಘಮಿಸಿದ್ದು ಅವರ ಭಾವ. ತನ್ನ ಒಲುವಿನಲ್ಲಿ ಆತ್ಮಶೋಧನೆ ಬರಹದ ಪಾಯ. ಅಂಕಣದ ಸಂಕಲನ "ನನ್ನ ಪ್ರೀತಿಯ ಮಲೆನಾಡು" ಅರಳಿದ್ದು ಹೂಗೊಂಚಲು ಬಿಟ್ಟ ನಾಲ್ಕು ವರ್ಷದ ನಂತರ.

ಪ್ರೀತಿ ಇಲ್ಲೂ ಬಿಡಲಿಲ್ಲ. ಊರಾಗಿ, ಘಟನೆಗಳಾಗಿ, ಬಂಧುಗಳಾಗಿ, ನೆನಪಾಗಿ ಕಾಡಿದೆ. ಚಿಕ್ಕಮಗಳೂರು ಜಿಲ್ಲೆಯ ಕೊಪ್ಪದಿಂದ "ನಗಾರಿ" ಧ್ವನಿಸುತ್ತದೆ. ಕಿರಣಕೆರೆ ಉಮೇಶ್‌ಚಂದ್ರನ್‌ರವರ ಪಾಕ್ಷಿಕ ಅದು. ಅಲ್ಲಿ ಮುರಳಿ ನೆನಪಿನ ಸುರಳಿ ಬಿಚ್ಚಿದವರು ಪ್ರಕಾಶ್. ಹದಿನೈದು ದಿನಕ್ಕೊಮ್ಮೆ ಹದಿವಯಸ್ಸು ಬರುವ ಮುನ್ನ, ಕುಡಿಮೀಸೆ ಒಡೆಯುವ ಮುನ್ನ, ಕಂಡ ತನ್ನೂರು, ತನ್ನ ಜನ, ತನ್ನ ಅನಿಸಿಕೆ, ತನ್ನದೇ ಆಗುವ ಘಟನೆಗಳು, ಸ್ವರ್ಗದ ಸುಖವೆನಿಸುವ ಬಾಲ್ಯದ ಬುತ್ತಿ; ಬಿಚ್ಚಿ ಹಂಚಿದ್ದಾರೆ ತಮ್ಮದೇ ಆದ ರೀತಿಯಲ್ಲಿ ಇಲ್ಲಿ.

ಭೂಮಿಗೆ ಬಂದಿದ್ದನಂತೆ ಯಕ್ಷನೊಬ್ಬ. ಸೌಂದರ್ಯ ಹಂಚಲಂತೆ ಇಂದ್ರನಾದೇಶದಂತೆ. ಚೀಲದಲ್ಲಿ ಹೊತ್ತು ನಡೆದಿದ್ದನಂತೆ ಸೌಂದರ್ಯ ಸಿರಿಯನ್ನು. ಯಕ್ಷಲೋಕದಲ್ಲಿದ್ದ ಅವನ ಪ್ರಿಯತಮೆಯ ನೆನಪು ಕಾಡುತ್ತಿತ್ತಂತೆ. ಮೈಮರೆತನಂತೆ. ಇಂದ್ರ ಕೊಟ್ಟ ಕೆಲಸ ಮರೆತನಂತೆ. ಕಾಲು ತೊಡರಿತಂತೆ. ಬಿದ್ದನಂತೆ. ಚೀಲದಲ್ಲಿದ್ದ ಸೌಂದರ್ಯ ಒಂದೆಡೆಗೆ ಸುರಿದು ಹೋಯಿತಂತೆ. ಈ ಸೌಂದರ್ಯದ ಬೀಡನ್ನು ಜನರು ಕರೆದರಂತೆ "ಮರೆನಾಡು". ಕಾಲನ ಹೊಡೆತಕ್ಕೆ ಸಿಕ್ಕಿ ಆಯಿತಂತೆ "ಮಲೆನಾಡು" ಹೀಗೊಂದು ಕತೆ ನಾನು ಕೇಳಿದ್ದೆ. ಮಲೆನಾಡು ಸೌಂದರ್ಯದ ಖನಿ. ಸಂಸ್ಕೃತಿಯ ಆಗರ.

ಮಲೆನಾಡಲ್ಲಿ ಹುಟ್ಟಿದ್ದಾರೆ ಹಲವಾರು ಮೇರು ವ್ಯಕ್ತಿಗಳು. ತಂ ನಾಡ ಕಣ್ಣಿಂದವನ್ನು ತೋರಿದ್ದಾರೆ ಇತರರಿಗೆ. ನಿಂತೂರಲ್ಲಿ ಕುಳಿತಾಗ ಹುಟ್ಟೂರು ಕಾಡಿದೆ ಅವರನ್ನು. ಪ್ರಕಾಶರಿಗೂ ಹೀಗೇ ಆಗಿರಬೇಕು.

ಲೇಖಕರ ಅನುಭವಗಳು ಇಲ್ಲಿ ಮೂಸೆಗೊಂಡಿವೆ. 1960ರ ದ ಆರಂಭದ ದಿನಗಳು ಅವರ ಬಾಲ್ಯ. ಅಂದಿನ ಜನ ಜೀವನವನ್ನು ಹಿಡಿ ಪ್ರಯತ್ನ ಅಂಕಣದ ಲೇಖನಗಳಲ್ಲಿ. ಕಂಡಿದ್ದು, ನವಿರಾಗಿ ಬರಹವಾಗಿದೆ; ತೀರ ವೈಯಕ್ತಿಕವಾಗದಂತೆ ನಾಡು ಪರಿಸರ ಸಂಸ್ಕೃತಿಯ ಭಿತ್ತಿ ಆಗು ಎಚ್ಚರ ವಹಿಸಿದ್ದಾರೆ. ಅಂಕಣ ಬರಹಕ್ಕೊಂದು ಮಿತಿಯಿದೆ. ಸ್ಥಳ ಸಂಕೊ ಅದಕ್ಕೇ ಕೊಂಚ ಅವಸರ ಕಾಣುತ್ತದೆ. ಇಂದಿಗೆ ಅಂದಿನ ಚಿತ್ರವನ್ನು ಸಂಬಂಧಿ ತವಕ ಕಾಣುತ್ತದೆ. ಧಾರಾಳವಾಗಿ ಅಲ್ಲದಿದ್ದರೂ ಅವರ ಪರಿಸರದ ಪದ ಅರ್ಥಪೂರ್ಣವಾಗಿ ಅಲ್ಲಲ್ಲಿ ಹೊಮ್ಮಿವೆ. ಮಲೆನಾಡ ಕೆಲ ಸಂಪ್ರದಾಯಗ ತಾರ್ಕಿಕ ಅರ್ಥ ಹುಡುಕುವ ಹುರುಪು ಕಾಣುತ್ತದೆ. ಅಲ್ಲಲ್ಲಿ ಸೂಸುತ್ತಾ ಏನೋ ಕಳಕೊಂಡವೇನೋ ಎಂಬ ನೋವಿನ ಎಳೆ. ಒಂದೆಡೆ "ಕೊಃಸ್ತ ಮನೆಯ ಒಂಚೂರು ಹಂಚು ಕಾಣುವವರೆಗೆ ತಿರುತಿರುಗಿ ನೋಡುತ್ತಾ ಭಾರ ಹೃದಯದಿಂದ ನಡೆಯುತ್ತಿದ್ದೆವು" ಎಂದು ದುಃಖ ತೋಡಿಕೊಳ್ಳುತ್ತಾರೆ.

ಮನೆಯೊಳಗಿನ ಕತೆಗಳು, ಮನದೊಳಗಿನ ಸಂವಾದಗಳು, ಅವರಿ ಹೇಳಿದ್ದು, ಮತ್ತೆಲ್ಲೋ ಕೇಳಿದ್ದು ಹೀಗೆ ಹಲವಾರು. ಅಡುಗೆ, ರುಚಿ, ಕ ಹಬ್ಬ, ಪರಿಸರ, ವೇಷ, ಅಭ್ಯಾಸ, ದೂರದಲ್ಲೆಲ್ಲೋ ತಾಳ ಮದ್ದಲೆಯ ಶಾಲೆ, ದೆವ್ವ ಕೋಲ ಇಂಥ ವಸ್ತುಗಳೆಲ್ಲ ಲೇಖನಗಳಲ್ಲಿ ಜೀವ ತುಂಬಿಕೊಳ್ಳುತ್ತ ಕೆಲವು ಲೇಖಕರು ತಮ್ಮ ಬಾಲ್ಯದ ಬುತ್ತಿಯನ್ನು ಕಳೆದುಕೊಂಡಿದ್ದಾರೆ. ಪ್ರಕಾಶರು ಹಾಗಾಗದಂತೆ ಎಚ್ಚರವಹಿಸಿ ತಮ್ಮ ಬಾಲ್ಯದೊಂದಿಗೆ ಅಂದಿನ ಕಾ ಚಿತ್ರಗಳನ್ನು ನೀಡಿದ್ದಾರೆ ಓದುಗರಿಗೆ.

- ಹುಲ್ಸೆ ವಾಸುದೇವಯ್ಯ ಶ್ರೀಪ್ರಕಾಶ್.
- ಹುಟ್ಟೂರು ಚಿಕ್ಕಮಗಳೂರು ಜಿಲ್ಲೆಯ ಹೇರೂರು; 1956 ಜುಲೈ 2
- ತಂದೆ ವಾಸುದೇವಯ್ಯ ತಾಯಿ ಕಮಲಮ್ಮ
- ನಾಲ್ಕನೇ ತರಗತಿಯವರೆಗೆ ವಿದ್ಯಾಭ್ಯಾಸ ಸ್ವಂತೂರಲ್ಲಿ.
- ನಂತರ ಹಿರಿಯಕ್ಕನೊಂದಿಗೆ ಮಂಗಳೂರಲ್ಲಿ ಏಳರ ತನಕ.
- ಕಿರಿಯಕ್ಕನೊಂದಿಗೆ ಪಿ.ಯು.ಸಿ. ತನಕ ಹುಬ್ಬಳ್ಳಿಯಲ್ಲಿ.
- ಕಾಲೇಜಿಗೆ ಮತ್ತೆ ಹಿರಿಯಕ್ಕನೊಂದಿಗೆ ಮೈಸೂರಲ್ಲಿ.
- ಜೆ.ಎಸ್.ಎಸ್‌ನಲ್ಲಿ 1976ರಲ್ಲಿ ವಿಜ್ಞಾನ ಪದವಿ

1977ರ ಡಿಸೆಂಬರ್‌ನಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್ ಬೆಂಗಳೂರು ನಗರ ಶಾಖೆಯಲ್ಲಿ ನೌಕರಿ.

ಆಗ ಭಾರತೀಯ ಸ್ಟೇಟ್ ಬ್ಯಾಂಕ್ ಬೆಂಗಳೂರು ನಗರ ಶಾಖೆಯ ಕನ್ನಡ ಸಂಘ ಕನ್ನಡ ಹೋರಾಟದ ತಾಣ. ಕನ್ನಡಕ್ಕೆ ಬೇಕು ಮನ್ನಣೆ. ಕನ್ನಡಿಗರಿಗೆ ಬೇಕು ನೌಕರಿ. ಕರ್ನಾಟಕಕ್ಕೆ ಬೇಕು ಎಸ್ ಬಿ ಐ ವೃತ್ತ. ಹೀಗೆ ಹತ್ತಾರು ಹೋರಾಟಗಳು.

ಜೊತೆಗೆ ಸಾಹಿತ್ಯ ಚಟುವಟಿಕೆಯಲ್ಲಿ ಅಗ್ರಗಣ್ಯ. ವಾರದ ಕಾರ್ಯಕ್ರಮ, ತಿಂಗಳ ಕಾರ್ಯಕ್ರಮ, ಮಾತಿನ ಮಲ್ಲರಿಗೆ ಹರಟೆಕಟ್ಟೆ, ಸಾಹಿತ್ಯ ಓದುಗರಿಗೆ ಪುಸ್ತಕ ಭಂಡಾರ, ಬ್ಯಾಂಕಿಂಗ್ ಅನ್ನು ಕನ್ನಡದಲ್ಲಿ ಅಭಿವ್ಯಕ್ತಿಸುವ ಛಲ. ಬ್ಯಾಂಕಿಂಗ್ ಪ್ರಪಂಚ, ಬ್ಯಾಂಕಿಂಗ್ ಕಮ್ಮಟಗಳು, ವಿಚಾರ ಸಂಕಿರಣಗಳು, ವಾರ್ಷಿಕ ಸಮಾರಂಭಗಳು, ಸಾಹಿತ್ಯ ಸಾಂಸ್ಕೃತಿಕ ಸ್ಪರ್ಧೆಗಳು, ಮಂದಾರ ಕೈಬರಹ ಪ್ರತಿಕೆ. ಒಂದೇ ಎರಡೇ ನೂರೆಂಟು. ಕನ್ನಡ ತನವನ್ನು ಅಭಿವ್ಯಕ್ತಿಸುವ ಛಲ ಸಾವಿರದೆಂಟು.

ಎಲ್ಲದರಲ್ಲೂ ಪ್ರಕಾಶ್ ಹಾಜರ್. ನಾಟಕ, ಏಕಪಾತ್ರಾಭಿನಯ, ಕವನ ಚರ್ಚೆ, ಕತೆ ಯಾವುದೇ ಕೇಳಿ ಅದು ಅಲ್ಲಿತ್ತು. ಪ್ರಕಾಶ್ ಅಲ್ಲಿದ್ದರು.

ಗುಂಪಲ್ಲಿದ್ದರೂ ಪ್ರಕಾಶರದು ಒಂಟಿಭಾವ. ಸಂಕೋಚದ ಸ್ವಭಾವ; ವನಸುಮದಂತೆ. ಆದರೆ ಕನ್ನಡ ಕೈಂಕರ್ಯಕ್ಕೆ ಮುಂದು ಯಾವಾಗಲೂ. ಹೊರಗೆ ಮೃದು. ಒಳಗೆ ಗಟ್ಟಿ, ಕೊರಗಿದರೂ ಕೊರಡಾಗದಂಥ ಎಚ್ಚರ. ನೋವಿನ ಹೊಡೆತಕ್ಕೆ ಮುದುರಿ ಬಾಡದೆ ಅದನ್ನೇ ಶಕ್ತಿಯಾಗಿಸಿ ಅರಳಿದ್ದು ಅವರ ವ್ಯಕ್ತಿತ್ವ, ಸಂಸಾರಕ್ಕೆ ಮುಚ್ಚಟೆ.

"ಕವನ ಬರೆಯೋಣವೆಂದರೆ
ಬರೇ ಅಂಕೆ ಸಂಖ್ಯೆ
ಬರೆದ ಪೆನ್ನಿಗೆ (!)
ಅಕ್ಷರಗಳೇ ಮರೆತಂತೆ !"

ಅಂತ ಕವನಿಸಿದ್ದರೂ ಕವನವನ್ನೂ ಮರೆತಿಲ್ಲ, ಲೆಕ್ಕವನ್ನೂ ಮರೆತಿಲ್ಲ. ಈಗ ಭಾರತೀಯ ಸ್ಟೇಟ್ ಬ್ಯಾಂಕ್, ತುಮಕೂರು ಸಿದ್ದಗಂಗಾ ತಾಂತ್ರಿಕ ಮಹಾವಿದ್ಯಾಲಯ ಶಾಖೆಯ ವ್ಯವಸ್ಥಾಪಕರಾಗಿರುವ ಪ್ರಕಾಶರು ಬಡ್ತಿ ಪಡೆದಿದ್ದು 1983ರಲ್ಲಿ. ಕಾರವಾರ, ಬೀಳಗಿ, ಬೆಂಗಳೂರು, ಚಿಕ್ಕಮಗಳೂರು, ಕುದುರೆಮುಖ, ಮೈಸೂರು, ಹೊಸಕೋಟೆ, ತುಮಕೂರು ಮುಂತಾದೆಡೆಗಳಲ್ಲಿ ಜವಾಬ್ದಾರಿ ಕೆಲಸ.

"ಶ್ರೀ ಕೃಷ್ಣ ಕೊನೆ ತೆಗೆದ ಅರ್ಜುನನು ನೇಣ್ ಹಿಡಿದ
ಗೀತೆಯಾ ಗೊಂಚಲೇ ಭುವಿಗೆ ಬಂತು"

ಎಂದು ಅಡಿಕೆಗೊನೆಯನ್ನು ಕೆಳಗಿಳಿಸುವ ಬಗ್ಗೆ ಪದ್ಯ ಬರೆದ ಪ್ರ ಮೇಲೆ ಭಗವದ್ಗೀತೆ ಉಪನಿಷತ್ತುಗಳು ಪ್ರಭಾವ ಬೀರಿದೆ.

"ಭರಭರನೆ ಬರುವ ಭಾರಕೆ
ಕಂಪಿಸುವ ನೇಣು;
ಕೊನೆ ಜಾರಿ ಉದುರಾಗದಂತೆ
ಕ್ಷಣ ಜಾರಿ ಕೈ ಸೇರಿ
ಒಡೆತನದ ಹುಮ್ಮಸ್ಸು"

ಎನ್ನುವಲ್ಲಿ ತಮ್ಮ ಬದುಕಿನ ತತ್ವ ತೆರೆದಿಡುತ್ತಾರೆ.

"ಬೇಯಬೇಕು, ಒಣಗಬೇಕು, ಬೆಲೆ ಬರಲು ಕಾಯಬೇಕು"ಎಂದು ಬದು ವಾಖ್ಯಾನಿಸುತ್ತಾರೆ.

ಪೂರ್ಣಚಂದ್ರ ತೇಜಸ್ವಿಯವರ ಶೈಲಿ, ಅನಂತಮೂರ್ತಿಯವರ ಪಿ ಧಾರೆ, ಭೈರಪ್ಪನವರ ಬರಹ ಸೌರಭವನ್ನು ಮೆಚ್ಚುವ ಹುವಾಶ್ರೀಗೆ ಮಲೆ ಮಣ್ಣ ಕಂಪು, ಕುವೆಂಪುರವರ ಪ್ರಭಾವ ಅಪರಿಮಿತ. ದೈವಕ್ಕೆ ಆಧ್ಯಾ ಒಲಿಯುವ ಪ್ರಕಾಶರು ಇನ್ನಷ್ಟು ಬರೆಯಬೇಕು. ಆಗೊಮ್ಮೆ ಈಗೊಮ್ಮೆ ಬರೆಯ ಮಿಂಚುವುದು ಖುಷಿಯಾದರೂ ಆಳವಿಸ್ತಾರವಾಗಿ ಹಬ್ಬಿ ಮೆಚ್ಚಾಗಬೇಕು.

ಶ್ರೀ ಪ್ರಕಾಶರಿಗೆ ಅಭಿನಂದನೆ

ನನ್ನದು ಮತ್ತಷ್ಟು ನಿರೀಕ್ಷೆ.

ನನ್ನ ನುಡಿ

ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ

ನಮ್ಮ ಊರಿಗೆ ಅಡಿ ಇಟ್ಟರೆ ಅಲ್ಲಿನ ಮಣ್ಣಿನ ವಾಸನೆಯೇ ಮನಸ್ಸನ್ನು ಪುಳಕಗೊಳಿಸುತ್ತದೆ. ಬಾಲ್ಯದ ನೆನಪುಗಳು ಮರುಕಳಿಸಿ ಬಂದಾಗ ನಾವು ಯಾವ ಊರಿನಲ್ಲೇ ಇರಲಿ, ಮನಸ್ಸಿಗೆ ಆನಂದವಾಗುತ್ತದೆ. "ನನ್ನ ಪ್ರೀತಿಯ ಮಲೆನಾಡು" ಇಂತಹ ಬಾಲ್ಯದ ಕೆಲವು ನೆನಪುಗಳ ಸಂಗ್ರಹ.

ನಯನಮನೋಹರವಾದ ನಮ್ಮ ಮನೆಯ ಮುಂದಿನ ಗದ್ದೆ, ಅದರಾಚೆಯ ಕಾಡು, ಮನೆಯ ಹಿಂದಿನ ಅಡಿಕೆಯ ತೋಟ, ತುಸು ದೂರದಲ್ಲಿರುವ ಅರೆಕಲ್ಲು ಗುಡ್ಡ, ಅದರ ಮೇಲಿಂದ ಕಾಣುವ ಭಾಗಶಃ ಹೇರೂರು ಗ್ರಾಮದ ದೃಶ್ಯ ವೈಭವ ಇವನ್ನೆಲ್ಲಾ ಮಾತಲ್ಲಿ ವರ್ಣಿಸಲಾಗದು. ನೋಡಿಯೇ ಸವಿಯಬೇಕು. ನಿಜ! ಎಲ್ಲರಿಗೂ ಅವರವರು ಹುಟ್ಟಿದ ಊರೇ ಸುಂದರ ಎನ್ನಿಸೀತು. ಸಾಗಿ ಬಂದ ಬದುಕಿನ ಹಾದಿಯಲ್ಲಿ ಮತ್ತೆ ಮತ್ತೆ ನೆನಪು ಮಾಡಿಕೊಳ್ಳುವುದು ಹುಟ್ಟಿದೂರಿನಲ್ಲಿ ಕಳೆದ ಬಾಲ್ಯದ ನೆನಪುಗಳನ್ನು! ನಾವು ಒಡಹುಟ್ಟಿದವರು ಒಟ್ಟಿಗೆ ಸೇರಿದಾಗಲಂತೂ ಹಳೆಯ ನೆನಪುಗಳನ್ನು ಮೆಲುಕು ಹಾಕಿ ಸಂತಸ ಪಡುತ್ತೇವೆ.

ಕೆಲವು ವರ್ಷಗಳ ಹಿಂದೆ "ನಗಾರಿ" ಪಾಕ್ಷಿಕ ಪತ್ರಿಕೆಯ ಸಂಪಾದಕರಾದ ಶ್ರೀ ಕಿರಣಕೆರೆ ಉಮೇಶಚಂದ್ರನ್ ರವರು ಪತ್ರಿಕೆಯ "ಮುರಳಿ ನೆನಪಿನ ಸುರಳಿ" ಎಂಬ ಅಂಕಣಕ್ಕೆ ಲೇಖನ ಬರೆದು ಕಳಿಸುವಂತೆ ಆತ್ಮೀಯವಾಗಿ ಒತ್ತಾಯಿಸಿದರು. ಹೀಗೆ ಬರೆಯಲು ತೊಡಗಿದಾಗ ಬಾಲ್ಯದ ನೆನಪುಗಳು ಮರುಕಳಿಸತೊಡಗಿದವು. ಹದಿನೈದು ದಿನಕ್ಕೊಮ್ಮೆ ಲೇಖನ ಬರೆದು ಕಳಿಸುವುದು ಸುಲಭದ ಮಾತಲ್ಲ. ಸುಮಾರು ಎರಡು ವರ್ಷಗಳ ಕಾಲ ಬರೆದ ನಾನು, ನಂತರ ಕೆಲಸದ ಒತ್ತಡದಿಂದ ನಿಲ್ಲಿಸಿದೆ. ಎಲ್ಲಿ ಬರೆದದ್ದನ್ನೇ ಬರೆಯುತ್ತೇನೋ ಎಂಬ ಆತಂಕವೂ ಇತ್ತು. ಪತ್ರಿಕೆಯಲ್ಲಿ ಲೇಖನ ಓದಿದ ಕೆಲವರು ಆಡಿದ ಪ್ರಶಂಸೆಯ ಮಾತಿನಿಂದ ಉತ್ತೇಜಿತನಾದ ನಾನು ಈ ಬರಹಗಳನ್ನು ಪುಸ್ತಕ ರೂಪದಲ್ಲಿ ತರಲು ನಿರ್ಧರಿಸಿದೆ.

ಕೆಲವು ಲೇಖನಗಳು ಸಿಗಲಿಲ್ಲ. ಕೆಲವು ಅರೆಬರೆ ಬರಹವನ್ನು ಪೂರ್ಣಗ್ಳ ಸೇರಿಸಿದೆ. ಈ ಪುಸ್ತಕ ಬರಲು ಕಾರಣಕರ್ತರಾದ ಶ್ರೀ ಕಿರಣಕೆರೆ ಉ ಚಂದ್ರನ್‌ರವರೇ ಮುನ್ನುಡಿಯನ್ನೂ ಬರೆದು ಉಪಕರಿಸಿದ್ದಾರೆ. ಅವರಿಗೆ ವಂದನೆಗಳು.

ಅಪ್ಪಯ್ಯ, ಅಮ್ಮ, ಒಡಹುಟ್ಟಿದವರು, ಚಿಕ್ಕಪ್ಪ – ಚಿಕ್ಕಮ್ಮಂದಿರು ಅ ಮಕ್ಕಳು, ಅದೆಷ್ಟೋ ಹಿರಿಕಿರಿಯ ಬಂಧುಗಳು, ನೆರೆಹೊರೆಯವರು, ಬಾಲ್ಯವನ್ನು ಅಪ್ಯಾಯಮಾನಗೊಳಿಸಿದ ಎಲ್ಲರಿಗೂ ನನ್ನ ಹೃತ್ಪೂವ ವಂದನೆಗಳು.

ಪುಸ್ತಕ ಪ್ರಕಟಣೆಗೆ ಮಾರ್ಗದರ್ಶನ, ಸಹಕಾರ ನೀಡಿರುವ ವಾ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕಿ, ಖ್ಯಾತಲೇಖಕಿ ಶ್ರೀಮತಿ ವೈ ಸಂಧ್ಯಾಶರ್ಮರವರಿಗೆ ಮತ್ತು ಲೇಖಕರೂ ನಟರೂ ಆದ ಶ್ರೀ ಕೃಷ್ಣಶ ರವರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಪುಸ್ತಕಕ್ಕೆ ಅಂದವಾದ ಮುಖ ಬರೆದು ಮೆರುಗು ನೀಡಿರುವ ಶ್ರೀ ಗಿರೀಶ್‌ರವರಿಗೆ ಮತ್ತು ಮುದ್ರಣಕಾ ನಿರ್ವಹಿಸಿರುವ ಶ್ರೀ ಗೋಪಾಲ್ ರವರಿಗೆ ನನ್ನ ವಂದನೆಗಳು.

ನಮ್ಮ ಭಾರತೀಯ ಸ್ಟೇಟ್ ಬ್ಯಾಂಕಿನ ಬೆಂಗಳೂರು ನಗರ ಶಾಖೆ ಕನ್ನಡ ಸಂಘ ಹತ್ತು ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿತ್ತು. ಇಂಥ ಕಾರ್ಯಕ್ರಮಗಳಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದ ಅತಿಗಣ್ಯರನ್ನು ಕಾಣುವ,ಕೇಳು ಅವಕಾಶ ನನಗೆ ದೊರೆಯಿತು. ನಾನು ನಗರ ಶಾಖೆಗೆ ಸೇರಿದಾಗ ನನ್ನ ಗುರುತಿಸಿ, ನನ್ನನ್ನು ಇಂತಹ ಕಾರ್ಯಕ್ರಮಗಳಲ್ಲಿ ತೊಡಗಿಕೊಳ್ಳುವ ಮಾಡಿದವರು ಮಿತ್ರರಾದ ಶ್ರೀ ಬೆಂ.ಶ್ರೀ. ರವೀಂದ್ರರವರು. ನನ್ನ ಅ ಪ್ರತಿಭೆ ಬೆಳಗಲು ಅವಕಾಶ ಮಾಡಿಕೊಟ್ಟವರು ಅವರು. ಕಾರ್ಮಿಕ ಸಂಘಟನೆ ಮುಂಚೂಣಿಯ ನಾಯಕರಾಗಿರುವ ಶ್ರೀ ಬೆಂ.ಶ್ರೀ. ರವೀಂದ್ರರವರು 'ಭಾರತೀ ಸ್ಟೇಟ್‌ಬ್ಯಾಂಕ್ ಅಧಿಕಾರಿಗಳ ಸಂಘ, ಕರ್ನಾಟಕ' ಇದರ ಅಧ್ಯಕ್ಷರಾಗಿದ್ದಾ 'ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಒಕ್ಕೂಟ, ಕರ್ನಾಟಕ ಘಟಕ' ಕಾರ್ಯದರ್ಶಿಗಳಾಗಿದ್ದಾರೆ. ಅವರ ಬರಹ ನನ್ನ ಪುಸ್ತಕಕ್ಕೆ ಮೆರಗು ನೀಡಿ ಅವರ ಲೇಖನ ಪಡೆದ ನನಗೆ ಧನ್ಯತಾಭಾವ ಮೂಡಿದೆ. ಅವರಿಗೆ ನ ಹೃತ್ಪೂರ್ವಕ ವಂದನೆಗಳು.

ನನ್ನ ಮೊದಲ ಕೃತಿ "ಪ್ರೀತಿಯ ಹೂಗೊಂಚಲು" ಕವನ ಸಂಕಲನವ ವಿಮರ್ಶಿಸಿ ಲೇಖನ ಬರೆದಿರುವ ಖ್ಯಾತ ಲೇಖಕರಾದ ಶ್ರೀ ಬಿ.ಎಸ್. ಚಂದ್ರಶೇಖ

ವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು. "ಸಾಹಿತ್ಯ ದಾಸೋಹ" ಕಾರ್ಯಕ್ರಮದಲ್ಲಿ ಅವರು ಬರೆದು ಓದಿದ ವಿಮರ್ಶಾ ಲೇಖನವನ್ನು ಅವರ ಅನುಮತಿ ಪಡೆದು ಈ ಪುಸ್ತಕದ ಕೊನೆಯಲ್ಲಿ ಪ್ರಕಟಿಸಲಾಗಿದೆ.

ನನ್ನ ಲೇಖನಗಳ ಉದ್ದೇಶ, ಕೆಲವು ಬಾಲ್ಯದ ನೆನಪುಗಳನ್ನು ಕೆದಕುವುದು. ಓದಿದವರಿಗೂ ತಮ್ಮ ಬಾಲ್ಯದ ನೆನಪುಗಳು ಮರುಕಳಿಸಿ ಬಂದರೆ ಲೇಖನ ಸಾರ್ಥಕ! ನಾನು ಲೇಖನಗಳನ್ನು ಬರೆಯುವಾಗ ಅವು ಕೇವಲ ನನ್ನ ವೈಯಕ್ತಿಕ ಬಾಲ್ಯದ ಅನುಭವಗಳ ಹೇಳಿಕೆಗಳಾಗದಂತೆ ಎಚ್ಚರವಹಿಸಿದ್ದೇನೆ. ಮಲೆನಾಡಿನ ಕೃಷಿಬದುಕು, ಉಪಯೋಗಿಸುವ ಪರಿಕರ, ಬೆಳೆ ಆಹಾರ ಪದ್ಧತಿ, ಆಟ ವಿನೋದಗಳ ಬಗ್ಗೆ ಕಿರು ಪರಿಚಯವನ್ನು ಈ ಲೇಖನಗಳ ಮುಖಾಂತರ ಮಾಡಿಕೊಡುವ ಪ್ರಯತ್ನ ಮಾಡಿದ್ದೇನೆ. ಓದುಗರಾದ ನೀವು ನನ್ನ ಈ ಕೃತಿಯನ್ನು ಪ್ರೀತಿಯಿಂದ ಕೈಗೆತ್ತಿಕೊಳ್ಳುವಿರೆಂದು ನಂಬಿದ್ದೇನೆ. ನಿಮಗೆ ವಂದನೆಗಳು ಮತ್ತು ಶುಭಾಶಯಗಳು.

–ಹು.ವಾ ಶ್ರೀಪ್ರಕಾಶ

ವಿಳಾಸ:

ನಂ. 46, ಎಸ್.ಬಿ.ಐ. ಆಫೀಸರ್ಸ್
ಪ್ರೈಂ ರೆಸಿಡೆನ್ಸಿ, ಕೋಡಿಚಿಕ್ಕನಹಳ್ಳಿ
ಬೆಂಗಳೂರು – 560 076

ಅರ್ಪಣೆ

ಶ್ರೀ ಶೃಂಗೇರಿ ಶಾರದಾಂಬೆಯ
ಪದತಲಗಳಿಗೆ

ವಿದ್ಯೆ ನೀಡಿ, ಪ್ರೀತಿಯಿಂದ ಸಲಹಿ
ಬಾಲ್ಯವನ್ನು ಸುಂದರಗೊಳಿಸಿದ
ತಂದೆ – ತಾಯಿ
ಶ್ರೀ ಹೆಚ್.ಬಿ. ವಾಸುದೇವಯ್ಯ
ಶ್ರೀಮತಿ ಕಮಲಮ್ಮನವರಿಗೆ

ನಲಿಯುತ್ತ ಕಲಿಯುತ್ತ
ಮನಕ್ಕೆ ಮುದ ನೀಡುತ್ತ
ಬೆಳೆದ ಮಕ್ಕಳು
ಶರಧಿ – ಸಂಹಿತಾರಿಗೆ

ಪರಿವಿಡಿ

ಬಂದ್ರ್ಯಾ ಮನೇಲೆಲ್ಲಾ ಹುಷಾರಾ?

ಅತಿಥಿಗಳು ಬಂದಾಗ ಬಂದ್ರ್ಯಾ.....? ಎಂದು ಮಾತಾಡಿಸುವ ವಾಡಿಕೆ ಇತ್ತು. ಬಂದ ಅತಿಥಿಗಳನ್ನು ಮನೆಯವರೆಲ್ಲರೂ ಒಬ್ಬೊಬ್ಬರಾಗಿ ಬಂದು ಬಂದ್ರ್ಯಾ ಅತ್ತೆ, ಬಂದ್ರ್ಯಾ ಮಾವ ಅಂತ ಸಂಬಂಧ ಹೇಳಿ ಉಭಯ ಕುಶಲೋಪರಿ ನಡೆಸುವುದು ಸಾಮಾನ್ಯವಾಗಿತ್ತು. ಬಹುಶಃ ಬಂದಿರೇ.. ಎಂದು ಆಗಮನಕ್ಕೆ ಸಂತಸ ವ್ಯಕ್ತಪಡಿಸುವ ಪರಿ, ಬಂದ್ರೇ ಅಥವಾ ಬಂದ್ರ್ಯಾ ಎಂಬ ರೂಪ ತಾಳಿರಬೇಕು. ಬಂದವರಿಗೆ ಗಂಗೋದಕ! ಸಾಮಾನ್ಯವಾಗಿ ಪಾನಕ, ಮಜ್ಜಿಗೆ, ನೀರು ಇಲ್ಲವೇ ಕಾಫಿ, ಟೀಯನ್ನು ಅತಿಥಿಗಳ ಅಪೇಕ್ಷೆಗೆ ಅನುಗುಣವಾಗಿ ನೀಡುವುದುಂಟು. ಬಂದವರನ್ನು ಮನೆಯವರೆಲ್ಲರೂ ಪರಿಚಯ ಮಾಡಿಕೊಂಡು ಮಾತಾಡುವ ಆ ಕ್ರಮ ಅನುಕರಣೀಯ. ಈಗ ನಗರಗಳಲ್ಲಿ ಯಾರಾದರೂ ಬಂದರೆ ಮನೆಯ ಇತರರು ತಮಗೆ ಸಂಬಂಧವೇ ಇಲ್ಲದಂತೆ ಇರುವುದನ್ನು ಗಮನಿಸುತ್ತೇವೆ.

ಚಾವಡಿಯಲ್ಲಿ ಚಾಪೆ ಮೇಲೆ ಜಾಡಿಯನ್ನೋ ಕಂಬಳಿಯನ್ನೋ ಜಮಾಖಾನವನ್ನೋ ಹಾಕಿ ಬಂದವರನ್ನು ಕುಳ್ಳಿರಿಸಿ, ಗಂಗೋದಕ ನಂತರ ಎಲೆ ಅಡಿಕೆ ತಟ್ಟೆ ನೀಡುವುದು ಕ್ರಮ. ಮನೆಗೆ ಯಾರಾದರೂ ಬಂದಾಗ ಎಲೆ ಅಡಿಕೆ ತಟ್ಟೆಯಲ್ಲಿ ಎಲೆ, ಅಡಿಕೆ, ಸುಣ್ಣ (ಕತ್ತರಿ) ಎಲ್ಲವೂ ಇದೆಯೇ ಎಂದು ನೋಡಬೇಕಾಗುತ್ತಿತ್ತು. ಎಲಾಡಿಕೆ ತಟ್ಟೆಯಲ್ಲಿ ಇರುತ್ತಿದ್ದ ಸುಣ್ಣದ ಡಬ್ಬ ಕೆಲವರ ಮನೆಯಲ್ಲಿ ವಿಶೇಷ ವೈಖರಿಯಿಂದ ಆಕರ್ಷಿಸುತ್ತಿತ್ತು. ವಿವಿಧ ಆಕಾರ, ಮುಚ್ಚಳಕ್ಕೊಂದು ಚೈನು ಅದಕ್ಕೊಂದು ಕಡ್ಡಿ! ತಾಮ್ರ ಅಥವಾ ಹಿತ್ತಾಳೆ ಹರಿವಾಣಗಳು ಹೆಚ್ಚಾಗಿ ಬಳಕೆಯಾಗುತ್ತಿದ್ದವು. ಕೆಲವರು ಹಿರಿಯರು ನೀನೂ ತಿಂತೀಯೇನಾ? ಅಂತ ನಮಗೂ ಸಣ್ಣಗೆ ಕತ್ತರಿಯಲ್ಲಿ ಅಡಿಕೆ ಎಲೆ ಚೂರುಮಾಡಿ ಕೊಡುತ್ತಿದ್ದರು!

ಕೆಲಸದವರಿಗೆ, ಅಥವಾ ಯಾರೇ ಇತರರು ಬಂದರೂ ಒಂದು ಮುಷ್ಟಿ ಅಡಿಕೆ, ಒಂದು ತುಂಡು ಹೊಗೆಸೊಪ್ಪು ಕೊಡುವುದು ವಾಡಿಕೆ ಮತ್ತು ಬಂದವರಿಗೆ ಬಾಯಾರಿಕೆಯನ್ನು ತಪ್ಪದೆ ಕೊಡಲಾಗುತ್ತಿತ್ತು. ಕೆಲಸದವರಿಗೆಲ್ಲಾ ನೀರು, ಬೆಲ್ಲ, ಇಲ್ಲವೆ ಕಾಫಿಯನ್ನು (ಕೇಳಿದಾಗ) ಕೊಡುವುದುಂಟು. ಈ ಎಲ್ಲ ಪದ್ಧತಿಗಳನ್ನು ಈಗಲೂ ಕಾಣಬಹುದು.

ಮರೆಯಾದ ಒಡ್ಡೋಲಗ

ದಟ್ಟ ಕಾಡಿನ ಮನೆ ಅಲ್ಲಲ್ಲಿ ಗದ್ದೆ, ಅಡಿಕೆ ತೋಟ, ಅವುಗಳ ನ
ಮನೆ. ಕತ್ತಲು ಆವರಿಸುತ್ತಿರುವಂತೆ ಗೃಹಿಣಿ ಮನೆಯ ದೀಪ ಹಚ್ಚುತ್ತಿ
ಯಜಮಾನನ ಸುತ್ತ ಅವನ ಕುಟುಂಬ ವರ್ಗದವರು, ನೆಂಟರಿ
ದೂರದಲ್ಲಿಬ್ಬರು ಕೆಲಸಗಾರರು ಹೀಗೆ ಇರುತ್ತಿದ್ದರು. ತುಂಬಿದ ಮನೆ ಅಂದ
ಕನಿಷ್ಠ ಹತ್ತು ಹದಿನೈದು ಜನ. ದಿನವೂ ಒಂದಿಬ್ಬರಾದರೂ ನೆಂಟರೋ, ಇಷ್ಟ
ಸಹಜ! ಕತ್ತಲಾಗುತ್ತಿರುವಂತೆ ಮನೆಯ ಯಜಮಾನನ ಒಡ್ಡೋಲಗದ ಪ್ರಾ
ಆ ದಿನ ಯಾರು ಯಾರು ಏನೇನು ಕೆಲಸ ಮಾಡಿದರು, ಎದು
ಸಮಸ್ಯಗಳೇನು, ಪರಿಹಾರ ಹೇಗೆ ಎಂದೆಲ್ಲಾ ವಿಚಾರ ಮಂಥನ. ಮುಂ
ಬೇಕಾದ ಕೆಲಸ ಕಾರ್ಯಗಳ ಬಗ್ಗೆ ಮನೆಮಂದಿಗೆ ತಿಳುವಳಿಕೆ. ಕುಳಿತ ಚಿಕ್ಕಮ
ಒಂದಿಷ್ಟು ಬುದ್ಧಿ ಮಾತು. ನಡು ನಡುವೆ ಸೂಕ್ತಿಗಳು, ಗಾದೆ
ನೆಂಟರಿಷ್ಟರೊಂದಿಗೆ ತಾನು ನಡೆದು ಬಂದ ಹಾದಿಯ ಬಗ್ಗೆ, ಎದು
ಸಮಸ್ಯೆಗಳ ಬಗ್ಗೆ ಯಜಮಾನನ ಸವಿಸ್ತಾರ ವಿವರಣೆ, ಅದಕ್ಕೆ ತಲೆದೂಗ
ಬಂಧುಗಳು! ಹೀಗೆ ಸುಮಾರು ಒಂದೆರಡು ಗಂಟೆಗಳ ಕಾಲ ಮಲೆನಾ
ಮನೆಮನೆಗಳಲ್ಲಿ ನಡೆಯುತ್ತಿದ್ದ ಒಡ್ಡೋಲಗ ಈಗ ಕಾಣೆಯಾದಂತಾ
ಮುಖ್ಯವಾಗಿ ತುಂಬು ಸಂಸಾರಗಳೇ ಕಡಿಮೆಯಾಗಿವೆ. ನೆಂಟರಿಷ್ಟ
ದೂರವಾಗುತ್ತಿದ್ದಾರೆ. ಮನೆಮಂದಿಗೋ ಒಬ್ಬರಿಗೊಬ್ಬರ ಮಾತು ಕೇಳ
ಸಮಾಧಾನವಿಲ್ಲ. ಮತ್ತೊಬ್ಬರ ಮಾತು ಹಿಡಿಸುವುದೂ ಇಲ್ಲ. ಮಕ್ಕಳಿಗೆ
ಸೂಕ್ತಿ ಪುರಾಣ ಪ್ರಸಂಗಗಳ ಘಟನೆಗಿಂತ ದೂರದರ್ಶನ ಜಾಹಿರಾ
ಪ್ರಿಯವಾಗುತ್ತಿದೆ. ಈ ಒಡ್ಡೋಲಗಗಳಲ್ಲಿ ಬೆಳೆಯುವ ವ್ಯಕ್ತಿಗೆ ಬೇಕಾದ ತರಬೇತಿ
ಎಲ್ಲ ಅಮೂಲ್ಯ ಅಂಶಗಳೂ ಇರುತ್ತಿದ್ದವು. ಈಗ ಬೇರೆಯವರೊಂದಿಗೆ ಹೇ
ಸಂಭಾಷಣೆ ಮಾಡಬೇಕು? ಕಷ್ಟಗಳನ್ನು ಎದುರಿಸುವುದು ಹೇಗೆ? ಬದುಕ
ಸುಂದರವಾಗಿಸಲು ಸರಳ ಸೂತ್ರವೇನು? ಎಂದೆಲ್ಲ ಕಲಿಸಲು ಹಣ ಮಾಡ
ಸಂಸ್ಥೆಗಳು; ಜನ ಇದ್ದಾರೆ! ಆದರೆ ಈ ಎಲ್ಲ ತರಬೇತಿಗಳು ಹಿಂದಿನ ಒಡ್ಡೋಲ
ವೈಭವವನ್ನು ಸರಿಗಟ್ಟಲಾರದು ಅಲ್ಲವೇ?

ಉಳುವ ಯೋಗಿಯ ನೋಡಲ್ಲಿ.....

ಬೆಳಕು ಮೂಡುವುದಕ್ಕೂ ಮುನ್ನ ಆತ ಕೊಟ್ಟಿಗೆಯಿಂದ ಎತ್ತುಗಳನ್ನು ಹೊಡೆದುಕೊಂಡು ಗದ್ದೆಗೆ ಹೋಗಿ ನೊಗ ನೇಗಿಲು ಕಟ್ಟಿ ಹೂಡಲು ತೊಡಗುತ್ತಾನೆ. ಶೀತಲಗಾಳಿ..... ಕೊರೆವ ಚಳಿ ಬೇಸರ ಕಳೆಯಲಿಕ್ಕೋ ಏನೋ ಆತ ಗಟ್ಟಿಯಾಗಿ ಆಲಾಪ ಮಾಡುತ್ತಾನೆ. ಓ..... ಹೋ..... ಹೋ..... ಟಿಟಿಟಿ..... ಮನೆಯ ಚಾವಡಿಯಲ್ಲಿ ಮಲಗಿದ ನಮಗೆ ಗದ್ದೆಯಿಂದ ಕೇಳಿಬರುವ ಆತನ ಸುಂದರ ಆಲಾಪದೊಂದಿಗೆ ಬೆಳಕು ಹರಿಯುತ್ತದೆ. ಹೂಡುವವನಿಗೆ ಕಾಫಿ ತಿಂಡಿ ಕೊಟ್ಟು ಬರಲು ಹೋಗುವ ನಮಗೆ ಅವನು ತಿನ್ನುತ್ತಿರುವಾಗ ನೇಗಿಲು ಹಿಡಿದು ಹೂಡುವ ಹಂಬಲ! ಹೂಟೆ ನೋಡಲು ಸುಂದರ. ಆದರೆ ಸುಲಭವೇನಲ್ಲ. ನೇಗಿಲನ್ನು ಸರಿಯಾದ ಕ್ರಮದಲ್ಲಿ ಒತ್ತುಕೊಟ್ಟು ಹಿಡಿಯಬೇಕು. ಇಲ್ಲವಾದರೆ ಅದು ಎತ್ತುಗಳ ಕಾಲಿಗೆ ತಾಗುವ ಅಪಾಯವಿದೆ. ಮೊದಲು ಹೂಡಿದ ಸಾಲಿಗೆ ಸರಿಯಾಗಿ ನಂತರದ ಸಾಲಿನ ಮಣ್ಣು ಬೀಳಬೇಕು. ಎತ್ತುಗಳಿಗೂ ಭಾಷೆ ಅರ್ಥವಾಗುತ್ತದೆ. ಟಿ ಟಿ ಟಿ ಅಂದರೆ ತಿರುಗುತ್ತವೆ. ಹೈ..... ಹೈ ಮುಂತಾದ ಆಲಾಪದ ಏರಿಳಿತಗಳನ್ನು ಅಭ್ಯಾಸದಿಂದ ಅರಿಯುತ್ತಿವೆ. ನೆರೆಹೊರೆಯವರ ಸಹಕಾರವನ್ನೂ ಹೂಟೆಗೆ ತೆಗೆದು ಕೊಳ್ಳುವುದುಂಟು ಈಗ ಟಿಲ್ಲರ್, ಟ್ರ್ಯಾಕ್ಟರ್ ಬಂದು ಹೂಟೆ ಸುಲಭವಾಗಿದೆ. ವಿದ್ಯಾರ್ಥಿಗಳಿಗೆ ಪಿ.ಯು.ಸಿ ಆಗಿದೆ ಅನ್ನುವ ಹಾಗೆ ಎತ್ತುಗಳಿಗೆ ಎರಡು ಹೂಟೆ ಆಗಿದೆ, ಮೂರು ಹೂಟೆ ಆಗಿದೆ ಅಂತ ಅವುಗಳ ಅನುಭವ ಸಾಮರ್ಥ್ಯ ಅಳೆಯುವುದುಂಟು. ಹೂಡಲು ಆರಂಭವಾದ ಮೇಲೆ ಕೋಣಗಳಿಗೆ ವಿಶೇಷ ಉಪಚಾರ. ಹುರಳಿ, ಹಿಂಡಿ, ಸ್ನಾನ, ಮೈಗೆ ಎಣ್ಣೆ ಹೀಗೆ ವಿಶೇಷ ಕಾಳಜಿ. ಮಲೆನಾಡು ಸಮತಟ್ಟಲ್ಲದ ಬೆಟ್ಟ ಪ್ರದೇಶವಾದ್ದರಿಂದ ಗದ್ದೆಗಳು ಕೆಲವು ಸಣ್ಣ ಕೆಲವು ದೊಡ್ಡ. ಸಣ್ಣ ಸಣ್ಣ ಗಣ್ಣಗಳಲ್ಲಿ ಕೆಲಸ ಹೆಚ್ಚು, ಧರೆ ಕೆತ್ತುವುದು. ಅಂಚು ಹಾಕುವುದು ಮುಂತಾದ ಪೂರಕ ತಯಾರಿ ನೆಟ್ಟಿಯ ಮುನ್ನ ಆಗಬೇಕು. ಗದ್ದೇಲಿ..... ಕೆಲಸವೇ ಜಾಸ್ತಿ ಅಂತ ಹೇಳುವುದನ್ನು ಕೇಳುತ್ತೇವೆ. ಬಹುಶಃ ಈ ಕಾರಣಕ್ಕಾಗಿಯೇ ಅನೇಕ ಕಡೆ ಗದ್ದೆಗಳು, ಅಡಿಕೆ ತೋಟಗಳಾಗಿ ಮಾರ್ಪಡುತ್ತಿವೆ.

ಮಲೆನಾಡಿನ ಸಮವಸ್ತ್ರ

ಮಲೆನಾಡಿನ ಸಮವಸ್ತ್ರವನ್ನು ಮೊದಲಿನಷ್ಟಿಲ್ಲದಿದ್ದರೂ ಈಗಲೂ ಕೆಲ ಧರಿಸುವುದನ್ನು ಕಾಣಬಹುದು. ಏನಿದು ಮಲೆನಾಡಿನ ಸಮವಸ್ತ್ರ, ಎ... ಆಶ್ಚರ್ಯವಾಯ್ತೇ?! ಅದು ಮೊಣಕಾಲವರೆಗಿನ ಒಂದು ತುಂಡು ಪ... (ಸ್ನಾನದ ಪಂಚೆ!) ಸೊಂಟಕ್ಕೊಂದು ಒಡ್ಯಾಣ ಮತ್ತು ಹಾಳೆ ಟ್ಟೊ... ಮಳೆಗಾಲದಲ್ಲಿ ಒಂದು ಕಂಬಳಿ. ಅತಿ ಸರಳ! ನಿರಾಡಂಬರ, ನಿರ್ಮಲ... ಸಮವಸ್ತ್ರ ಧರಿಸಿ ತೋಟಕ್ಕೆ ಹೋದರೆ, ಬರುವಾಗ ಕೈಯಲ್ಲಿ ಒಂದಷ್ಟು ಬಾಳೆ... ಅಥವಾ ಒಂದು ಬಾಳೆಕೊನೆ ಹಿಡಿದು ಬರುತ್ತಿದ್ದರು. ಈಗ ಮಲೆನಾಡಿನಲ್ಲಿ... ಸಮವಸ್ತ್ರ ಅಪರೂಪ. ಏಕೆಂದರೆ ಬರ್ಮುಡಾ, ಟೀಶರ್ಟ್, ಕ್ಯಾಪ್ ಇ... ರೈನ್ ಕೋಟ್‌ಗಳು ಬಂದಿವೆ.

ಈಗಿನ ಯುವಕರು ಹೆಚ್ಚಾಗಿ ನಗರಗಳೆಡೆಗೆ ಆಕರ್ಷಿತರಾಗುತ್ತಿದ್ದ... ಸಂಜೆಯ ಹೊತ್ತಿಗೆ ದ್ವಿಚಕ್ರವಾಹನ ಏರಿ ಹತ್ತಿರದ ಪೇಟೆಗೆ ಹೋಗಿ ... ಏರಿಸಿ ಬರುವವರುಂಟು. ಹಿಂದೆ ಅಡಿಕೆ ಮಾರಾಟಕ್ಕೆ ಶಿವಮೊಗ್ಗ ಮಂ... ಹೋಗುವಾಗ ಭಾರೀ ಗಡದ್ದಾಗಿ ಕಚ್ಚೆಪಂಚೆ ಉಟ್ಟು, ಕೋಟು ಧರಿಸಿ, ತ... ಮುಂಡಾಸು ಕಟ್ಟಿಕೊಂಡು ಹೋಗುತ್ತಿದ್ದರು. ಸಾಧಾರಣವಾಗಿ ಶಿವಮೊ... ಸಾಗರ ಮಂಡಿಗಳಲ್ಲಿ ವ್ಯವಹರಿಸುತ್ತಿದ್ದರು.

ಮಲೆನಾಡಿನ ಯುವತಿಯರು, ಲಂಗ ದಾವಣಿ, ಗೊಂಡೆ ಇರುವ ಜ... ಮುಂತಾದುವನ್ನು ಧರಿಸುತ್ತಿದ್ದರು. ವಿವಿಧ ಬಗೆಯ ಚಿನ್ನದ ಸರ (ಕಾಸಿನ ... ಲಕ್ಷ್ಮೀಸರ.....) ಡಾಬು (ಸೊಂಟಕ್ಕೆ), ಮತ್ತಿತರ ಸಹಜ ಅಲಂಕಾರವ... ಮಲೆನಾಡಿನ ಸ್ತ್ರೀಯರು ಮಾಡಿಕೊಳ್ಳುತ್ತಿದ್ದರು.

ಈಗ ಮಲೆನಾಡಿನ ಜನರ ವಸ್ತ್ರ-ಭೂಷಣಗಳು, ನಗರಗಳಂತೆಯೇ ... ನಗರ ಪಟ್ಟಣಗಳ ಸುಲಭ ಸಂಪರ್ಕದ ಪರಿಣಾಮ ಇದಾಗಿರಬಹುದು.

ಅಡಗಿತೆಲ್ಲಿ..... ಹಾಡಿ ಕುಣಿಯುವ ಮನಸು?

ಕತ್ತಲು ಕವಿಯುತ್ತಿರುವಂತೆ ರಾಮಾಧ್ಯಾನ ಮಾಡ್ರೋ ಅಂತಲೋ, ಭಜನೆ ಮಾಡ್ರೋ..... ಅಂತಲೋ ಹಿರಿಯರು ಹೇಳುತ್ತಿದ್ದರು. ಕೈಕಾಲು ತೊಳೆದು ದೇವರ ಮುಂದೆ ಕುಳಿತು ಸ್ವಲ್ಪಕಾಲ ಭಜನೆ ಮಾಡಿದರೆ ಮನಸ್ಸಿಗೇನೋ ಆನಂದ. ಹೊಸ ಹುರುಪು! ಈ ಅನುಭವ ಎಲ್ಲರಿಗೂ ಬಂದಿರುತ್ತಾದರೂ, ಮಲೆನಾಡಿನ ಮನೆಗಳಲ್ಲಿ ಈಗೀಗ ಭಜನಾ ಕಾರ್ಯಕ್ರಮ ಮರೆಯಾಗುತ್ತಿದೆ. ಮನೆ ಮಂದಿಯೆಲ್ಲಾ ಒಟ್ಟಾಗಿ ಒಕ್ಕೊರಲಿನಲ್ಲಿ ಹಾಡುವುದೆಷ್ಟು ಚೆಂದ! ದೇವರ ಬಗೆಗಿನ ನಂಬಿಕೆ ಅತ್ತಟ್ಟಿಗಿರಲಿ. ಈ ಭಜನೆಯ ಕ್ರಿಯೆ ಮನಸ್ಸಿಗೆ ಆಹ್ಲಾದವನ್ನು ಉಂಟು ಮಾಡುವುದು ಸತ್ಯ. ದೇವರ ಬಗ್ಗೆ ನಂಬಿಕೆ ಇದ್ದರೆ ಒಳ್ಳೆಯದು. ನಂಬಿಕೆ ಆತ್ಮ ಬಲವನ್ನು ಹೆಚ್ಚಿಸುತ್ತದೆ. ವ್ಯಕ್ತಿ ವಿಕಾಸ ಕೇಂದ್ರ, ಸಿದ್ಧಿ ಸಮಾಧಿ ಯೋಗ ಮುಂತಾದ ಸಂಸ್ಥೆಗಳು, ಆಶ್ರಮಗಳು ನಡೆಸುವ ಕಾರ್ಯಕ್ರಮದಲ್ಲಿ ಭಜನೆಗೂ ಒಂದು ಪ್ರಮುಖ ಸ್ಥಾನ ಇದೆ. ಭಜನೆ ಮಾಡುತ್ತಾ ಭಾವಪರವಶತೆಯಿಂದ ನರ್ತಿಸುವುದೂ ಉಂಟು. ಬದುಕು ಅಂದರೆ ಏನೇನೋ ಕಲ್ಪನೆಗಳನ್ನು ಮಾಡಿಕೊಳ್ಳುತ್ತೇವೆ, ಆದರೆ ಬದುಕು ಈ ಕ್ಷಣಗಳಲ್ಲೇ ಇದೆ. ಈಗ ನಾವು ಹಾಡಿ ಕುಣಿಯಬಹುದು. ಏಕೆಂದರೆ ನಮಗೆ ಜೀವ ಇದೆ. ಈ ಕ್ಷಣಗಳನ್ನು ನಾವು ಆನಂದಿಸಬಹುದು! ಭಜನೆಯನ್ನು ಜನಪ್ರಿಯಗೊಳಿಸುವ ಪ್ರಯತ್ನವನ್ನು ಭಜನಾ ಮಂಡಳಿಗಳೂ ಮಾಡುತ್ತವೆ. ಭಜನೆಯಿಂದ ಉಚ್ಚಾರಣೆ ಸ್ಪಷ್ಟವಾಗುತ್ತದೆ. ನಾಲಗೆ ಚೆನ್ನಾಗಿ ಹೊರಳುತ್ತದೆ. ಏಕಾಗ್ರತೆಗೂ ಒಳ್ಳೆಯದು. ಕನಿಷ್ಠ ಹತ್ತು ನಿಮಿಷದ ಧ್ಯಾನ ಮನಸ್ಸನ್ನು ಶುಚಿಗೊಳಿಸಬಲ್ಲದು. ಆದರೆ ಇದನ್ನು ರೂಢಿ ಮಾಡಿಕೊಳ್ಳುವುದೇ ಬಹಳ ಕಷ್ಟ. ಇಸ್ಪೀಟ್ ಆಡಲು, ಗೆಳೆಯರ ಜೊತೆ ಪಾರ್ಟಿ ಮಾಡಲು ಸಮಯವನ್ನು ಹೊಂದಿಸಿಕೊಳ್ಳಬಹುದು. ಆದರೆ ಭಜನೆ, ಧ್ಯಾನ ಇವೆಲ್ಲಾ ಬೋರ್ ಅಂತ ಅನ್ನಿಸುವುದುಂಟು. ರೂಢಿ ಮಾಡಿಕೊಂಡು ದೊರೆಯುವ ಆನಂದವನ್ನು ಅನುಭವಿಸಿದರೆ ಈ ಒಳ್ಳೆಯ ಅಭ್ಯಾಸಗಳು ಬದುಕಿನಲ್ಲಿ ಬಹಳ ಸಹಾಯ ಮಾಡುತ್ತವೆ ಅನ್ನುವುದಂತೂ ಸತ್ಯ. ಈಗ ಹತ್ತು ನಿಮಿಷ ಸುಮ್ಮನೆ ಕುಳಿತು ಬಿಡೋಣ. ಏನೇನು ಯೋಚನೆಗಳು ಬರುತ್ತವೋ ಅದರ ಪಾಡಿಗೆ ಬಂದು ಹೋಗಲಿ..... ಏನಂತೀರಿ?

ಎಲ್ಲಿ ತೀರ್ಥರೂಪ..... ಹಲೋ ಹಲೋ.....

ಕತ್ತಲು ಕವಿಯುತ್ತಿರುವಂತೆ ನಾಯಿ ಬೊಗಳಿದ ಸದ್ದಾಗುತ್ತದೆ! ಟಾ ಹಿಡಿದ ವ್ಯಕ್ತಿಯೊಬ್ಬ ಬಂದು ಜಗುಲಿಯಲ್ಲಿ ಕುಳಿತು ಕೈಚೀಲದಿಂದ ದಿನ ಮತ್ತಿತರ ಕಾಗದ ಕೊಡುತ್ತಾನೆ. ದೀಪ ಹಿಡಿದು ಪಕ್ಕ ಹೋಗಿ ಅಪ್ಪಯ್ಯ ಅದ ತೆಗೆದುಕೊಳ್ಳುತ್ತಾರೆ, ಆಸಕ್ತಿಯಿಂದ ಪತ್ರಿಕೆ ಓದತೊಡಗುತ್ತಾರೆ. ಅವರು ಓದು ನಿನ್ನೆಯ ಬಿಸಿ ಬಿಸಿ ಸುದ್ದಿ!

ಆ ದಿನಗಳಲ್ಲಿ ಸಂಪರ್ಕ ವ್ಯವಸ್ಥೆ ಚೆನ್ನಾಗಿರಲಿಲ್ಲವಾದ್ದರಿಂದ ಪಕ್ಕದ ಎಸ್ಟೇ ಕೆಲಸಗಾರನೇ ಅಂಚೆಯ ಅಣ್ಣನ ಪಾತ್ರ ವಹಿಸುತ್ತಿದ್ದ. ಅವನು ಆರೇಳು ಮ ದೂರದ ಪಟ್ಟಣಕ್ಕೆ ಕಾಲ್ನಡಿಗೆಯಲ್ಲಿ ಹೋಗಿ ಬಂದು ಗ್ರಾಮದ ಮನೆಗ ಟಪಾಲು ಹಂಚುತ್ತಿದ್ದ. ಅವನು ಬಂದಾಗ ಒಂದು ಮುಷ್ಠಿ ಅಡಿಕೆ, ಬೆರಳು ಹೊಗೆ ಸೊಪ್ಪು, ಅವನಿಗೆ ಕೊಡಬೇಕೆಂದು ನಮಗೆ ಗೊತ್ತಿತ್ತು! ಇದ್ರೆ ಒಂ ಲೋಟ ಕಾಫಿ! ಸಾಮಾನ್ಯವಾಗಿ ಇದ್ದೇ ಇರುತ್ತಿತ್ತು. ಒಲೆಯಿಂದ ಕೆಂಡ ಹೆ ಒಂದು ತಂಬಿಗೆ ಕಾಫಿ ಅದರ ಮೇಲೆ ಇಡುತ್ತಿದ್ದರು. ಬಂದವರಿಗೆಲ್ಲ ಬೆಚ್ಚ ಕಾಫಿ!

ಹತ್ತಿರದ ಬಂಧುಗಳದ್ದೋ, ಮದುವೆಯಾಗಿ ಹೋದ ಅಕ್ಕಂದಿರದ್ದೋ ಪತ್ರ ಬಂದರೆ ನಮಗೆಲ್ಲಾ ಖುಷಿ. ಆ ಪತ್ರಗಳಲ್ಲಿ ಮನೆಯವರ ಯೋಗಕ್ಷೇ ಮಾತ್ರವಲ್ಲದೆ ನೆರೆಹೊರೆಯವರ ಮತ್ತು ದನಕರುಗಳ ಯೋಗಕ್ಷೇಮವನ ವಿಚಾರಿಸುತ್ತಿದ್ದರು. ಆ ಪತ್ರಗಳಲ್ಲಿ ನಮ್ಮ ಹೆಸರು ಬಂದಾಗ ನಮ್ಮ ಮು ಅರಳುತ್ತಿತ್ತು. ದೂರವಾಣಿ ಬಂದ ಮೇಲೆ ಪತ್ರಲೇಖನ ಕಡಿಮೆಯಾಗಿದೆ. ತೀ ಅಂತಲೋ 'ತೀರ್ಥರೂಪ' ಅಂತಲೋ ಆರಂಭವಾಗುವ ಪತ್ರಗಳ ಸಂ ಈಗ ಅಪರೂಪ. ಹಲೋ ಹಲೋವಿನಲ್ಲೇ ಉಭಯ ಕುಶಲೋಪರಿ!.. ಮಲೆನಾಡಿನಲ್ಲಿ ಅಂಚೆ ತರುವವನ ಹತ್ತಿರ ಅಗತ್ಯಕ್ಕೆ ಬೇಕಾದ ಸಾಮಾನುಗಳನ ತರಿಸುತ್ತಿದ್ದರು. ನಮಗೆ ಬಳಪ, ಸ್ಲೇಟು, ಕಾಪಿ ಪುಸ್ತಕ ಮುಂತಾದವ ತಂದುಕೊಡುತ್ತಿದ್ದ. ಹೊಸ ಪಠ್ಯಪುಸ್ತಕಗಳು ಬಂದಾಗ ಅದನ್ನು ಓದುವುದಕ್ಕ ಮೂಸಿ ನೋಡುವುದಕ್ಕೆ ಖುಷಿ ಎನಿಸುತ್ತಿತ್ತು! ಅಂಚೆ ತರುವ ಅವನೇ ಸ್ಥಳೀ

ಮಾಚಾರಗಳನ್ನು ಹೊತ್ತು ತರುತ್ತಿದ್ದ. ಗ್ರಾಮದ ಮನೆಗಳಿಗೆ ಸಂಪರ್ಕ
ೇತುವಾಗಿದ್ದ! ಕಾಂಪೌಂಡಿನಾಚೆಗೆ ರಸ್ತೆ ಬದಿಯಲ್ಲಿ ಸೈಕಲ್ ನಿಲ್ಲಿಸಿಕೊಂಡು
ತ್ರಿಕೆಯನ್ನು ಮನೆಯತ್ತ ಎಸೆದು ಹೋಗುವವರನ್ನು ಕಂಡಾಗ ಅವನು
ನಪಾಗುತ್ತಾನೆ. ಮನೆ ಮನೆಗೆ ಪತ್ರ ಹಂಚಿ, ಊರವರ ಯೋಗಕ್ಷೇಮ
ವಿಚಾರಿಸಿಕೊಂಡು ನಗುನಗುತ್ತಲೇ ಕಾಲ್ನಡಿಗೆಯ ಕಾಯಕ ಮಾಡುತ್ತಿದ್ದ ಅವನಿಗೆ
ಅಂಚೆಯ ಅಣ್ಣ' ಅನ್ನುವುದೇ ಚಂದ!

ಬರಲಿ ಕಲ್ಪನಾ ವಿಲಾಸ

ರಾತ್ರಿ ಬಹಳ ಹೊತ್ತಿನವರೆಗೆ ಅಡಿಕೆ ಸುಲಿಯುವಾಗ ಹಿಂದೆಲ್ಲಾ
ಕಳೆಯಲು ಒಗಟು, ಜಾನಪದ ಕಥೆಗಳನ್ನು ಹೇಳುತ್ತಿದ್ದರು. ಕೆಲಸದೊ
ಮನರಂಜನೆಯನ್ನೂ ಪಡೆಯುತ್ತಿದ್ದರು. ಒಬ್ಬೊಬ್ಬರೂ ಅದ್ಭುತ ಒಗಟು-ಕ
ಕಣಜಗಳೇ ಆಗಿರುತ್ತಿದ್ದರು, ಆ ಕತೆಗಳಲ್ಲಿ ಬರುವ ಸುಂದರ ರಾಜಕುಮ
ಭಾರೀ ಅರಣ್ಯ, ಭಯಂಕರ ರಾಕ್ಷಸ, ಮುಂತಾದ ಪಾತ್ರ, ದೃಶ್ಯಗ
ಊಹಿಸುವುದು ಕೇಳುಗರ ಕಲ್ಪನಾ ಶಕ್ತಿಗೆ ಬಿಟ್ಟಿದ್ದು! ಹಕ್ಕಿ ಹಾವಾಗುವ
ನಾಯಿ ಮುಂಗುಸಿಯಾಗುವುದು, ಅಂತೂ ಅಂತ್ಯದಲ್ಲಿ ಸತ್ಯಕ್ಕೆ ಪ್ರೇ
ಗೆಲುವಾಗುವುದು!

ಈಗ ಎಲ್ಲೆಡೆ ವಿದ್ಯುತ್ ಬಂದಿದೆ, ಬೇಸರ ಕಳೆಯಲು ರೇಡಿಯೋ,
ಗಳಿವೆ.

ಕತೆ ಅಂದರೆ ಯಾವುದಾದರೂ ಸಿನಿಮಾ ಕತೆ ಹೇಳುವುದೇ ಹ
ಆದರೆ ಅವತ್ತಿನ ತಲೆಕೆಡಿಸುವ ಒಗಟುಗಳು, ಮನದಾಳದ ಕಲ್ಪನಾ ಶಕ್ತಿಯ
ಕದಡುವ ಕತೆಗಳು ವಿರಳವಾಗುತ್ತಿವೆ! ಆಶ್ಚರ್ಯವೆಂದರೆ ಆವತ್ತಿನ ಕಾಲ್ಪ
ಕತೆಗಳೇ ಇಂದು ಅತ್ಯಂತ ಯಶಸ್ವಿ ಸಿನಿಮಾಗಳಾಗಿ ಬರುತ್ತಿವೆ. ಹ್ಯಾರಿ ಪಾಟ
ದಿ ಮಮ್ಮಿ ಹೆಲ್ಸಿಂಗ್ ಮುಂತಾದ ಪಾಶ್ಚಾತ್ಯ ಚಿತ್ರಗಳು ರತ್ನಗಿರಿ ರಹ
ಮಹಾಮಾಯೆಯಂತಹ ಕನ್ನಡ ಧಾರಾವಾಹಿಗಳು ಇದಕ್ಕೆ ಉದಾಹರ
ತಾಂತ್ರಿಕತೆ ಎಷ್ಟೊಂದು ಬೆಳೆದಿದೆ ಅಂದರೆ ಕೆಲವು ಚಿತ್ರ ನೋಡಿದ
ವಿಸ್ಮಯವಾಗುತ್ತದೆ! ಆದರೆ ಇಡೀ ಚಿತ್ರ ನಿರ್ದೇಶಕನ ಕಲ್ಪನೆಯ ಮೂಸೆ
ಮೂಡಿರುತ್ತದೆ. ನಮ್ಮ ಕಲ್ಪನೆಗಿಲ್ಲಿ ಕೆಲಸವಿಲ್ಲ. ಒಂದು ಮಾತು ಸತ್ಯ,
ದೇಶವಿರಲಿ, ವಿದೇಶವಿರಲಿ, ಮಾನವೀಯ ಧರ್ಮ, ಅದು ಒಂದೇ.
ಸತ್ಯ-ಪ್ರೇಮ ಮತ್ತು ಅದರ ಗೆಲುವು. ಆದರೆ ಆದರ್ಶದ ಕಠಿಣ ಹಾದಿ
ಎದುರಿಸಬೇಕಾದ ಸಮಸ್ಯೆಗಳು ಅನೇಕ! ಎದುರಿಸಿದಾಗ ಬದುಕು ಸಾಧ

ಮನೆಯೊಳಗೆ ಗುಬ್ಬಿಗೂಡು!

ಮನೆಯಲ್ಲಿ ನಮ್ಮೊಂದಿಗೆ ವಾಸ ಮಾಡುತ್ತಿದ್ದ ಪಕ್ಷಿ ಗುಬ್ಬಚ್ಚಿ! ಮಲೆನಾಡಿನ ನೆಗಳ ಚಾವಡಿಯಲ್ಲಿ, ಅಲಂಕರಿಸಿ ಜೋಡಿಸಲ್ಪಟ್ಟ ಫೋಟೋಗಳ ಸಾಲಿನ ಂದೆ ಇವುಗಳ ಗೂಡು! ಹುಲ್ಲು ತಂದು ಬೆಚ್ಚಗಿನ ಗೂಡುಕಟ್ಟಿ ಆಗಾಗ ನೆಯೊಳಗೆ ಅತ್ತಿಂದಿತ್ತ ಹಾರಾಡುವ ಈ ಗುಬ್ಬಚ್ಚಿಗಳು ಈಗ ಕಣ್ಮರೆಯಾಗುತ್ತಿವೆ.

ಮುದ್ದು ಮಟಾಣಿಗಳನ್ನು ನನ್ನ ಪ್ರೀತಿಯ ಗುಬ್ಬಚ್ಚಿ ಮರಿ ಅನ್ನುವುದುಂಟು! ಪುಟ್ಟ, ಪಾಪದ ಪಕ್ಷಿ ನೋಡಲು ಚೆಂದ! ಬಾಲ್ಯದಲ್ಲಿ ಹಲವು ಕಾಗೆ ಗುಬ್ಬಿ ತೆಗಳನ್ನು ಕೇಳುತ್ತಾ, ಮನದಲ್ಲಿ ಗುಬ್ಬಿಯ ಬಗ್ಗೆ ಒಂಥರಾ ಪ್ರೀತಿ..... ಸಹನೆ. ಾಮಾನ್ಯವಾಗಿ ಕಾಗೆಗೆ ಖಳನಾಯಕಿ ಪಾತ್ರ.

ಶ್ರಾದ್ಧದ ದಿನಗಳಲ್ಲಿ ಕಾಗೆಗಳನ್ನು ಕಾ ಕಾ ಎಂದು ಕೂಗಿ ಕರೆಯುವುದು ಬಿಟ್ಟರೆ ಉಳಿದಂತೆ ಅವುಗಳೆಡೆ ತಿರಸ್ಕಾರ. ಅಂಗಳದಲ್ಲಿ ಹಲಸಿನ ಹಪ್ಪಳ ಒಣಗಲು ಹಾಕಿದಾಗ ಕಾಗೆ ಒಯ್ಯದ ಹಾಗೆ ಕಾಯುವುದೇ ನಮಗೆ ಕೆಲಸ. ಮಲೆನಾಡಿನಲ್ಲಿ ವಿವಿಧ ಪಕ್ಷಿಗಳಿದ್ದರೂ ಕಾಗೆ ಗುಬ್ಬಚ್ಚಿಗಳಷ್ಟು ಉಳಿದವು ಪರಿಚಿತವಲ್ಲ. ನಮ್ಮ ಬಾಲ್ಯದಲ್ಲಿ ಕಾಗಕ್ಕ ಗುಬ್ಬಕ್ಕನ ಕತೆ ಕೇಳುತ್ತಾ ಅವುಗಳ ಹಾರಾಟ ನೋಡುತ್ತಾ ಬೆಳೆದ ನಮಗೆ ಸಹಜವಾಗಿಯೇ ಗುಬ್ಬಿಯ ಬಗ್ಗೆ ಒಂಥರಾ ಪ್ರೀತಿ! ಗಿಳಿ–ಮೊಲ–ನವಿಲು ಹೀಗೆ ಕೆಲವು ಪ್ರಾಣಿ ಪಕ್ಷಿಗಳನ್ನು ಕೆಲವರು ಮನೆಯಲ್ಲಿ ಸಾಕುತ್ತಾರೆ. ಸಾಮಾನ್ಯವಾಗಿ ಸಾಕು ಪ್ರಾಣಿಗಳಾದ ನಾಯಿ, ಬೆಕ್ಕುಗಳನ್ನು ಎಲ್ಲ ಮನೆಗಳಲ್ಲೂ ಕಾಣಬಹುದು.

ಪೂಜಿಸಲೆಂದೇ ಹೂಗಳ ತಂದೆ

ಬಾಲ್ಯದಲ್ಲಿ ದಿನವೂ ಪೂಜೆಗೆ ಹೂ ಕುಯ್ಯುವುದು ನಮ್ಮ ಕೆಲಸವಾ
ಈ ಪುಟ್ಟ ಕ್ರಿಯೆಯಲ್ಲಿ ಪರಿಸರವನ್ನು ಅರ್ಥಮಾಡಿಕೊಳ್ಳುವ ಪ್ರಾಥಮಿಕ ಪಾ
ಇರುತ್ತಿತ್ತು. ಅರಿವಿಲ್ಲದಂತೆ ಅದು ಸಸ್ಯಸಂಕುಲ, ವಿವಿಧ ಕ್ರಿಮಿ, ಕೀಟ, ಜೀವರಾ
ಪರಿಚಯ ಮಾಡಿಸುತ್ತಿತ್ತು. ಬುಟ್ಟಿಯ ತುಂಬಾ ಹೂ ಕುಯ್ಯಲು
ಹೂವುಗಳನ್ನರಸಿ ಪೊದೆಗಳಲ್ಲಿ ನುಗ್ಗುತ್ತಿದ್ದೆವು, ಬೇಲಿಗಳನ್ನು ಜಿಗಿಯುತ್ತಿದ್ದ
ಹೊಂಡಗಳನ್ನು ಹಾರುತ್ತಿದ್ದೆವು. ತರತರದ ಬಣ್ಣ ಬಣ್ಣದ ಹೂಗಳು! ಬೆಟ್ಟದಾ
ದಾಸವಾಳ, ನಂದಬಟ್ಟಲು, ಗೊರಟೆ, ತುಂಬೆ, ಆನ್‌ದುಂಬೆ, ಕಣಗಲೆ, ಕಾಬ್ರ
ರತ್ನಗಂಧಿ, ಮಧ್ಯಾಹ್ನ ಮಲ್ಲಿಗೆ, ಸುಗಂಧ ರಾಜ, ಸಂಪಿಗೆ, ಜಾಜಿ, ಸೇವಂ
ಗುಲಾಬಿ, ಕನಕಾಂಬರ, ಮಲ್ಲಿಗೆ ಹೀಗೆ ಸಿಕ್ಕ ಹೂಗಳನ್ನು ಬುಟ್ಟಿಗೆ ತುಂ
ಕೊನೆಗೆ ಒಂದಿಷ್ಟು ತುಳಸಿ ಕುಡಿ ಕೊಯ್ದು ದೇವರ ಮುಂದಿಟ್ಟರೆ ನಮ್ಮ ಕೆ
ಆಯ್ತು. ಒಂದು ವೇಳೆ ಈ ಕೆಲಸ ಮಾಡಲು ಮರೆತಿದ್ದರೆ ಅಪ್ಪಯ್ಯ ಸ್ನಾನಕ್ಕಿಳಿದ
ಅಂತ ಗೊತ್ತಾದರೆ ಓಡೋಡಿ ಹೋಗಿ ನಾಲ್ಕಾರು ಹೂ ಕೊಯ್ದು ತಂ
ಬೇಕಾಗುತ್ತಿತ್ತು. ಹೂ ಕೊಯ್ಯುವಾಗ ಅದು ನೆಲಕ್ಕೆ ಬೀಳದಂತೆ ಜಾ
ವಹಿಸಬೇಕಾಗುತ್ತಿತ್ತು. ನೆಲಕ್ಕೆ ಬಿದ್ದದ್ದು ದೇವರಿಗೆ ಅರ್ಹವಲ್ಲ ಎಂಬ ಭಾವ
ತುಂಬ ಸುಂದರವಾಗಿಯೂ ಯಥೇಚ್ಛವಾಗಿಯೂ ಇದ್ದ 'ಚೆಂಡು' ಹೂ
ದೇವರಿಗೆ ಏಕೆ ಅರ್ಹವಲ್ಲ ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತಿತ್ತು. (ಅದೇನಿದ
ದೀಪಾವಳಿ ಸಮಯದಲ್ಲಿ ದನಗಳ ಕೊರಳಿಗೆ ಮಾಲೆ ಮಾಡಿಹಾಕ
ಬಳಸುತ್ತಾರೆ). ಹೂಗಿಡಗಳಿರದ ಮನೆಯಂಗಳಗಳೇ ಮಲೆನಾಡಿನಲ್ಲಿಲ್ಲ. ಹೂ
ಕೊಯ್ಯುವಾಗ ಆಯ್ಕೆಯ ಸ್ವಾತಂತ್ರ್ಯ ನಮ್ಮದೇ! ಅರಳಿದ ಕಮಲದ ಹೂ
ಗಿಡದಲ್ಲಿದ್ದರೇ ಚಂದ ಅಂತ ಬಿಟ್ಟು ಬಿಡುತ್ತಿದ್ದೆವು. ಹಸಿರು ಹಾವು, ಓತಿಕ್ಯಾ
ಕಪ್ಪೆ, ಏಡಿಗಳನ್ನು ಗಮನಿಸುತ್ತಾ ಅಲ್ಲಲ್ಲಿ ನಿಂತುಬಿಡುತ್ತಿದ್ದೆವು. ಹೂವು ಕಟ
ಜಾಣ್ಮೆಯ ಕಲೆ ಮಲೆನಾಡಿನ ಮಹಿಳೆಯರಿಗೆ ಕರಗತ. ಹಿಂದೆ ಬಾಳೆನಾರಿ
ಹೂವು ಕಟ್ಟುತ್ತಿದ್ದುದೂ ಉಂಟು. ಶಿವನಿಗೆ ತುಂಬೆ ಇಷ್ಟ, ವಿಷ್ಣುಗೆ ತುಳಸಿ
ಎಂಬುದೆಲ್ಲ ಹೌದೋ ಸುಳ್ಳೋ, ಅಂತೂ ಮಲೆನಾಡಿನ ತರತರದ ಹೂ
ತುಂಬಾ ಚಂದ ಮತ್ತು ವಿಶಿಷ್ಟ!

ಅದೇನು ನಿನ್ನ ಹೆಂಡ್ತಿಗೆ ಬಿಟ್ಯಾ.....?

ನಾವು ಚಿಕ್ಕವರಾಗಿದ್ದಾಗ ಮೂರು ಹೊತ್ತು ಉಪಯೋಗಿಸುತ್ತಿದ್ದುದು ಬಾಳೆ ಎಲೆ. ಕ್ರಮೇಣ ತಟ್ಟೆಗಳು ಬಳಕೆಗೆ ಬಂದವು. ಬೆಳಗಿನ ತಿಂಡಿಗೆ ಸಿಗಳು ಬಾಳೆ ಎಲೆ, ಊಟಕ್ಕೆ ಕುಡಿ ಬಾಳೆ ಎಲೆ. ಬಾಳೆ ಎಲೆ ಕಾಸಿ ಒರೆಸಿ ಊಟಕ್ಕೆ ಸಿದ್ಧಗೊಳಿಸಲಾಗುತ್ತದೆ. ಹಬ್ಬಗಳಲ್ಲಿ ಈ ಬಾಳೆ ಎಲೆಯ ತುಂಬ ತುಂಬಿಕೊಳ್ಳುವ ವ್ಯಂಜನಗಳನ್ನು ನೋಡಲಿಕ್ಕೆ ಚಂದ! ಉಪ್ಪು, ಉಪ್ಪಿನಕಾಯಿ, ಕೋಸಂಬರಿ, ಚಟ್ನಿ, ವಿವಿಧ ಪಲ್ಯ, ಮಜ್ಜಿಗೆ ಹುಳಿ, ಕಾಯಿರಸ, ಪಾಯಸ, ಚಿತ್ರಾನ್ನ, ಎಲ್ಲವನ್ನೂ ಬಡಿಸಿದ್ದಾಗ ಷಡ್ರಸೋಪೇತ ಭೋಜನ ಬಾಯಲ್ಲಿ ನೀರೂರಿಸದೇ ಬಿಟ್ಟೀತೇ..? ಬಾಳೆ ಎಲೆಯೇ ಮೆನು ಕಾರ್ಡ್‌ನ ಹಾಗೆ! ನೋಡಿದರೇ ಊಟಕ್ಕೆ ಏನೆಲ್ಲಾ ಇದೆ ಎಂದು ಅರಿವಾಗಿ ಬಿಡುತ್ತದೆ.

ಕೆಲಸದವರು ಊಟಕ್ಕೆ ಅಡಿಕೆ ಹಾಳೆ ಕಟ್ಟುತ್ತಿದ್ದರು. ಎಷ್ಟು ಸುಂದರವಾಗಿ ಕಟ್ಟುತ್ತಿದ್ದರೆಂದರೆ ನಮಗೂ ಅಡಿಕೆ ಹಾಳೆಯಲ್ಲಿ ಊಟ ಮಾಡಬೇಕೆಂಬ ಮನಸ್ಸಾಗುತ್ತಿತ್ತು. ದೊಡ್ಡವರು ಬೈಯುತ್ತಾರೆಂದು ನಮ್ಮ ಅನಿಸಿಕೆಯನ್ನು ವ್ಯಕ್ತಪಡಿಸುತ್ತಿರಲಿಲ್ಲ. ಕೆಲವೊಮ್ಮೆ ಹೊಂಬಾಳೆಯನ್ನು ಉಪಯೋಗಿಸಿ ಖುಷಿ ಪಡುತ್ತಿದ್ದೆವು.

ಊಟ ಮಾಡುವಾಗ ಬಡಿಸಿದ್ದನ್ನೆಲ್ಲಾ ಖಾಲಿ ಮಾಡಲು ಪೈಪೋಟಿ! ಬಾಳೆ ಎಲೆಯಲ್ಲಿ ಅನ್ನ ಬಿಟ್ಟರೆ, ಅದೇನು ನಿನ್ನ ಹೆಂಡ್ತಿಗೆ ಬಿಟ್ಯೇನಾ ಅಂತ ರೇಗಿಸುತ್ತಿದ್ದರು. ಗಂಡನ ಊಟವಾದ ಮೇಲೆ ಅದೇ ಬಾಳೆ ಎಲೆಯಲ್ಲಿ ಹೆಂಡತಿ ಊಟ ಮಾಡುತ್ತಿದ್ದಳೇ ಹೊರತು ಇಬ್ಬರೂ ಒಟ್ಟಾಗಿ ಊಟ ಮಾಡುತ್ತಿರಲಿಲ್ಲ. ಎಲ್ಲಾದರೂ ಹೋಗುವಾಗಲೂ ಗಂಡನ ಹಿಂದೆ ಹೆಂಡತಿ! ಜೊತೆಗಲ್ಲ. ಆಗ ಹಳ್ಳಿ ದಾರಿಗಳೂ ಜೊತೆಗೆ ಹೋಗುವ ಹಾಗಿರಲಿಲ್ಲ ಬಿಡಿ!

ಲಾಭ ಎರಡು..... ಆರು ಮತ್ತೊಂದು!

ದೇವರಿಗಿಟ್ಟ ಹೂವು ಬಲಕ್ಕೆ ಪ್ರಸಾದವಾದಂತೆ. ಎಷ್ಟೋ ಮದುವೆ ಪ್ರಸಾದ ನೋಡಿ ಜರುಗುತ್ತವೆ. 'ಶುಭ ನುಡಿಯೇ ಶಕುನದ ಹಕ್ಕಿ' ಎಂ ಮನಸ್ಸು ಹಾಡಬಯಸಿದರೂ ಅಶುಭಗಳು ಬದುಕಿನಲ್ಲಿ ಅನಿರೀಕ್ಷಿತವಾ ಎದುರಾಗುವುದು ಕಟುಸತ್ಯ! ಶಕುನಗಳಿಗೆ ಕಂಸ ತತ್ತರಿಸಿ ಹೋದ! ಸೀಸ ಪತ್ನಿ ಬೆಚ್ಚಿ ಬಿದ್ದಳು. ಶಕುನಗಳ ಬಗ್ಗೆ ನಂಬಿಕೆ ಮಲೆನಾಡಿನಲ್ಲೂ ಇ ಯಾರಾದರೂ ಪ್ರಯಾಣಕ್ಕೆ ಹೊರಟು ನಿಂತಾಗ ಎಲ್ಲಿಗೆ? ಅಂತ ಕೇಳಿ ಹೊರಟ ಕೆಲಸ ಆಗುವುದಿಲ್ಲವೇನೋ ಎಂಬ ಆತಂಕ! ಮಾತಾಡುತ್ತಿರುವಾ ಹಲ್ಲಿ ಲೊಚಗುಟ್ಟಿದರೆ ಸತ್ಯ. ಬೆಕ್ಕು ಅಡ್ಡಬಂದರೆ ಒಳಿತಲ್ಲ. ಮನೆ ಮೇಲೆ ಕಾ ಕೆಟ್ಟದಾಗಿ ಕೂಗಿದರೆ, ನಾಯಿ ಒಂದೇ ಸಮನೆ ಊಳಿಟ್ಟರೆ ಅಶುಭ ವಾತ ಬರಬಹುದೆಂಬ ಚಿಂತೆ. ಬಾಳೆಕಾಯಿ ಸಾಂಬಾರನ್ನು 'ಕಲ್ಯಾಣ ಬಾಳೆಕಾ ಹುಳಿ ಎನ್ನಬೇಕು. ಅಡಿಕೆ ಚಪ್ಪರದಲ್ಲಿ ನೆಲ್ಲಿಕಾಯಿ ಹೆಸರು ಹೇಳುವು ಒಳ್ಳೆಯದಲ್ಲ. ಒಂಟಿ ಸೀನು ಅಪಶಕುನ. ಊಟಕ್ಕೆ ಕುಳಿತಾಗ ಬಿಕ್ಕಳಿಕೆ ಬಂದ ಯಾರೋ ನೆನಪು ಮಾಡಿಕೊಂಡಂತೆ. ಕಾಲು ತೊಳೆದಾಗ ಹಿಮ್ಮ ನೆನೆಯಲೇಬೇಕು, ಇಲ್ಲವಾದರೆ ಶನಿ ಹಿಡಿಯುತ್ತದೆ. ಒಲೆಯ ಮುಂದೆ ಅಂಗಾ ಕಾಸಬಾರದು. ಹೀಗೆ ಹತ್ತು ಹಲವಾರು ನಂಬಿಕೆಗಳು ಮಲೆನಾಡಿನಲ್ಲಿವೆ.

ಅಡಿಕೆ ಬೇಯಿಸಿ, ಒಳಗಿರಿಸಿ ಆರಿಸಿದ ನಂತರ ಅದನ್ನು ತೂಕ ಮಾ ಚೀಲಕ್ಕೆ ತುಂಬುವಾಗ ಒಂದು ಎರಡು ಹೇಳುವ ಕ್ರಮವೇ ಬೇರೆ. ಮೊದ ತಕ್ಕಡಿ ತೂಗಿದಾಗ ಲಾಭ, ನಂತರ ಎರಡು, ಹಾಗೆಯೇ ಆರಾದ ನಂತ ಮತ್ತೊಂದು ಎನ್ನುತ್ತಾರೆ. ಪತ್ರದ ಆರಂಭದಲ್ಲಿ ಕ್ಷೇಮ, ಶ್ರೀ ಇಲ್ಲದೆ ಬೋಳ ಪತ್ರವಾದರೆ ಅದರಲ್ಲಿ ಅಶುಭ ಸಮಾಚಾರವಿದೆಯೆಂದೇ ಅರ್ಥ. ಮನೆಯ ಜೇಡ ಬಲೆ ಕಟ್ಟಿದಾಗ ಗುಡಿಸಿ ತೆಗೆಯದಿದ್ದರೆ ಸಾಲ ಹೆಚ್ಚುತ್ತದೆ. ಬೆಳಿಗ್ಗೆ ಬಹ ಹೊತ್ತು ಮಲಗುವುದು, ಮುಖ ತೊಳೆಯದೇ ಕಾಫಿ ಕುಡಿಯುವುದು ದಾರಿದ್ರ್ಯ ಮುಸ್ಸಂಜೆ ಹೊತ್ತಿನಲ್ಲಿ ಮಲಗುವುದು ಒಳ್ಳೆಯದಲ್ಲ, ಹೀಗೆ ಪಟ್ಟಿ ಮಾಡುತ್ತಲೇ ಹೋಗಬಹುದಾದಷ್ಟು ನಂಬಿಕೆಗಳು – ಶಕುನಗಳು ಮಲೆನಾಡಿನ ಜನರಲ್ಲೂ

ಸಹಜವಾಗಿಯೇ ಇವೆ. ಕೆಲವು ನಂಬಿಕೆಗಳಿಗೆ ಅರ್ಥವಿರದೇ ಇರಬಹುದು. ಆದರೆ ಹಲವು ನಂಬಿಕೆಗಳು ಶಿಸ್ತಿನ ಜೀವನಕ್ರಮ ನಿರೂಪಿಸುವಲ್ಲಿ ಸಹಕಾರಿಯಾಗುತ್ತದೆ. ಒಟ್ಟಿನಲ್ಲಿ ಸದಾ ಶುಭವನ್ನೇ ಹಾರೈಸಬೇಕು. ಅಪ್ಪಿತಪ್ಪಿ ಬಾಯಲ್ಲಿ ಅರಿಯದೇ ಏನಾದರೂ ಕೆಟ್ಟ ಮಾತು ಬಂದರೆ 'ಒಳ್ತು' (ಒಳಿತು) ಎನ್ನುವುದುಂಟು. ಹಾಗಾಗದೇ ಇರಲಿ..... ಎಲ್ಲವೂ ಒಳಿತಾಗಲಿ ಎಂದೇ ಇದರರ್ಥ.

ಪರಿಣಿತ ಮತಿಗಳ್.....

"ಗದ್ದೋಡು ಉಪ್ಪಿನಕಾಯಾ..... ಆಹಾ!" ಅಂತ ಕೆಲವರ ಮನೆ ಉಪ್ಪಿನ ಕಾಯಿ ನೆನೆದೇ ಬಾಯಿ ಚಪ್ಪರಿಸುತ್ತಿದ್ದುದುಂಟು. ಮಲೆನಾಡಿನಲ್ಲಿ ಹ... ಕೆಲವರು, ಕೆಲವು ನಿರ್ದಿಷ್ಟ ಕೆಲಸ ಕಾರ್ಯಕ್ಕೆ ಎತ್ತಿದ ಕೈ. ಯಾವ... ಕಾರ್ಯವನ್ನಾದರೂ, ಶ್ರದ್ಧೆಯಿಂದ ಮಾಡಿ, ಕಾರ್ಯವನ್ನು ಕರಗ... ಮಾಡಿಕೊಂಡರೆ ಅದೇ ಹೆಗ್ಗಳಿಕೆ! ಹೀಗೆ ಮಾಡಿದ ಉಪ್ಪಿನ ಕಾಯಿಯ... ಪಿಂಗಾಣಿಯ ಭರಣಿಗಳಲ್ಲಿ ಶೇಖರಿಸಿ, ಬಿಗಿಯಾಗಿ ಮುಚ್ಚಿ, ಕೆಡದಂತೆ ಇಡುತ್ತಾ... ಹಾಗೇ ಕೆಲವರು ಜೇನು ಹಿಡಿಯುವುದರಲ್ಲಿ ತುಂಬಾ ನಿಷ್ಣಾತರಾಗಿರುತ್ತಾ... ಅವರ ಮನೆಯ ಸುತ್ತ ಸಾಕಷ್ಟು ಜೇನು ಪೆಟ್ಟಿಗೆಗಳು. ಜೇನು ಪೆಟ್ಟಿಗೆಯ ಮುಚ್ಚ... ಕೈ ಇಟ್ಟೊಡನೆ ಗುಯ್ ಗುಡುತ್ತ ಮುತ್ತುವ ನೂರಾರು ಹುಳಗಳು, ರಾತ್ರಿ... ಹೊತ್ತಲ್ಲಿ ಮರಕ್ಕೆ ಕಟ್ಟಿದ ಜೇನು ತೆಗೆಯಲು ಕೆಳಗೆ ಹೊಗೆ ಹಾಕಿ, ಜೇ... ಕೀಳುತ್ತಾರೆ. ಇದೊಂದು ಸಾಹಸವೇ ಸರಿ. (ಜೇನುಗಳು ದಾಳಿ ಇಟ್ಟ... ತಪ್ಪಿಸಿಕೊಳ್ಳುವುದು ಸುಲಭವಲ್ಲ!).

ಕೊನೆ ತೆಗೆಯುವುದು, ಹಾವು ಕಚ್ಚಿದ್ದಕ್ಕೆ ಔಷಧಿ ಕೊಡುವುದು ಮುಂತಾದ... ಎಲ್ಲರೂ ಮಾಡುವ ಕೆಲಸವಲ್ಲ. ಕೆಲವು ಎತ್ತುಗಳು ಹೋಟೆಗೆ ಬರಬೇಕೆಂದ... ಬೀಜ ಒಡೆಯುತ್ತಿದ್ದರು. ಎತ್ತಿನ ಕಾಲು ಕಟ್ಟಿ ಕೆಡವಿಕೊಂಡು, ಬೀ... ತೆಗೆಯುವುದು..... ಅಬ್ಬಾ! ಇದೇ ರೀತಿ ಎತ್ತಿನ ಕಾಲಿಗೆ ಲಾಳ ಹಾಕುತ್ತಿದ್ದ... ಹೀಗೆ ವಿಶಿಷ್ಟ ಕೆಲಸಗಳಲ್ಲಿ ಪರಿಣಿತರೆನಿಸಿಕೊಂಡವರು ಅಲ್ಲಲ್ಲಿ ಇರುತ್ತಾರೆ. ಇವ... ಸಾಕಷ್ಟು ಹೆಸರು. ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸರಿಸಾಟಿ ಇಲ್ಲದಂತೆ ನಿಷ್ಣಾತ... ಬೇಕೆಂಬುದಕ್ಕೆ ಇವರು ಉದಾಹರಣೆ.

ಸೊಗಡಿರದ ಸಂಭ್ರಮ

ಇತ್ತೀಚೆಗೆ ಮದುವೆ ನಿಶ್ಚಿತಾರ್ಥವೂ ವಿಡಿಯೋ ಕಾನ್‌ಫರೆನ್ಸಿಂಗ್ ರೀತಿಯಲ್ಲಿ ನಡೆದಿದ್ದನ್ನು ನೀವು ಪತ್ರಿಕೆಗಳಲ್ಲಿ ಓದಿರಬಹುದು. ಅಮೇರಿಕಾದಲ್ಲಿರುವ ಹುಡುಗ-ಹುಡುಗಿ ಅಲ್ಲಿಯೇ ಉಂಗುರ ಬದಲಾಯಿಸಿಕೊಂಡರು. ಬಂಧುಗಳು ಇಲ್ಲಿ ಕುಳಿತು ನೋಡಿದರು. ಬಂಧುಗಳು ತಂದ ಉಡುಗೊರೆ – ಅವರ ಇನ್ನಿತರ ಸಂಪ್ರದಾಯ ಆಚರಣೆಗಳನ್ನು ಅವರು ಅಲ್ಲೇ ಕುಳಿತು ನೋಡಿದರು. ಒಟ್ಟಾರೆ ಕಾರ್ಯಕ್ರಮ ಹುಡುಗ-ಹುಡುಗಿ ಮತ್ತು ಬಂಧುಮಿತ್ರರ ಸಮ್ಮುಖದಲ್ಲೇ ನಡೆದಂತೆ ಆಯಿತು! ಕಾಲ ಬದಲಾದಂತೆ ಅನಿವಾರ್ಯವಾಗಿ ಹೊಂದಾಣಿಕೆ ಮಾಡಿಕೊಂಡು ಅಷ್ಟಿಷ್ಟು ಸಂಪ್ರದಾಯ ಉಳಿಸಿಕೊಂಡು ಹೋಗುವ ಪರಿ ಇದು!..... ಕಾಲದೊಂದಿಗೆ ಹೆಜ್ಜೆ ಹಾಕುವುದು ಅನಿವಾರ್ಯ.

ಪರಿವರ್ತನೆ ಜಗದ ನಿಯಮ! ಮದುವೆ ಮನೆ ಅಂದರೆ ಆಹ್ವಾನ ಪತ್ರಿಕೆಯಲ್ಲಿ ಭೋಜನ ಎಷ್ಟು ಹೊತ್ತಿಗೆ ಅಂತ ಹಾಕಿರುತ್ತಾರೋ, ಆ ಸಮಯಕ್ಕೆ ಸರಿಯಾಗಿ ಹೋಗಿ ಬರುವುದು! ಉಡುಗೊರೆಗಳನ್ನು ಪ್ರೀತಿಗಿಂತ ಹೆಚ್ಚಾಗಿ ತಮ್ಮ ಪ್ರತಿಷ್ಠೆಯ ಪ್ರದರ್ಶನವಾಗಿ ಕೊಡುವುದೂ ಉಂಟು. ಉಡುಗೊರೆಯ ಲೆಕ್ಕಾಚಾರ ಇಟ್ಟುಕೊಂಡು ಸಂದರ್ಭ ಬಂದಾಗ ಅದೇ ರೀತಿ ಕೊಡುಗೆ ನೀಡಿ ಹಿಂದಿರುಗಿಸುವವರೂ ಇದ್ದಾರೆ.

ಮದುವೆ ಮನೆ ಅಂದರೆ ಒಂದು ದಿನದ ವೈಭವ! ಊಟವಾದ ನಂತರ ಕಲ್ಯಾಣ ಮಂಟಪ ಬಿಕೋ ಅನ್ನುತ್ತಿರುತ್ತದೆ. ಅನವಶ್ಯಕವಾಗಿ ಸಮಯ ಹಾಳು ಮಾಡಲು ಯಾರೂ ಬಯಸುವುದಿಲ್ಲ. ಮತ್ತೆ ಈಗೀಗ ಗುರುತು ಪರಿಚಯ ಒಡನಾಟವೆಲ್ಲ ಕಡಿಮೆ. ಆದ್ದರಿಂದ ಊಟ ಮುಗಿಸಿ ಎಲ್ಲ ಅವರವರ ಪಾಡಿಗೆ ಹೊರಟು ಬಿಡುತ್ತಾರೆ. ಹಿಂದೆಲ್ಲಾ ಮದುವೆ ಮನೆಗಳು ಅಂದರೆ ಹೇಗಿತ್ತು ಅಂತ ಕೇಳಿ ನೋಡಿ! ಅದರ ಪರಿಯೇ ಬೇರೆ. ಅದರಲ್ಲೂ ಮಲೆನಾಡಿನಲ್ಲಿ ಮದುವೆಮನೆ ಅಂದರೆ ಆ ಮನೆಯವರಿಗೆ ಮಾತ್ರವಲ್ಲ ಬಂಧುವರ್ಗದವರಿಗೆ, ಗ್ರಾಮದ ಎಲ್ಲರಿಗೂ ಸಂಭ್ರಮವೋ ಸಂಭ್ರಮ! ಕೆಲಸವೋ ಕೆಲಸ! "ನಾಲ್ಕು ದಿನ ಮುಂಚಿತವಾಗಿ ಬಂದು ಎಲ್ಲಾ ನಡೆಸಿಕೊಡಬೇಕು" ಎನ್ನೋದು

ವಿನಯಪೂರ್ವಕ ಕರೆ! ಬಂದವರೆಲ್ಲಾ ಒಂದೊಂದು ಕೆಲಸ ವಹಿಸಿಕೊಂ ಬಿಡುತ್ತಿದ್ದರು. ಸುಣ್ಣ ಬಣ್ಣದಿಂದ ಬಾಳೆ ಎಲೆ ಕಾಸುವವರೆಗೆ ಎಲ್ಲ ಕೆಲಸಗಳ ಬಂಧು ವರ್ಗದವರು ನೆರವಾಗುತ್ತಿದ್ದರು. ಮಂಟಪ ಮಾಡುವುದು, ಕಾ ತೆಗೆಯುವುದು, ಹೋಳಿಗೆ ಮಾಡುವುದು ಇತ್ಯಾದಿ ಕೆಲಸಗಳೆಲ್ಲ ಸಂಭ್ರಮ ಖುಷಿಯಲ್ಲೇ ನಡೆದು ಬಿಡುತ್ತಿತ್ತು. ಬಂಧು ವರ್ಗದವರನ್ನು ಅಪಾರ ಗೌರ ಪ್ರೀತಿಯಿಂದ ಕಾಣಲಾಗುತ್ತಿತ್ತು. ಸಿರಿತನ ಬಡತನ ಭೇದವಿಲ್ಲ. ಇದ್ದ ಪ್ರೀತಿ – ಸಾಮರಸ್ಯ! ಬರುಬರುತ್ತ ಮೌಲ್ಯ ಕುಸಿಯಿತೋ ಏನೋ..... ಜ ಸೇರಿದಲ್ಲಿ ಗೌರವ, ಪ್ರೀತಿ, ಆದರ್ಶಗಳು ಕಡಿಮೆಯಾಗಿ ಸ್ವಾರ್ಥ, ತಿರಸ್ಕಾ ವ್ಯಂಗ್ಯಗಳು ಹುಟ್ಟಿಕೊಂಡವು. ಅಂತೂ ಜನ ಕೂಡಿ ಆಚರಿಸುವ ಸಂಭ್ರಮಿಸು ಅವಕಾಶದಿಂದ ದೂರಾಗತೊಡಗಿದರು! ಬೇರೆಯವರಿಗೆ ಸಲಾಮು ಹಾಕೋ ಯಾಕೆ? ಬೇಕಾದ್ರೆ ಬಂದು ಕರೀಲಿ? ಇತ್ಯಾದಿ ಅಹಮಿಕೆಯ ವರ್ತುಲದ ಪರಸ್ಪರ ಅಸಹನೆ – ತಿರಸ್ಕಾರಗಳೇ ಬೆಳೆಯುತ್ತಿವೆಯೋ? ಯಾಕೆ ಕಿರಿಕಿರಿ, ದು ಕೊಟ್ಟರೆ ದಾಕ್ಷಿಣ್ಯದ ಗೋಜಿಲ್ಲ ಅಂತ ಕಲ್ಯಾಣ ಮಂಟಪಗಳಲ್ಲೇ – ನಗರಗಳಿ ಸಾಟಿಯಾಗಿ ವಿವಾಹಗಳೀಗ ಮಲೆನಾಡಿನಲ್ಲಿ ಜರುಗುತ್ತಿವೆ.

ಈಗ ಮಲೆನಾಡಿನ ಮದುವೆ ಮನೆಯಲ್ಲಿ ಮಲೆನಾಡಿನ ಸೊಗಡು ಸಂಭ್ರಮ ಕಾಣುವ ಆಸೆಯಲ್ಲಿ ಹೋದರೆ ಅಲ್ಲಿಯೂ ನಗರದ ಕೃತಕ ವೈಭವವೇ ಕಂಡೀತು

ದೂರದಲ್ಲೆಲ್ಲೋ ತಾಳಮದ್ದಲೆಯ ದನಿ

"ನಾಡಿದ್ದು ಒಂದು ಯಕ್ಷಗಾನ ಇದೆ. ನೀವು ಕಣ್ಣಿಮನೆ ವೇಷ ನೋಡಿಲ್ಲ ಅಂದ್ರಲ್ಲ, ಖಂಡಿತಾ ಬನ್ನಿ. ಸುಮಾರು 33ರ ಹುಡುಗ ತುಂಬಾ ಚೆನ್ನಾಗಿ ಮಾಡ್ತಾನೆ" ಅಂತ ಸ್ನೇಹಿತರು ದೂರವಾಣಿಯಲ್ಲಿ ಆಹ್ವಾನಿಸಿದರು. ನನಗೆ ಯಕ್ಷಗಾನವೆಂದರೆ ಬಾಲ್ಯದಿಂದಲೂ ಆಸಕ್ತಿ. ಮಲೆನಾಡಿನಲ್ಲಿ ಹಿಂದೆ ಯಾವುದೇ ವಿಶೇಷ ಸಮಾರಂಭ ಅಥವಾ ಹಬ್ಬದ ದಿನಗಳಲ್ಲಿ ರಾತ್ರಿ 'ತಾಳಮದ್ದಲೆ' ಕಾರ್ಯಕ್ರಮ ಸಾಮಾನ್ಯವಾಗಿ ಇರುತ್ತಿತ್ತು. ಅವರ ಮನೆಯಲ್ಲಿ ಇವತ್ತು ಚಂಡೆಮದ್ದಲೆ ಇದೆಯಂತೆ ಅಂದರೆ ಯಕ್ಷಗಾನ ಕಥಾ ಕಾಲಕ್ಷೇಪ ಇದೆಯೆಂದೇ ಅರ್ಥ!

ಯಕ್ಷಗಾನ ಆಸಕ್ತರೆಲ್ಲ 'ಜಾಗರ' ಇದೆ ಅಂತ ಬಹುದೂರದಿಂದ ನಡೆದು ಬರುತ್ತಿದ್ದುದುಂಟು! ಭಾಗವತರು ತಾಳ ಹಿಡಿದು ಪದ ಆರಂಭಿಸಿದಾಗ ಮದ್ದಲೆಯ ಧ್ವನಿಯೊಂದಿಗೆ ಹೊಸ ಲೋಕ ಸೃಷ್ಟಿಯಾಗುತ್ತದೆ. ಇಡೀ ಮನೆಯನ್ನು ಆವರಿಸುವ ತಾಳಮದ್ದಲೆಯ ತರಂಗಗಳು ಕುಳಿತವರಲ್ಲಿ ಒಮ್ಮೆಗೇ ಮಿಂಚಿನ ಸಂಚಾರ ಮಾಡಿದಂತೆ! ಅತ್ತಿತ್ತ ಕೆಲಸ ಕಾರ್ಯಗಳಲ್ಲಿ ತೊಡಗಿದವರೂ ಬೇಗ ತಮ್ಮ ಕೆಲಸವನ್ನು ಮುಗಿಸಿ ಚಾವಡಿಗೆ ಬಂದು ಕುಳಿತುಬಿಡುತ್ತಿದ್ದರು, ಜಮೀನ್ದಾರರು, ಕೃಷಿ ಕೂಲಿ ಮಾಡುವವರು ಎಲ್ಲರೂ ಯಕ್ಷರೇ!

ಖ್ಯಾತ ಕಲಾವಿದರನ್ನು ಪ್ರೀತಿಯಿಂದ ತುಂಡು ಹೆಸರಿನಿಂದ ಕರೆಯುವುದುಂಟು ಉಪ್ಪೂರ, ಗುಣವಂತೆ, ಭಂಡಾರಿ, ಮಿಜಾರು, ಚಿಟ್ಟಾಣಿ, ಹೀಗೆ! ನಮ್ಮ ತಾಳಮದ್ದಲೆಗಳಲ್ಲಿ ಕಂಡ ನಮ್ಮೂರ ಅರ್ಥಧಾರಿಗಳು, ಭಾಗವತರು, ಮದ್ದಳೆಗಾರರೆಲ್ಲ ನನಗೆ ಯಕ್ಷಲೋಕದ ದಿಗ್ಗಜರಷ್ಟೇ ಪ್ರೀತಿ ಪಾತ್ರರು.

ಯಕ್ಷಲೋಕದ ಗಣ್ಯರ ಜೊತೆ ನಮ್ಮೂರ ಜನರೂ ನನಗೆ ನೆನಪಿಗೆ ಬರುತ್ತಾರೆ. ಇವರಿಗೆಲ್ಲಾ ತಮ್ಮದೇ ತಾಪತ್ರಯಗಳು, ಕೆಲಸಗಳು ಇದ್ದರೂ ಯಕ್ಷಗಾನ ಕಲೆಯ ಬಗೆಗಿನ ಆಸಕ್ತಿಯಿಂದ ಆ ರಾತ್ರಿಯಲ್ಲಿ ಬಹುದೂರದಿಂದ ನಡೆದು ಬಂದು ಉತ್ಸಾಹದಿಂದ ತಾಳಮದ್ದಲೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಯಾವ ಸಂಭಾವನೆಯೂ ಇಲ್ಲ! ನಿದ್ದೆಗೆಟ್ಟು ಒಂದು ದಿನದ ಕೆಲಸ ಹಾಳು. ಕಲೆಯ

ಬಗೆಗಿನ ಆಸಕ್ತಿಯಿಂದ ಒಂದೆಡೆ ಸೇರುತ್ತಿದ್ದರು. ಚಾವಡಿಯಲ್ಲಿ ಪದ ಶುರುವಾ
ನಾವು ಒಳಗಿನ ಕೋಣೆಗೆ ಓಡಿ ಹೋಗಿ ಕುಣಿಯುತ್ತಿದ್ದೆವು. ಖುಷಿಯೋ ಖ

ಯಕ್ಷಗಾನದ ಪ್ರಸಂಗವೊಂದನ್ನು ಮನೆ ಮನೆಗೆ ಹೋಗಿ ಅಭಿನಯಿ ಚಿಕ್ಕತಂಡವೇ ಚಿಕ್ಕಮೇಳ! ಕನಿಷ್ಠ ಇಬ್ಬರು ವೇಷಧಾರಿಗಳು ಭಾಗವತರು ಮ ಹಾರ್ಮೊನಿಯಂನವರು ಹೀಗೆ ಚಿಕ್ಕ ತಂಡ ಮಾಡಿಕೊಂಡು ರಾತ್ರಿ ಹ ಸಂಚರಿಸಿ, ಮನೆಗಳಲ್ಲಿ ಕಿರುಪ್ರಸಂಗ ಅಭಿನಯಿಸಿ ಸಂಭಾವನೆ ಪಡ ಹೋಗುತ್ತಿದ್ದರು. ಗ್ಯಾಸ್‌ಲೈಟ್‌ನಲ್ಲಿ ಝಗಮಗಿಸುವ ವೇಷ ನೋಡಿ ನಮ್ಮ ಓಡಿ ಹೋಗುತ್ತಿತ್ತು. ಈ ಎಲ್ಲಾ ನೆನಪುಗಳಲ್ಲಿ ಯಕ್ಷಗಾನ ನೋಡಲು ಹೋ ಬೇಸರವೆನಿಸಿದ್ದೂ ಉಂಟು!

ಅನೇಕ ಯುವಕರು, ಖ್ಯಾತರನ್ನು ಅನುಕರಿಸ ಹೊರಟರೆ ಮತ್ತೆ ಕೆಲವ ಅಶ್ಲೀಲ ಸಂಭಾಷಣೆಗಳಿಂದ ಸಭೆಯ ಚಪ್ಪಾಳೆ ಗಿಟ್ಟಿಸಬಯಸುತ್ತಾರೆ. ಅನಗತ್ಯವಾ ವೇದಿಕೆಯ ಸ್ಟೂಲನ್ನು (ಸಿಂಹಾಸನ) ಏರಿ ಕುಣಿಯ ತೊಡಗುತ್ತಾರೆ. ಹಾಸ್ಯಗಾರ ಮಾತಿನಲ್ಲಿ ನಗಿಸುವುದಕ್ಕಿಂತ ತಮ್ಮ ವಿಕೃತ ವೇಷದಿಂದ ನಗಿಸಲು ಪ್ರಯತ್ನಿಸುತ್ತಾ ಕಾರಂತರ ಪ್ರಯೋಗವಾದ ಯಕ್ಷಗಾನ, ಬ್ಯಾಲೆಗಳು ನಯನ ಮನೋಹರವಾ ವಿಶಿಷ್ಟವಾಗಿದ್ದವು. ಆದರೆ ಯಕ್ಷಗಾನದ ಸೊಗಸೇ ಆಗಿರುವ "ಅಬ್ಬರ" ಮ ಅರ್ಥಪೂರ್ಣ ಮಾತುಗಾರಿಕೆ ಈ ಬ್ಯಾಲೆಗಳಲ್ಲಿರಲಿಲ್ಲ! ಅನೇಕ ಯಕ್ಷಗಾ ಪ್ರದರ್ಶನಗಳು ಈಗಲೂ ಎಲ್ಲೆಡೆ ನಡೆಯುತ್ತವೆಯಾದರೂ ಮಲೆನಾಡಿನ ಮೊದಲಿನಂತೆ ತಾಳಮದ್ದಲೆ ಕಾರ್ಯಕ್ರಮಗಳು ಈಗ ನಡೆಯುತ್ತಿ ಮನರಂಜನೆಗಾಗಿ ಈಗ ಅದು ಅನಿವಾರ್ಯವೂ ಅಲ್ಲ. ನನ್ನ ಮನೆಯ ಗೋಡೆ ಮೇಲಿರುವ ಶಂಭು ಹೆಗ್ಡೆಯವರ 'ಕಾರ್ತವೀರ್ಯಾರ್ಜುನ'ನ ಚಿತ್ರ (ನ ಸ್ನೇಹಿತರು ಬಿಡಿಸಿದ್ದು) ನೋಡುವಾಗ ನನಗೆ 'ತಾಳಮದ್ದಲೆಯ' ಧ್ವನಿ ಕೇ ಬರುತ್ತದೆ. ಈಗಲೂ ಕತ್ತಲೆಯನ್ನು ಭೇದಿಸಿ ಮಲೆನಾಡಿನ ಮೂಲೆಯಲ್ಲೆಲ್ಲೋ ಈ ಧ್ವನಿ ಕೇಳಿ ಬರುತ್ತಿರಬಹುದು!

ಸುಂದರ ಎತ್ತಿನಗಾಡಿ ಸವಾರಿ!

ಹಿಂದೆ ಮನೆಯಲ್ಲಿ ಎತ್ತಿನ ಗಾಡಿ ಇದ್ದರೆ ಅದು ಭಾರೀ ಹೆಮ್ಮೆಯ ಸಂಗತಿ. ಗ್ರಾಮದಲ್ಲಿ ಮೂರ್‍ನಾಲ್ಕು ಮನೆಗಳಲ್ಲಿ ಎತ್ತಿನಗಾಡಿ ಇದ್ದರೆ ಹೆಚ್ಚು! ಭತ್ತವನ್ನು ಮಿಲ್ಲಿಗೆ ಒಯ್ಯಲು ಗಾಡಿಗೆ ಹೇಳುತ್ತಿದ್ದರು. ಗಾಡಿ ಬರುವ ಸುದ್ದಿಯೇ ನಮಗೆ ಖುಷಿ! ಝಲ್ ಝಲ್ ಶಬ್ದದೊಂದಿಗೆ ಮಣ್ಣು ರಸ್ತೆಯಲ್ಲಿ ಬರುವ ಸುಂದರ ಬಿಳೀ ಜೋಡಿ ಎತ್ತುಗಳ ಗಾಡಿ! ಗಾಡಿ ಹೊಡೆಯುವವನ ಗತ್ತು ಗೈರತ್ತು ಬೇರೆ! ಅವನಿಗೆ ಎಲ್ಲಿಲ್ಲದ ಮರ್ಯಾದೆ! ಎತ್ತುಗಳನ್ನು ಬೇಲಿ ಗೂಟಕ್ಕೆ ಕಟ್ಟಿ ಎರಡು ಕಟ್ಟು ಬಿಳೀ ಹುಲ್ಲು ಹಾಕಿ ಗಾಡಿಯವನು ಆಚೆ ಹೋದ ಕೂಡಲೇ ನಮಗೆ ಎತ್ತುಗಳನ್ನು ಮುಟ್ಟಬೇಕೆಂಬ ಹಂಬಲ! ಮುಷ್ಟಿಯಲ್ಲಿ ಹುಲ್ಲು ಹಿಡಿದು, ಅದಕ್ಕೆ ತೋರಿಸುತ್ತಾ ಹತ್ತಿರ ಸುಳಿಯಲೂ ಬಿಡದ ಎತ್ತಿನ ಮೂಗುದಾರವನ್ನು ಉಪಾಯದಿಂದ ಹಿಡಿದು ಕುದುರೆ ಕಟ್ಟಿದ ಬಬ್ರುವಾಹನನಂತೆ ಬೀಗುತ್ತಿದ್ದುದುಂಟು! ಅಷ್ಟರಲ್ಲಿ 'ಎತ್ತಿನ ಹತ್ರ ಹೋಗ ಬೇಡ್ರೋ' ಅಂತ ಗಾಡಿಯವ ಘಾಟಿ!

ಎತ್ತಿನಗಾಡಿ ಸವಾರಿ ಒಂದು ಸುಂದರ ಅನುಭವ. ಕುಲು ಕುಲುಕಿ ಝಲ್ ಝಲ್ ಎನಿಸುವ ಆನಂದ. ಬದುಕಿನಲ್ಲಿ ಸುಂದರ ಅನುಭವಗಳನ್ನು ಮತ್ತೆ ಮರುಕಳಿಸಿ ಪಡೆಯುಬೇಕೆಂದು ಗಾಡಿಯಲ್ಲಿ ಕುಳಿತರೆ ಹಿಂಸೆ ಅನಿಸಬಹುದು. ಆ ಕ್ಷಣದ ಅನುಭವ ಆ ಕ್ಷಣಕ್ಕೆ ಅತಿ ಸುಂದರ. ಮತ್ತದು ಬರೀ ನೆನಪು. ಅದಕ್ಕಾಗಿಯೇ ಬದುಕು ಇರುವುದು ಕ್ಷಣಗಳಲ್ಲಿ ಅನ್ನುತ್ತಾರೆ..... ಹಾಂ! ಆಗೆಲ್ಲ ಹತ್ತಿರದ ಪಟ್ಟಣಕ್ಕೆ ಮಿಲ್ಲಿಗೆ ಹೋಗಿ ಬರುವುದೆಂದರೆ ಅದು ರಾತ್ರಿಯಿಡೀ ಪ್ರಯಾಣ, ಗಾಡಿ ಹಿಂದಿರುಗುತ್ತಿದ್ದುದು ಮರುದಿನ ಕತ್ತಲೆಯ ಹೊತ್ತಿಗೆ! ಇಳಿಜಾರಿನಲ್ಲಿ ಗಾಡಿ ಬರುವಾಗ ಕೊಕ್ ಎಂಬ ಸದ್ದು! ಗಾಡಿಗೆ ಬ್ರೇಕ್ ಹಾಕಿದಾಗ ಈ ಸದ್ದು ಬರುತ್ತದೆ. ಅದಕ್ಕೆ 'ಬಿರು' ಹಾಕುವುದು ಅನ್ನುತ್ತಾರೆ ಅಂತ ನೆನಪು. ಎರಡೂ ಚಕ್ರಕ್ಕೆ ಹಗ್ಗ (ಹುರಿಹಿಂಡಿ) ಕಟ್ಟಿ ಅದಕ್ಕೊಂದು ತಿರುಗಣೆ ಹಾಕಿರುತ್ತಾರೆ. ಬ್ರೇಕ್ ಸರಿಯಾಗಿ ಹಿಡಿಯದಿದ್ದರೆ ಅದರ ಮೇಲೇ ನಿಲ್ಲುತ್ತಿದ್ದದೂ ಉಂಟು. ಗಾಡಿಯವನು ಕೆಟ್ಟರಸ್ತೆಯನ್ನು ಶಪಿಸುತ್ತಾ ತಾನಾದ್ದರಿಂದ ಈ ರಸ್ತೆಯಲ್ಲಿ ಗಾಡಿ ತಂದೆ ಎಂದು ಜಂಭದಿಂದ ಬೀಗುತ್ತಿದ್ದ! ಅವನ ಉಪಕಾರವನ್ನು ಎಲ್ಲರೂ

ಕೊಂಡಾಡಿದಾಗ ಪ್ರಸನ್ನನಾಗುತ್ತಿದ್ದ. ದಷ್ಟಪುಷ್ಟವಾದ ಸುಂದರ ಜೋಡಿ ಅಂದದ ಗಾಡಿ ಈಗ ಅಪರೂಪ! ಎತ್ತುಗಳಿಗೆ ಭಾರ ಹೊರುವ ಹಿಂಸೆ ಕಾಡ ನಡುವಿನ ರಸ್ತೆಗಳಲ್ಲಿ ಈಗ ಝುಲ್ ಝುಲ್ ಸಪ್ಪಳ ಕೇಳಿ ಟಿಲ್ಲರ್, ಟ್ರ್ಯಾಕ್ಟರ್ ಶಬ್ದ ಅಲ್ಲಲ್ಲಿ ಕಿವಿಗಡಚುತ್ತದೆ.

ಸಂಭಾವನೆ

ಮಲೆನಾಡಿನ ಮನೆ ಮನೆಗಳಿಗೆ ಅಡಿಕೆ ಸಂಭಾವನೆಗೆ ಬೇರೆ ಬೇರೆ ಊರುಗಳಿಂದ ಜನ ಬರುವುದು ವಾಡಿಕೆ. ಹಿಂದೆಲ್ಲ ಸಂಪರ್ಕ ಕಷ್ಟ ಸಾಧ್ಯವಾಗಿದ್ದರಿಂದ ಬರುತ್ತಿದ್ದವರು ವಿರಳ. ಬಂದವರಿಗೆ ಮನಸ್ಸಂತೋಷದಿಂದ ಯಥೇಚ್ಛ ಸಂಭಾವನೆ ಸಿಗುತ್ತಿತ್ತು. ಹೀಗೆ ಬರುವವರಲ್ಲಿ ಗೋಕರ್ಣದ ಕಡೆ ಭಟ್ಟರುಗಳೂ ಇರುತ್ತಿದ್ದರು. ಅವರು ತರುತ್ತಿದ್ದ ಹರಿವಾಣದ ಗಾತ್ರ ಬಹಳ ದೊಡ್ಡದು! ಅದರ ಮೇಲೆ ಒಂದು ಚಿಟಿಕೆ ಕುಂಕುಮ ಹಾಕಿ ಯಜಮಾನನ ಕೈಯಲ್ಲಿರಿಸಿ ಮಂತ್ರಘೋಷ ಮಾಡಿ ಆಶೀರ್ವದಿಸುತ್ತಿದ್ದರು. ಯಜಮಾನನು ಭಕ್ತಿಯಿಂದಲೂ ವಿನಯಪೂರ್ವಕವಾಗಿಯೂ ಪ್ರಸಾದವನ್ನು ಸ್ವೀಕರಿಸಿ, ಹಾಗೆಯೇ ಆ ಹರಿವಾಣವನ್ನು ಅಡಿಕೆ ಮೂಟೆಯಲ್ಲಿ ತುರುಕಿ ಅದನ್ನು ಚೂಪಗೆ ತುಂಬಿಸಿ ಭಟ್ಟರಿಗೆ ನೀಡಿದಾಗ ಅವರು ಪ್ರಸನ್ನಚಿತ್ತರಾಗುತ್ತಿದ್ದರು. ನಂತರ ಸ್ವಲ್ಪ ಉಭಯಕುಶಲೋಪರಿ ನಡೆಸಿ ಅವರು ಮುಂದೆ ಪ್ರಯಾಣ ಬೆಳೆಸುತ್ತಿದ್ದರು.

ಬಾಲ್ಯದಲ್ಲಿ ಹರಿವಾಣದ ತುಂಬ ಅಡಿಕೆ ತುಂಬಿಸಿ ಕೊಡಲು ನಮಗೆ ಖುಷಿ. ಆ ಹರಿವಾಣ ಅದೆಷ್ಟು ಅಗಲವಾಗಿರುತ್ತಿದ್ದವು. ಗೌರವದಿಂದಲೂ ಭಕ್ತಿಯಿಂದಲೂ ನೀಡುತ್ತಿದ್ದುದು ಸಂಭಾವನೆ! ಬಂದವರೂ ಬೇಡುತ್ತಿರಲಿಲ್ಲ. ನೀಡುವವರೂ ಕೈತುಂಬಾ ನೀಡುತ್ತಿದ್ದರು. ಈಗ ಹಾಗೇ ಸಂಭಾವನೆ ನೀಡಿದರೆ ನಾಲ್ಕೇ ದಿನದಲ್ಲಿ ದಿವಾಳಿಯಾಗಬೇಕಾದೀತು. ಏಕೆಂದರೆ ಮಲೆನಾಡಿನ ಮನೆಗಳಿಗೆ ಸಂಪರ್ಕ ಸುಲಭವಾಗಿದೆ. ಯಥೇಚ್ಛ ಸಂಭಾವನೆ ಸಿಗುವುದೆಂದಾದರೆ ನೂರಾರು ಜನ ಬಂದಾರು!. ಮಲೆನಾಡಿನವರೂ ಈಗ ವ್ಯವಹಾರ ಚತುರರಾಗಿ ಮಾರ್ವಾಡಿಗಳಂತೆ ಯೋಚಿಸುವುದನ್ನು ಕಲಿತಿದ್ದಾರೆ! ಅಡಿಕೆ ಮಾರುಕಟ್ಟೆ ಬೆಲೆಯ ಏರಿಳಿತಗಳನ್ನು, ಖರ್ಚು, ವೆಚ್ಚ ಮತ್ತು ಬರುವ ಲಾಂಭಾಂಶಗಳ ಬಗ್ಗೆ ತುಲನಾತ್ಮಕವಾಗಿ ಆಲೋಚಿಸಬಲ್ಲವರೂ ಆಗಿದ್ದಾರೆ. ಹೀಗಾಗಿ ಸಂಭಾವನೆಯ ಪರಿ ಹಿಂದಿನಂತಿಲ್ಲ. ಕೈ ತುಂಬ ನೀಡಿ ಧನ್ಯತೆಯಿಂದ ಕೊಟ್ಟವನು ತೃಪ್ತನಾದರೆ, ಗೌರವ ಪೂರ್ಣ ಅತಿಥ್ಯದಿಂದ ತೆಗೆದುಕೊಂಡವನು ತೃಪ್ತನಾಗುತ್ತಿದ್ದ. ಈಗ ಮನಸ್ಸಿಗೆ ಕಿರಿಕಿರಿ ಮಾಡಿಕೊಂಡು ಮುಷ್ಟಿ ಅಡಿಕೆ ಕೊಟ್ಟರೆ, ತೆಗೆದುಕೊಂಡವನೂ

ಮನದಲ್ಲೇ ಗೊಣಗಿಕೊಳ್ಳುತ್ತಾನೆ. ಹಿಡಿ ಅಡಿಕೆಗಾಗಿ ಮನೆ ಮನೆ ಸುತ್ತು
ಅಷ್ಟೇನೂ ಲಾಭದಾಯಕವಾಗಿಲ್ಲ ಅಂತ ಅನಿಸಲೂಬಹುದು. ಸಂಭಾ
ಅಂಥ ನಾನಾ ಜನ ಬರುತ್ತಿದ್ದರು. ಕೆಲವು ವಾದ್ಯ ವೃಂದದವರು ಸಹ. ಸಂಭಾ
ಅಂದರೆ ಗೌರವ ಸೂಚಕವಾಗಿ ನೀಡುವಂತಹದು.

ಸಂಭಾವನೆ ಅಂತ ಹಣದ ರೂಪದಲ್ಲಿಯೂ ನೀಡಲಾಗುತ್ತದೆ.
'ಸಂಭಾವನೆ' ಪದ ಅಡಿಕೆ ತುಂಬಿದ ಹರಿವಾಣವನ್ನೇ ನೆನಪಿಗೆ ತರುತ್ತಿದ್ದ

ನರಸಿಂಹ ಜಯಂತಿ ರಸಾಯನ!

ಅಡಿಕೆ ತೋಟಗಳ ಮಧ್ಯ ಕತ್ತಲಗವಿಯಂತೆ ಇದ್ದ ಆ ದೇವಾಲಯದ ಒಳಗೆ ಕಾಲಿಡುವಾಗ ಭಯಭಕ್ತಿ ಮೂಡಿಬರುತ್ತಿತ್ತು. ಸಿಂಹರೂಪಿಯಾದ ಭಗವಂತ ಎದ್ದು ಬಂದೇ ಬಿಟ್ಟರೆ! ದೇವಾಲಯದ ಗರ್ಭಗುಡಿಯೊಳಗೆ ಬೆಳಗುವ ಒಂದು ದೀಪ. ಅಸ್ಪಷ್ಟವಾಗಿ ಕಾಣುವ ವಿಗ್ರಹ. ತಟ್ಟೆಯ ಅಲುಗಾಟವೂ ಸ್ಪಷ್ಟವಾಗಿ ಕೇಳುವಂತಹ ನಿಶ್ಶಬ್ದ. ಗುನುಗುನು ಎಂದು ದೇವಾಲಯದ ಒಳಗೆ 'ರಿಂಗಣ' ಮೂಡಿಸುವ ಅರ್ಚಕರ ಮಂತ್ರ. ಅವರೋ ಸಾಕ್ಷಾತ್ ಪರಮಹಂಸರಂತೆ ಇದ್ದರು. ನರಸಿಂಹ ಜಯಂತಿಯ ದಿನ ಬೆಳಗುವ ಸಾಲು ದೀಪಗಳಿಂದ ದೇವಾಲಯಕ್ಕೆ ಹೊಸ ಕಳೆ ಮೂಡುತ್ತಿತ್ತು. ಪ್ರಸಾದ ರೂಪದಲ್ಲಿ ಬಾಳೆ ಎಲೆ ಸಿಗಳಿನಲ್ಲಿ ಬಡಿಸುವ ರಸಾಯನ ಅದ್ಭುತ! ಬಾಳೆಹಣ್ಣಿನ ಚೂರುಗಳ ನಡುವೆ ದೊಡ್ಡ ಬೆಲ್ಲದ ಚೂರು ಸಿಕ್ಕರೆ ಖುಷಿ!

ಸ್ವಲ್ಪ ನವ್ಯ ಎನ್ನಬಹುದಾದ ಮತ್ತೊಂದು ದೇವಾಲಯ ದೂಬಳ ದುರ್ಗಾಪರಮೇಶ್ವರಿ ದೇವಾಲಯ. ಪ್ರತಿವರ್ಷ ವಿಜೃಂಭಣೆಯಿಂದ ಅಲ್ಲಿ ಕೆಂಡದರ್ಚನೆ ನಡೆಯುತ್ತದೆ. ದೇವರನ್ನು ಹೊತ್ತ ಅರ್ಚಕರು ಹಿಂದೆ ಮುಂದೆ ತೂಗಿ, ದಡದಡನೆ ಧಗಧಗಿಸುವ ಕೆಂಡದ ಮೇಲೆ ನಡೆದ ನಂತರ ಉಳಿದವರ ಸರದಿ. ಹಿರಿಯರು ಧೈರ್ಯ ತುಂಬಿದ ಮೇಲೆ ಕೆಂಡದ ಮೇಲೆ ಓಡಿ ಮೂರನೇ ದಿನ ಕೆಂಡ ಹಾರಿದ ಪರಿಯ ಬಗ್ಗೆ ಕೊಚ್ಚಿಕೊಳ್ಳುತ್ತಿದ್ದೆವು. ದೇವಾಲಯಕ್ಕೆ ಹೋದಾಗೆಲ್ಲ ಗಂಟೆಗೆ ಕಟ್ಟಿದ ಹಗ್ಗವನ್ನು ಹಾರಿ ಹಾರಿ ಹಿಡಿದು ಗಂಟೆ ಬಡಿಯುವುದೇ ಆಟ. 'ಸುಮ್ಮನಿರೋ' ಅಂತ ಹಿರಿಯರ ಕಟ್ಟಪ್ಪಣೆ! ಮಂಗಳಾರತಿ ಯಾಗುವಾಗ ಶಂಖ ಊದುವ ಸಾಹಸ, ಜಾಗಟೆ ಬಡಿಯುವ ಖುಷಿ. ಅಲ್ಲೊಂದು ಬಾಗಿಲ ಅಗಳಿಯ ಗುಪ್ತ ಚಿಲಕದ ಬಗ್ಗೆ ಕುತೂಹಲ. ದೇವಾಲಯದಲ್ಲಿ ಗಂಟೆ ಇರುವುದು ನಾವು ಬಂದಿದ್ದೇವೆ ಅಂತ ಹೇಳುವುದಕ್ಕೋ ದೇವರನ್ನು ಎಬ್ಬಿಸಲಿಕ್ಕೋ, ಅಂತ ಮನದೊಳಗೇ ತರ್ಕ! ಗಂಟೆಯದನಿ ಎಷ್ಟು ಸುಂದರ! ಒಮ್ಮೆ ಜೋರಾಗಿ ಬಡಿದು ಕಣ್ಣು ಮುಚ್ಚಿ ಆ ದನಿಯನ್ನೇ ಹಿಂಬಾಲಿಸಿದರೆ ಮನಸ್ಸು ಹಾಗೇ ನಡುನೆತ್ತಿಯಲ್ಲೋ ಹುಬ್ಬುಗಳ ನಡುವೆಯೋ ನೆಲೆಗೊಂಡು ಬೇಗ ಧ್ಯಾನಮಗ್ನರಾಗಲು ಸಹಕಾರಿಯಾಗುತ್ತದೆ ಅಲ್ಲವೇ?

ದೀಪಾವಳಿ ವೇಷ

ದೀಪಾವಳಿ ಬಂತೆಂದರೆ ಮಲೆನಾಡಿನ ಮನೆಗಳಿಗೆ ವೇಷ ಬರುವುದುಂಟು. ಕೊರಗ..... ಕರಡಿ ವೇಷ, ಹುಲಿವೇಷ ಹೀಗೆ..... ಕೋಲ ಅಂಟಿಗೆ ಪಂಟಿಗೆಗಳು ಬರುವುದುಂಟು. ಮನೆಯ ಹತ್ತಿರ ಬಂದೊಡನೆ ಹ ಬಡಿದು ವಾದ್ಯದೊಂದಿಗೆ, ಕಹಳೆ ಉದುತ್ತಾ ಬರುವ ಕೋಲಾಟ ತಂಡ ಮೈನವಿರೇಳಿಸುತ್ತಿತ್ತು. ಕೋಲಾಟ ಬಂತೆಂದರೆ ಅದು ಗಂಟೆಗಟ್ಟಲೆ ಮನರಂ ಹಾಡು ಕುಣಿತ ಕೊನೆಗೆ "ಹತೋ ಕಾಯಿ" ಎಂದು ಕಾಯಿ ಉರುಡುವು ಒಂದೊಂದು ಹಾಡು ಕುಣಿತದ ಕೊನೆಗೆ ಮನೆಯಿಂದ ಯಥೇಚ್ಛ ಕೊಡ ಧನ, ಧಾನ್ಯ, ಇತ್ಯಾದಿ! ಹೀಗೆ ಕೊಟ್ಟ ಕೊಡುಗೆ ಸ್ವೀಕರಿಸಿ ದೇವರನ್ನು ನೆನ ಮನೆಯವರನ್ನು ಹಾರೈಸಿ, ಪ್ರಾರ್ಥಿಸುವ ಪರಿ ಚಂದ! "ಧರ್ಮಸ್ಥಳ ಮಂಜುನ ಅವರ ಪಾದಕ್ಕೆ ಬಿದ್ದೋ....." ಅಂದರೆ ಮತ್ತೊಬ್ಬ "ಉಳೋದೋ" ಅನ್ನುತ್ತಾ (ಒಳ್ಳೆಯದು ಅನ್ನುವ ಪದದ ಅಪಭ್ರಂಶ ರೂಪ!) ಹೀಗೆ ದೇವರ ಹೆಸರು ಹೇಳಿ ಮನೆಯ ಹಿರಿ-ಕಿರಿಯರಿಗೂ ಹಾರೈಸಿ ನಂತರ ಮತ್ತೆ ಹಾಡು ಕುಣ ಕೋಲಾಟ ಬಂದಾಗ ನಾವು 'ಕಹಳೆ' ಊದುವ ಹಂಬಲ ವ್ಯಕ್ತಪಡಿಸಿ ಊದ ಪ್ರಯತ್ನಿಸುತ್ತಿದ್ದೆವು.

ಅಂಗಳದಲ್ಲಿ ಆಟವಾಡುತ್ತಿರುವಾಗ ತಟ್ಟನೆ ಉಣುಗೋಲು ದಾಟಿ ಬರು ಕರಡಿ ವೇಷ ಕಂಡರೆ ನಮಗೆ ಗಾಬರಿ! ಕರಡಿ ಹಿಂದೊಬ್ಬ ದೊರೆ ಮ ನಾಲ್ಕಾರು ಮಂದಿ. ಬ್ಯಾಂಡಿನ ವಾದ್ಯದೊಂದಿಗೆ ಕರಡಿ ಮತ್ತು ದೊರೆ ನರ್ತನ. ಹ್ಯಾಟು ಧರಿಸಿ ಮುಖಕ್ಕೆ ಬಿಳಿ ಬಣ್ಣ ಬಳಿದುಕೊಂಡು 'ಜೋಕ ಅಂತೆ ಕಾಣುವ ದೊರೆ, ವಿವಿಧ ಭಾವ ಭಂಗಿಗಳಲ್ಲಿ ನಮ್ಮನ್ನು ನಕ್ಕು ನಲಿಸುತ್ತಿ ಗಾಬರಿ ಹುಟ್ಟಿಸುವ ಕರಡಿ ಒಂದು ಕಡೆಯಾದರೆ, ನಕ್ಕು ನಗಿಸುವ ದೊ ಒಂದು ಕಡೆ! 'ಉದರ ನಿಮಿತ್ತಂ ಬಹುಕೃತ ವೇಷಂ' ಅನ್ನುವಂತೆ ವಿವಿ ವೇಷ ಧರಿಸಿ ಬರುತ್ತಿದ್ದ ತಂಡಗಳು ಈಗ ಕ್ಷೀಣಿಸಿವೆ.

ರಾತ್ರಿ ಹೊತ್ತಿನಲ್ಲಿ ಬರುವ ಅಂಟಿಗೆ ಪಂಟಿಗೆ ತಂಡದ ಬಗ್ಗೆ ಕೇಳಿದ್ದೇ ಆದರೆ ನೋಡುವ ಅವಕಾಶ ನನಗೆ ಒದಗಲೇ ಇಲ್ಲ. ಅಂಟಿಗೆ ಪಂಟಿಗೆ ಬ

ಆಲಿಸಿದ ಮಾತುಗಳು, ಬಾಲ್ಯದಲ್ಲಿ ವಿಶಿಷ್ಟ ಕುತೂಹಲ ಮೂಡಿಸಿದ್ದಂತೂ ನಿಜ. "ದೀಪಾವಳಿಗೆ"! ಎಂದು ಕೂಗುತ್ತ ಬರುವ ಅಂಟಿಗೆ ಪಂಟಿಗೆ ತಂಡ, ಮನೆ ಬಾಗಿಲು ತೆರೆಯಲು ಹಾಡು, ದೀಪ ಬೆಳಗುವ ಹಾಡು, ಹೀಗೆ ಹಲವು ಹಾಡು ಹೇಳುತ್ತಾರಂತೆ, ಒಂದು ತಂಡಕ್ಕೆ ಮತ್ತೊಂದು ತಂಡ ಎದುರಾಗಬಾರದೆಂದು ರಾತ್ರಿಯಲ್ಲಿ "ದೀಪಾವಳಿಗೆ!" ಎಂದು ಕೂಗುತ ಸಾಗುವುದಂತೆ!

ಚೆಂಡು ಹೂವಿನ ಮಾಲೆ.....

ದೀಪಾವಳಿ ಮಲೆನಾಡಿನಲ್ಲಿ ಆಚರಿಸುವ ಅತ್ಯಂತ ಸಡಗರದ ಹಬ್ಬ! ನೀ
ತುಂಬುವ ಹಬ್ಬ, ಗೋಪೂಜೆ, ತುಳಸೀ ಹಬ್ಬ ಹೀಗೆ ವೈವಿಧ್ಯಮಯವಾದ
ಹಬ್ಬಗಳ ಆಚರಣೆಯೊಂದಿಗೆ ಜೀವನೋತ್ಸಾಹ ವಿಜೃಂಭಿಸುತ್ತದೆ. ಬೂದೆ ಹ
ದಿನ ಯಾರು ಬೇಕಾದರೂ ಕದಿಯಬಹುದಂತೆ. ಸಾಧಾರಣವಾಗಿ ಯಾವಾಗ
ಮನೆಯ ಹೊರಗೆ, ಕೊಟ್ಟಿಗೆಗಳಲ್ಲಿ ಬಿದ್ದಿರುವ ಕೊಡಪಾನ, ಬಕೇಟುಗ
ಅಂದು ಮನೆಯೊಳಗೆ ಸೇರುತ್ತಿತ್ತು. ಅಲ್ಲಿ ಇಲ್ಲಿ ಕುಂಬಳಕಾಯಿ ಅಥವಾ ಸ
ಪುಟ್ಟ ಕಳ್ಳತನದ ವಾರ್ತೆ ಬರುತ್ತಿತ್ತು. ಎಂತಹ ಕಾಲ ಅದು. ಉಳಿದ ದಿನಗ
ಅನೇಕ ವಸ್ತುಗಳು ಮನೆಯ ಹೊರಗಿದ್ದರೆ ಏನೂ ಆಗುತ್ತಿರಲಿಲ್ಲ. ಈಗ
ಕಳ್ಳತನ ಹೆಚ್ಚಿದೆ. ಅಡಿಕೆ ಕೊನೆಯನ್ನೇ ಕದಿಯುತ್ತಾರಂತೆ. ನೀರು ತುಂಬು
ಹಬ್ಬದಂದು ಹಂಡೆಗೆ ಸಿಂಗಾರ. ಕಾಡು ಸೌತೆಬಳ್ಳಿ, ಹಿಂಡ್ಲಚ್ಚಿ ಕಾಯಿಗಳಿ
ಹಂಡೆ ಅಲಂಕರಿಸಲ್ಪಡುತ್ತದೆ. 'ಮುಂಡುಗ'ವನ್ನು ತಂದು ಅಲ್ಲಲ್ಲಿ ಇರಿಸುತ್ತಾ
ಬೆಳಗ್ಗೆ ಸೂರ್ಯೋದಯಕ್ಕೆ ಮುನ್ನ ಎಣ್ಣೆ ಸ್ನಾನ! ಬೈದು ಎಬ್ಬಿಸಿ ಮೈಗೆಲ್ಲ ಎ
ಹಚ್ಚುವಾಗ ನಾವು ಕುಗುರುತ್ತಲೇ ನಿಲ್ಲುತ್ತಿದ್ದೆವು. ಬಚ್ಚಲಲ್ಲಿ ಕೂರಿಸಿ ಹಂಡೆಯಿ
ತಂಬಿಗೆಯಲ್ಲಿ ಬಿಸಿ ನೀರನ್ನು ಎತ್ತಿ ತಲೆಮೇಲೆ ಬಿಸಿ ಬಿಸಿ ಹಾಕುವಾಗ ನಿ
ಓಡಿ ಹೋಗುತ್ತಿತ್ತು. ಬಿಸಿ ಬಿಸಿ ನೀರಿನ 'ಅಭ್ಯಂಜನ' ಸ್ನಾನ! ಗೋಪೂಜೆ ದಿ
ನಮಗೆ ಮತ್ತು ದನಗಳಿಗೆಲ್ಲ ಚೀನೀಕಾಯಿ ಕಡುಬು. ದೊಡ್ಡದೊಡ್ಡ ಚೆಂಡು
ಹೂವಿನ ಮಾಲೆಗಳು. ಎಲ್ಲ ದನ ಕರುಗಳ ಕುತ್ತಿಗೆಗೆ ಚೆಂಡು ಹೂವಿನ ಮಾ
ಹಾಕಿ, ಲೋಟವನ್ನು ಬಣ್ಣದ ನೀರಿನಲ್ಲಿ ಅದ್ದಿ ದನಗಳ ಮೈಮೇಲೆ ಚಿತ್ತಾ
ಮೂಡಿಸಿದಾಗ ಎಲ್ಲವೂ ಹಂಡ ಹಂಡ! ದನಗಳ ಮುಖಕ್ಕೆ ಆರತಿ! (ಗೋಪೂಜೆ
ಕಡುಬು ತಿನ್ನಿಸುವಾಗ ಅವುಗಳ ನಾಲಿಗೆ ತರಿತರಿಯಾಗಿ ಕೈಗೆ ತಾಗುವ ಅನುಭ
ಶಂಖ ಜಾಗಟೆಗಳೊಂದಿಗೆ ಸ್ವಲ್ಪ ದೂರ ದನಗಳನ್ನು ಹೊಡೆದುಕೊಂಡು ಹೋ
ಮೇಯಲು ಬಿಟ್ಟು ಬರುತ್ತಿದ್ದೆವು. ಒಂದು ಮತ್ತೊಂದರ ಹಾರಕ್ಕೆ ಬಾಯಿ ಹಾಕ
ಹೋದಾಗ ಬಿಡಿಸುತ್ತಾ ಸಡಗರದಿಂದ ಸಾಗುತ್ತಿದ್ದೆವು. ಸಿಂಗರಿಸಲ್ಪಟ್ಟ ದನಕರು
ಪುಟ್ಟ ಮೆರವಣಿಗೆ! ಹಿಂದೆ ನಮ್ಮ ವಾದ್ಯವೃಂದ!

ಅಬ್ಬಿ ಗುಂಡಿಯಲ್ಲಿ ಕೋಣ ಸ್ನಾನ!

ಮಲೆನಾಡಿನಲ್ಲಿ ಅಲ್ಲಲ್ಲಿ ಚಿಕ್ಕಪುಟ್ಟ ಝರಿ (ಜಲಪಾತ) ಗಳನ್ನು, ದೊಡ್ಡ ನೀರಿನ ಗುಂಡಿಗಳನ್ನು ಕಾಣಬಹುದು. ಅಬ್ಬಿಗುಂಡಿ ಎಂದು ಕರೆಯಲ್ಪಡುವ ಇಂತಹ ಒಂದು ಭಾರೀ ಗುಂಡಿ ನಮ್ಮ ಗದ್ದೆ ಬದಿಯಲ್ಲೂ ಇದ್ದು, ಅಲ್ಲಿ ನಾವು ಕೋಣಗಳಿಗೆ ಸ್ನಾನ ಮಾಡಿಸುತ್ತಿದ್ದೆವು. ಒಂದಷ್ಟು ಒಣ ಹುಲ್ಲು ಹಿಡಿದು ಚೆನ್ನಾಗಿ ಮೈ ಉಜ್ಜುತ್ತಿದ್ದೆವು. ಕೋಣಗಳು ಹಾಯಾಗಿ ಮುಖ ಮೇಲೆ ಮಾಡಿ ನೀರಿನಲ್ಲಿ ಈಜುವಾಗ ನಾವೂ ಅವುಗಳ ಮೈಮೇಲೆ ಕುಳಿತು ಆನಂದಪಡುತ್ತಿದ್ದೆವು. ಕೋಣನ ಮೈಮೇಲೆ ಕುಳಿತುಕೊಂಡೇ ಮನೆಯವರೆಗೂ ಬರುತ್ತಿದ್ದುದುಂಟು. ಒಮ್ಮೊಮ್ಮೆ ಕೋಣ ಇದ್ದಕ್ಕಿದಂತೆ ಧರೆಗೆ ತಲೆ ಉಜ್ಜಿ ಮತ್ತೆ ಮಣ್ಣು ಮಾಡಿಕೊಳ್ಳುತ್ತಿತ್ತು. ಒಂದನ್ನು ನೋಡುವಾಗ ಮತ್ತೊಂದು ಗದ್ದೆಯ ಕೆಸರಲ್ಲಿ ಮಲಗಿಬಿಡುತ್ತಿತ್ತು. ಅವೆಲ್ಲಾ ಮತ್ತೆ ಮಣ್ಣು ಮಾಡಿಕೊಳ್ಳದ ಹಾಗೇ ಕೊಟ್ಟಿಗೆಗೆ ತಂದು ಕಟ್ಟಲು ಲಗುಬಗೆಯಿಂದ ಮನೆಗೆ ಹೊಡೆದುಕೊಂಡು ಧಾವಿಸುತ್ತಿದ್ದೆವು. ಹೂಟೆ ಸಮಯ ಬಂದರೆ ಕೋಣಗಳಿಗೆ ರಾಜಾತಿಥ್ಯ. ಹುರಳಿ, ಹಿಂಡಿ ಮುಂತಾದ ಉತ್ತಮ ಆಹಾರ. ಮುರುವಿಗೆ ಜಾಸ್ತಿ ತೌಡು! ದಿನವೂ ಮೈತೊಳೆಸಿ ಎಣ್ಣೆ ಹಚ್ಚಿ ಮಾಲೀಷು!

ಹತ್ತಿರದ ಚಿಕ್ಕ ಜಲಪಾತಕ್ಕೆ ನಾವೂ ಸ್ನಾನಕ್ಕೆ ಹೋಗಿ ಗಂಟೆಗಟ್ಟಲೆ ಆಡುತ್ತಿದ್ದೆವು. ಕಲ್ಲಿಂದ ಕಲ್ಲಿಗೆ ಹಾರಿ, ಒಮ್ಮೊಮ್ಮೆ ಬಿದ್ದು ಚಿಕ್ಕ ಪುಟ್ಟ ಗಾಯ ಮಾಡಿಕೊಳ್ಳುತ್ತಿದ್ದೆವು. ಹಳ್ಳದಲ್ಲಿ ಮಲವಿಸರ್ಜನೆಗೆ ಕೂತಾಗ ಬಣ್ಣ ಬಣ್ಣದ ಕ್ರಿಮಿಕೀಟಗಳನ್ನು ಆಸಕ್ತಿಯಿಂದ ಗಮನಿಸುತ್ತಿದ್ದೆವು. ಹಾಗೆಯೇ ಹರಿವ ನೀರನ್ನು..... ಆ ನಿನಾದವನ್ನು ಆಹ್ಲಾದಿಸುತ್ತಿದ್ದೆವು. ಹಲವು ಕೀಟಗಳನ್ನು ಗಮನಿಸಿದ್ದೇವೆ. ಹಲವಾರು ಪಕ್ಷಿಗಳನ್ನು ಕಂಡಿದ್ದೇವೆ. ಗಿಡಮರಗಳ ನಡುವೆಯೇ ಬೆಳೆದಿದ್ದೇವೆ. ಆದರೆ ಕೆಲವೇ ಕೀಟಗಳನ್ನು, ಕೆಲವೇ ಪಕ್ಷಿಗಳನ್ನು, ಕೆಲವೇ ಮರಗಳನ್ನು ನಾವು ಗುರುತಿಸಬಲ್ಲವಾಗಿದ್ದೇವೆ. (ಬಾಲ್ಯದಲ್ಲೇ ಹಳ್ಳಿಯನ್ನು ತೊರೆದ ಕಾರಣಕ್ಕೇನೋ!) ಅನೇಕ ಔಷಧೀಯ ಸಸ್ಯಗಳು ಲಭ್ಯವಿರುವ ಮಲೆನಾಡಿನಲ್ಲಿ ಸಸ್ಯ ಜಗತ್ತಿನ ಪರಿಚಯ ಬದುಕಿಗೆ ತುಂಬಾ ಸಹಕಾರಿ ಮತ್ತು ಅಗತ್ಯ ಕೂಡಾ!

ಮನೆಗೊಂದು ಉಗ್ರಾಣ

ಮನೆಗೆ ಯಾರಾದರೂ ಅತಿಥಿಗಳು ಬಂದರೆ ಅವರನ್ನು ಸತ್ಕರಿಸಲು ಅಂಗಡಿಗೆ ಓಡಿಹೋಗಿ ಏನನ್ನಾದರೂ ತರುವುದು ನಗರಗಳಲ್ಲಿರುವ ಮ ವರ್ಗದ ಕುಟುಂಬಗಳಲ್ಲಿ ಸಾಮಾನ್ಯ. ಈಗ ಮಲೆನಾಡಿನಲ್ಲೂ ಅಲ್ಲಲ್ಲಿ ಅಂಗ ಇರುವುದರಿಂದ ಹಿಂದಿನ ಹಾಗೆ ಒಂದು ಬೆಂಕಿ ಪೆಟ್ಟಿಗೆಗೂ ಮೈಲು ದೂರಹೋಗಬೇಕಾದ ಪ್ರಮೇಯ ಇಲ್ಲವೆನ್ನಬಹುದು(?).

ಸತತವಾಗಿ ಬೀಳುವ ಮಳೆ ಮತ್ತು ಹೊಲದ ಕೆಲಸದ ನಡುವೆ ಸಾಮಾನುಗಳ ಕೊರತೆ ಬರಬಾರದೆಂದು ಹಿಂದೆಲ್ಲಾ ವರ್ಷಕ್ಕಾಗು ಸಾಮಾನನ್ನು ತಂದು ಶೇಖರಿಸಿ ಇಡುತ್ತಿದ್ದರು. ಅದೇ ಉಗ್ರಾಣ. ಸಾಮಾನ್ಯ ಅಡಿಗೆ ಮನೆ ಅಟ್ಟವೇ ಉಗ್ರಾಣವಾಗಿರುತ್ತಿತ್ತು. ಅಡಿಗೆ ಮಾಡುವಾಗ ಏನಾ ಬೇಕಾದರೆ ಕೂಡಲೇ ಏಣಿ ಹತ್ತಿ ತಂದುಕೊಳ್ಳಲು ಅನುಕೂಲ ಕಾರಣವಿರಬಹುದು ಮತ್ತು ಅಡಿಗೆ ಮನೆ ಅಟ್ಟದಲ್ಲಿ ಕ್ರಿಮಿ ಕೀಟಗಳ ಉಪದ್ರ ಕಡಿಮೆ. ಈ ಉಗ್ರಾಣ ತುಂಬೆಲ್ಲ ಕಾಣುತ್ತಿದ್ದುದು ಕೇವಲ ಕಪ್ಪು ಆಕ ವಿವಿಧ ಗಾತ್ರದ ಹಂಡೆ, ಡಬ್ಬ, ಮಂಕರಿ, ಗೂಡೆ, ಕಲಬಿ ಮುಂತಾ ಎಲ್ಲದರ ಬಣ್ಣವೂ ಅಡಿಗೆ ಮನೆಯ ಹೊಗೆಯಿಂದಾಗಿ ಕಪ್ಪೇ ಆಗಿರು ಅವಲಕ್ಕಿ, ಬೆಲ್ಲ, ಹುಣಸೆಹಣ್ಣು ಹೀಗೆ ಎಲ್ಲವೂ ಇರುತ್ತಿದ್ದ ಅದೊಂದು ಅಂಗಡಿಯೇ! ಇವುಗಳ ನಡುವೆ ಒಂದೆರಡು ಬಾಳೆಹಣ್ಣಿನ ಗೊನೆ, ಹೊಗೆಸೆ ಕಟ್ಟು ಮುಂತಾದವೂ ಇರುತ್ತಿದ್ದವು.

ಈಗ ಮಲೆನಾಡಿನ ಮನೆಗಳಲ್ಲೂ ಉಗ್ರಾಣದ ಗಾತ್ರ ಕಡಿಮೆಯ ಹಿಂದಿನ ಹಾಗೆ ಶೇಖರಣೆಯ ಅಗತ್ಯ ಈಗ ಇಲ್ಲ. ಆಗಾಗ ಮನೆ ಪೇಟೆಗೆ ಹೋಗಿ ಬರುತ್ತಿರುತ್ತಾರೆ. ಬೇಕಾದ್ದನ್ನು ಬೇಕೆಂದಾಗ ತರುವುದ ಕಷ್ಟವೇನೂ ಅಲ್ಲ (ಹಣವಿದ್ದರೆ). ಹಾಗಾಗಿ ಉಗ್ರಾಣಗಳ ಅಗತ್ಯವಿಲ್ಲ. ಕೆಲವು ವಿದ್ಯಾರ್ಥಿಗಳೂ ಹಾಗೇ, ಬೇಕಾದ್ದು ಯಾವ ಪುಸ್ತಕದಲ್ಲಿ ವೆಬ್‌ಸೈಟ್‌ನಲ್ಲಿ ಸಿಗುತ್ತದೆ ಎಂದು ಗೊತ್ತಿದ್ದರೆ ಸಾಕು, ಅದೆಲ್ಲ ತ ತುಂಬಿಕೊಳ್ಳುವುದು ಏಕೆ ಎಂದು ಪ್ರಶ್ನಿಸುತ್ತಾರೆ. ಕ್ಯಾಲ್ಕುಲೇಟರ್ ಇ

ಗುಣಕಾರ, ಭಾಗಾಕಾರ ಉರು ಹೊಡೆಯೋದು ಏಕೆ ಅನ್ನುವ ಪ್ರಶ್ನೆ. ಅಂತೂ ಕೆಲವರಿಗೆ ತಮ್ಮ ತಲೆಯನ್ನು ನೆನಪಿನ ಉಗ್ರಾಣ ಮಾಡಿಕೊಳ್ಳುವುದು ಬೇಕಾಗಿರುವುದಿಲ್ಲ. ಸ್ವಂತ ಕಾರಿನಲ್ಲಿ ಹೇಗೆ ತುಂಬಾ ಜನರನ್ನು ತುಂಬಿಸುವುದಿಲ್ಲವೋ ಹಾಗೆ ನಮ್ಮ ಸ್ವಂತ ತಲೆಯಲ್ಲೂ ತುಂಬಾ ವಿಷಯ ತುಂಬಿಕೊಳ್ಳಬಾರದು ಅಂತ ಗೆಳೆಯನೊಬ್ಬನ ವಾದ!

ಮಣೆ ಇರದ ಅಡಿಗೆ ಮನೆ

ಹಿಂದೆ ಬಹುತೇಕ ಮಲೆನಾಡಿನ ಮನೆಗಳು ಅವಿಭಕ್ತ ಕುಟು ಗಳಾಗಿರುತ್ತಿದ್ದವು. ಮನೆಯಲ್ಲಿ ಹತ್ತು ಹದಿನೈದು ಜನ ಸಾಮಾನ್ಯ! ಊ ಕುಳಿತರೆ ಅಡಿಗೆಮನೆಯ ಒಂದು ಸಾಲಲ್ಲಿ ಗಂಡಸರು, ಒಂದು ಸಾಲಲ್ಲಿ ಮಕ್ಕ (ಹೆಂಗಸರ ಊಟ ನಂತರ!) "ಮಣೆ ಇಟ್ಟು ಎಲ್ಲರನ್ನೂ ಊಟಕ್ಕೆ ಕರೆಯಿ ಅಂತ ಮಕ್ಕಳಾದ ನಮಗೆ ಆಜ್ಞಾಪಿಸುತ್ತಿದ್ದರು. ಅಡಿಗೆಮನೆಯ ಮೂಲೆಯ ಇರುತ್ತಿದ್ದ ಮಣೆಗಳನ್ನು ನಮ್ಮ ಶಕ್ತ್ಯಾನುಸಾರ ಒಮ್ಮೆಗೇ ನಾಲ್ಕೋ ಐದು ಮಣೆಗಳನ್ನು ಎತ್ತಿ ಸಾಲಾಗಿ ಇಡುತ್ತಿದ್ದೆವು. ಮಣೆಗಳು ಒಂದೇ ಗಾತ್ರವಾಗಿರುತ್ತಿರಲಿ ಕೆಲವು ದೊಡ್ಡವು, ಕೆಲವು ಚಿಕ್ಕವು! ಚಿಕ್ಕ ಸುಂದರವಾದ ಮಣೆಗೆ ಮಕ್ಕಳ ಜಗಳವಾಗುವುದೂ ಉಂಟು. ಸಾಧಾರಣವಾಗಿ ದಿನವೂ ಬಳಸುವ ಮ ಅವರದ್ದೆಂದೇ ಗುರುತಿಸಲ್ಪಡುತ್ತಿತ್ತು. 'ಮುಖ ನೋಡಿ ಮಣೆ ಹಾಕ್ತಾರೆ' ಅನ್ನು ಮಾತಿದೆ. ಅಂದರೆ ಇಲ್ಲಿ ಮಣೆ ಸತ್ಕಾರದ ಸಂಕೇತ. ಬಹುಶಃ ಸಗಣಿ ನೆ ಇದ್ದ ಕಾಲದಲ್ಲಿ ಈ ಮಣೆಗಳು ಬಂದಿರಬಹುದು. ಯಾರೇ ಅತಿಥಿಗಳು ಬಂದರು ಅಡಿಗೆ ಮನೆಗೆ ಕರೆದು ಮಣೆಹಾಕಿ ಕುಳ್ಳಿರಿಸಿ ತಿನ್ನಲು, ಕುಡಿಯಲು ಏನಾದರು ಕೊಡುತ್ತಿದ್ದರು. ಒಂದಷ್ಟು ಅವಲಕ್ಕಿ ಉಪಗರಿ, ಇಲ್ಲವಾದರೆ ಅಂಗೈ ಅಗಲ ಬಾಳೆಎಲೆ ಸೀಳಿನಲ್ಲಿ ಒಂದಿಷ್ಟು ತುಪ್ಪ ಹಾಕಿ ಎರಡು ಬಾಳೆ ಹಣ್ಣು! ಒಂದ ದೊಡ್ಡ ಲೋಟದಲ್ಲಿ ಬೆಲ್ಲದ ಕಡಕ್ ಕಪ್ಪು ಕಾಫಿ! ಬಂದವರಿಗೆಲ್ಲಾ ಮಣೆ ಹಾಕುವುದು ಮತ್ತು ಎತ್ತಿಡುವುದು ಒಂದು ರಗಳೆ ಕೆಲಸ ಅಂತಲೋ ಏನೋ ಈಗ ಊಟದ ಚಾಪೆಗಳು ಬಂದಿವೆ. ಸಾಮಾನ್ಯವಾಗಿ ಈಗ ಸಿಮೆಂಟ್ ನೆ ಇರುವುದರಿಂದ ಬಂದವರೂ "ಮಣೆ ಎಂತಕ್ಕೆ..... ಬೇಡ" ಅಂತಾರೆ. ಮಲೆನಾಡಿ ಮನೆಗಳಲ್ಲೂ ಈಗ ಬಾಳೆಎಲೆ ಬದಲಾಗಿ ತಟ್ಟೆಯನ್ನೇ ಉಪಯೋಗಿಸುವುದರಿಂದ ಸಾರೋ, ಪಾಯಸವೋ ಮೈಮೇಲೆ ಹರಿದು ಬರುವ ಅಪಾಯವಿಲ್ಲ, ಹೀಗಾಗಿ ಮಣೆಯ ಅಗತ್ಯವಿಲ್ಲ! ಪೂಜಾ ವಿಧಿಗಾಗಿ ಕೆಲವು ಮಣೆಗಳು ಉಳಿದುಕೊಂಡಿ ಬಹುದು ಅಷ್ಟೇ! ಅತಿಥಿಗಳು ಬಂದರೆ ಟೀಪಾಯ್ ಮೇಲೆ ಒಂದು ಲೋ ಕಾಫಿ ತಂದಿಡುವುದು ಈಗ ಸಾಮಾನ್ಯ!

ಓದುವ ಹವ್ಯಾಸ

ಈಗ ಮಕ್ಕಳಿಗೆ ಶಾಲಾಪದ್ಯ ಓದಿ ಹೋಮ್‌ವರ್ಕ್ ಮುಗಿಸುವುದೇ ಕಷ್ಟ. ಇನ್ನು ಬೇರೆ ಓದಿಗೆ ಪುರುಸೊತ್ತೆಲ್ಲಿ? ದೂರದರ್ಶನ ಬಂದ ನಂತರ ದೊಡ್ಡವರಿಗೂ ಓದುವ ಹವ್ಯಾಸ ಕಡಿಮೆಯಾಗಿದೆ ಅನ್ನಬಹುದು. ಓದುವುದು ಒಂದು ಉತ್ತಮ ಹವ್ಯಾಸ. ಜ್ಞಾನವೃದ್ಧಿ, ಭಾಷೆಯ ಮೇಲೆ ಹಿಡಿತ ಸಾಧಿಸಲು ಅನುಕೂಲ. ಹಿಂದೆ ಮನೆಗಳಲ್ಲಿ ಒಂದು ಮೂಲೆಯಲ್ಲಿ ಪುಸ್ತಕ ಓದುತ್ತಾ ಕುಳಿತಿರುವ ವಯೋವೃದ್ಧರನ್ನು ಕಾಣಬಹುದಾಗಿತ್ತು. ವಾಲ್ಮೀಕಿ ರಾಮಾಯಣವನ್ನೋ, ತೊರವೆ ರಾಮಾಯಣವನ್ನೋ ಅಥವಾ ಕುಮಾರವ್ಯಾಸ ಭಾರತವನ್ನೋ ಓದುವುದರಲ್ಲಿ ಮಗ್ನರಾಗಿರುತ್ತಿದ್ದರು. ನಮಗೂ ಓದುವ ಹವ್ಯಾಸ ಅಲ್ಪ ಸ್ವಲ್ಪ ಚಿಕ್ಕಂದಿನಲ್ಲೇ ಇತ್ತು. ಚಂದಮಾಮ, ಬಾಲಮಂಗಳ ಕತೆಗಳನ್ನು ಓದುತ್ತಿದ್ದೆವು. ಕ್ರಮೇಣ ಮನೆಯಲ್ಲಿದ್ದ ಎಸ್. ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿಗಳು ಮತ್ತು ತ್ರಿವೇಣಿ ಕಾದಂಬರಿಗಳನ್ನು ಓದಿ ಸಹಜವಾಗಿ ಆಸಕ್ತಿಯನ್ನು ಬೆಳೆಸಿಕೊಂಡೆವು. ಸಮಯ ಕಳೆಯಲು ಓದು ಒಳ್ಳೆಯ ಹವ್ಯಾಸವಾಗಿತ್ತು. ಅಂತೆಯೇ ಅಕ್ಕಪಕ್ಕದ ಮನೆಯವರೊಂದಿಗೂ ಪುಸ್ತಕ ವಿನಿಮಯ ನಡೆಯುತ್ತಿತ್ತು.

ಮನೆಗೆ ಬಂದ ಹಿರಿಯರಲ್ಲಿ ಮಲಗುವಾಗ 'ಕತೆ ಹೇಳಿ' ಅಂತ ಪೀಡಿಸಿ ಹೊಸ ಕತೆ ಕೇಳುತ್ತಿದ್ದೆವು. ಹೀಗೆ ಕೇಳಿದ ಕತೆಗಳನ್ನು ಹೊರಗಿನವರಿಗೆ ಹೇಳುತ್ತಿದ್ದೆವು. ಅಮ್ಮ 'ರಾಮಸ್ಕಂಧಂ' ಹೇಳಿಸಿ ಹುಡಿ ಎಣ್ಣೆ ಕಾಲಿಗೆ ಹಚ್ಚಿ ಮಲಗಿಸುತ್ತಿದ್ದ ನೆನಪು ಮರುಕಳಿಸುತ್ತದೆ.

ಉಮಿಕರಿಯೇ ದಂತ ಚೂರ್ಣ

ಬೆಳಿಗ್ಗೆ ಎದ್ದು ಮುಖ ತೊಳೆದು ಹಲ್ಲು ತಿಕ್ಕುತ್ತಿದ್ದುದು ಉಮಿಕರಿ
ನನ್ನ ಹಲ್ಲುಗಳು ಈಗಲೂ ಗಟ್ಟಿಯಾಗಿವೆ. ಥ್ಯಾಂಕ್ಸ್ ಟು ಉಮಿಕರಿ! ಉಮಿ
ಅಂದರೆ ಬತ್ತದ ಹೊಟ್ಟಿನ ರಾಶಿಗೆ ನಾಲ್ಕು ಕೆಂಡ ಹಾಕಿಟ್ಟರೆ ಸೈ! ಅ
ಸ್ನಾನಕ್ಕೂ ಸೋಪಿನ ಬಳಕೆ ಮಿತವಾಗಿರುತ್ತಿತ್ತು. ಶೀಗೆಕಾಯಿ ಪುಡಿ,
ಸೊಪ್ಪು, ಅಂಟವಾಳ ಮುಂತಾದವುಗಳ ಬಳಕೆಯೇ ಹೆಚ್ಚಿತ್ತು.

ಮನೆಯಲ್ಲಿ ಗುಡಿಸುವುದು ಮಕ್ಕಳಾದ ನಮ್ಮ ಕೆಲಸ. ಮನೆಯೊಳಗೆ ಗುಡಿಸ
ಸೊಪ್ಪು ಹಿಡಿ! ಹಿಟ್ಟಂಡೆ ಹಿಡಿಯ ಉಪಯೋಗ ಅಡಿಗೆ ಮನೆಯಲ್ಲಿ. ಮನೆ
ಹೊರವಲಯಕ್ಕೆ ಚೀಕಿಡಿ (ಕಡ್ಡಿಹಿಡಿ). ಇನ್ನು ಅಂಗಳ ಗುಡಿಸಲು ಬೈನೆ ಹೆಡ
ಹಿಡಿ! (ಬೈನೇ ಮರದಿಂದ ಕಳ್ಳು ತೆಗೆಯುತ್ತಾರೆ) ಮನೆಯ ಅಂಗಳವ
ಶುಚಿಯಾಗಿಡಲು ಆಗಾಗ್ಗೆ ಸಗಣಿ ನೀರು ಹಾಕಿ ಸಾರಿಸುವುದುಂಟು. ಮಲೆನಾ
ಮನೆಯ ಹೊಸ್ತಿಲಲ್ಲಿ, ಅಂಗಳದಲ್ಲಿ ತುಳಸೀಕಟ್ಟೆಯ ಮುಂದೆ ಸುಂದರ ರಂಗವ
ಬಿಡಿಸಿರುವುದನ್ನು ಕಾಣಬಹುದು. ಮಲೆನಾಡ ಮನೆಗಳ ಅಂಗಳದಲ್ಲಿ ತುಳ
ಕಟ್ಟೆ ಇದ್ದೇ ಇರುತ್ತದೆ. ತುಳಸಿಗೆ ವಿಶಿಷ್ಟ ಸ್ಥಾನ. ದೇವರ ಪೂಜೆಗೆ, ಔಷಧಿ
ಇದರ ಬಳಕೆ! ತುಳಸೀ ನೀರು ಬಿಟ್ಟು ದಾನ ಮಾಡುವುದು ಕ್ರಮ. ತುಳ
ಇಲ್ಲದ ದಾನವನ್ನು ದೇವರು ಸ್ವೀಕರಿಸುವುದಿಲ್ಲವಂತೆ! 'ತುಳಸೀ ನೀರು ಬಿಟ್ಟ
ಅಂದರೆ ಅವನು ಅದಕ್ಕೆ 'ಬೈ' ಹೇಳಿದ ಎಂದರ್ಥ (ಆ ಕೆಲಸ, ವಿಚಾರ ಬಿಟ್ಟ
ಮಳೆಗಾಲದಲ್ಲಿ ಮಾತ್ರ ಅಂಗಳ ಕೆಸರಿನಿಂದ ಕೊಚ್ಚೆಯಾಗಿರುತ್ತದೆ. ನಡೆಯ
ಅನುಕೂಲವಾಗುವಂತೆ ಮರ (ಅಡಿಕೆ) ಅಥವಾ ದಬ್ಬೆಯನ್ನು ಹಾಸಿರುತ್ತಾ

ನಿಂಗೆಂತ ಗೊತ್ತು... ಅಮ್ಟೆ ಕಾಯಿ!

ಮಲೆನಾಡಿನ ಉಪ್ಪಿನಕಾಯಿಗಳು ವಿಶಿಷ್ಟ. ಅದರಲ್ಲೂ ಮಾವಿನಕಾಯಿ ಉಪ್ಪಿನಕಾಯಿ ರುಚಿ ಅನನ್ಯ! ಉಪ್ಪಿನಕಾಯಿಗಳಲ್ಲಿ ಅಗ್ರಸ್ಥಾನ ಮಾವಿನಕಾಯಿಗೆ! ಲಿಂಬೆಕಾಯಿ, ಹಾಗಲಕಾಯಿ, ಅಮಟೆಕಾಯಿ, ಕಂಚಿಕಾಯಿ, ದುಡ್ಲೆಕಾಯಿ ಉಪ್ಪಿನಕಾಯಿಗಳು ಪ್ರಚಲಿತವೆನ್ನಿ!

ಮಲೆನಾಡಿನಲ್ಲಿ ಹಣ್ಣುಗಳಿಗೆ ಬರವಿಲ್ಲ. ಚಕ್ಕೋತ, ಕಿತ್ತಲೆ, ಹಲಸು, ಪನ್ನೇರಲೆ, ಅನಾನಸು, ಪಪ್ಪಾಯಿ, ನೇರಳೆ, ಮಾವು, ಬಾಳೆ ಮುಂತಾದವಲ್ಲದೆ ಬೆಂಬಾರ್ಲ, ಕಾಕಿ, ಮುಂತಾದ ಚಿಕ್ಕ ಜಾತಿಯ ಹಣ್ಣುಗಳು ಹಲವು. ಮಾವಿನಹಣ್ಣು ಬಿಡುವ ಕಾಲದಲ್ಲಿ ಕಾಡು ಮಾವು ಆರಿಸಿ ಹೆರಕಿ ತರುತ್ತಿದ್ದೆವು. ಮಾವಿನ ಹಣ್ಣಿನ ಸಾಸಿವೆ, ರಸಾಯನ ಹೀಗೆ ಅಡುಗೆಗೂ ಹಣ್ಣುಗಳ ಬಳಕೆ. ಬಾಳೆಕಾಯಿ ಗರಿಗರಿ (ಚಿಪ್ಸ್), ಒಣಗಿಸಿದ ಬಾಳೆಹಣ್ಣು ಇಷ್ಟ ಗದ್ದೆಕೆಲಸದ ಸಮಯದಲ್ಲಿಯೂ ಎರಡೆರಡು ಹಲಸಿನ ಹಣ್ಣು ಕಡಿದು ಎಲ್ಲರೂ ಸೇರಿ ತಿನ್ನುವುದುಂಟು. ಕೈ ಮೇಣವಾಗದಂತೆ ಕೈಗೆ ಎಣ್ಣೆ ಹಚ್ಚಿಕೊಂಡು ಸಿದ್ಧವಾಗುತ್ತಿದ್ದೆವು. “ನನಗೆ ದೊಡ್ಡ ಸ್ಯಾಡೆ” ಅಂತ ಜಗಳಾಡುತ್ತಿದ್ದೆವು. ಅತಿಥಿಗಳಿಗೆ ಹಿರಿಯರಿಗೆ ಹಣ್ಣು ಬಿಡಿಸಿ ಕೊಡುತ್ತಿದ್ದೆವು. ಹಲಸಿನ ಹಣ್ಣಲ್ಲೂ ಬಿಳುವ, ಕೆಂಪ ಎಂಬ ಬಗೆಗಳು. ಮಳೆಗಾಲದಲ್ಲಿ ಸಂಜೆ ಕಾಫಿಯ ಜೊತೆಗೆ ಗರಿಗರೀ ಹಲಸಿನ ಹಪ್ಪಳ ಬಲುರುಚಿ! ಸಿಹಿ ಹಪ್ಪಳವನ್ನು ಹಾಗೆ ಚಪ್ಪರಿಸುತ್ತಿದ್ದೆವು.

ಹಾಂ! ದೊಡ್ಡವರು ಮಾತಾಡುವಾಗ ನಡುವೆ ಬಾಯಿ ಹಾಕಿದರೆ ‘ನಿಂಗೆಂತ ಗೊತ್ತು ಅಮ್ಟೆಕಾಯಿ’ ಅನ್ನುತ್ತಿದ್ದರು. ಬಹುಶಃ ಪರಿಸರದಲ್ಲಿರುವ ಅಮ್ಟೆಕಾಯಿ ಬಿಟ್ಟರೆ ನಿನಗೆ ಹೊರಜಗತ್ತಿನ ಜ್ಞಾನ ಇಲ್ಲ ಅಂತಲೋ ಏನೋ.....

ಅಂತೆ ಕಂತೆ... ಹೀಗೂ ಉಂಟೆ!

ಮಲೆನಾಡಿನಲ್ಲಿ ಅಂತೆಕಂತೆ ಕಥೆಗಳು ಬಹಳ! ಅಲ್ಲಿ ಭೂತ ಕಾಕು (ಕೂಗು) ಹಾಕುವುದಂತೆ! ಅವರ ಮನೆಯ ಚಾವಡಿಯ ತೊಲೆ ಅಡಿಯಲ್ಲಿ ಮಲಗಿದವರನ್ನು ಭೂತ ಎತ್ತಿ ಹಾಕುವುದಂತೆ! ರಾತ್ರಿಯಲ್ಲಿ ಆ ಹಾದಿಯಲ್ಲಿ ಬಂದರೆ ಝಲ್ ಝಲ್ ಗೆಜ್ಜೆ ಶಬ್ದ ಕೇಳುತ್ತದಂತೆ! ಅಲ್ಲಿ ರಾತ್ರಿ ಹೊತ್ತು ಹೊತ್ತೆ ಹೋಗುವುದು ಕಾಣುತ್ತದಂತೆ. ಅಡಿಕೆ ಕದಿಯಲು ಮರ ಹತ್ತಿದವರನ್ನು ಕೆಳಗಿಳಿಯದಂತೆ ನಾಗರಹಾವು ಮರ ಸುತ್ತಿ ಕುಳಿತಿತ್ತಂತೆ! ಆ ದೇವಾಲಯದಲ್ಲಿ ನಡು ರಾತ್ರಿ ಹಸಿದು ಬಂದವರಿಗೆ ಯಾವುದೋ ಹೆಂಗಸು ಊಟ ನೀಡಿದಳಂತೆ! ಬೆಳಗಾದರೆ ಇವರು ಕಂಡ ಹೆಂಗಸು ಅಲ್ಲಿರಲಿಲ್ಲವಂತೆ. ಇಂತಹ ಹಲವು ಅಂತೆ-ಕಂತೆ ಕತೆಗಳು ಹೀಗೂ ಉಂಟೆ! ಎಂದು ಕೇಳುಗರಿಗೆ ಸಖೇದಾಶ್ಚರ್ಯ ಮೂಡಿಸುತ್ತವೆ. ಕೇಳಿದ ಇಂತಹ ಭೂತಪ್ರೇತದ ಕತೆಗಳು ರಾತ್ರಿಯಲ್ಲಿ ಭಯಹುಟ್ಟಿಸುತ್ತಿದ್ದವು.

ಮಲೆನಾಡಿನ ಮನೆಯ ತೋಟಗಳಲ್ಲಿ ಭೂತದ ಕಲ್ಲು, ನಾಗರಕಲ್ಲು ಇತ್ಯಾದಿ ಇರುವುದುಂಟು. ನಾಗರ ಪಂಚಮಿಯಂದು ನಾಗರ ಕಲ್ಲಿನ ಸುತ್ತ ಬೆಳೆದ ಕಳೆ ತೆಗೆದು ನಾಗನಿಗೆ ಪೂಜೆ ಸಲ್ಲಿಸುವುದರಿಂದ, ಕಲ್ಲು ನಾಗರಕೆ ಭಕ್ತಿಯ ಪೂಜೆ. ನಿಜದ ನಾಗರ ಕಂಡರೆ ಏನೋ ಆತಂಕ! ಏನೋ ತಪ್ಪಾಗಿರಬೇಕು ಎಂಬ ಕಳವಳ. ನೋಡುಗರಿಗೆ ನಡುಕ ಹುಟ್ಟಿಸುವ ಕಾಳಿಂಗ ಸರ್ಪ ಕಂಡರಂತೂ, ಅದು ಯಾವ ದಿಕ್ಕಿಗೆ ಹೋಯಿತೆಂಬುದರ ಮೇಲೆ ಅದು ಶುಭವೋ ಅಶುಭವೋ ಎಂದು ತರ್ಕಿಸುತ್ತಾರೆ. ಮಲೆನಾಡಿನಲ್ಲಿ ಕೆಲವು ಪ್ರಾಣಿ ಪಕ್ಷಿಗಳ ಚಲನವಲನ ಕೂಗು ಮುಂತಾದವುಗಳಿಗೆ ವಿಶೇಷ ಅರ್ಥವಿದೆ (ಶಕುನ)

ಕರುವಿಗೊಂದು ಹೆಸರು

ದನ ಕರು ಹಾಕಿದ್ದರಿಂದ ಇನ್ನು ಕರಾವಿಗೆ ತೊಂದ್ರೆಯಿಲ್ಲ ಅಂತ ದೊಡ್ಡವರು ಸಂತಸಗೊಂಡರೆ, ಅಂಗಳದಲ್ಲಿ ಬಡಬಡನೆ ಅತ್ತಿಂದಿತ್ತ ಓಡಾಡುವ ಕರುವಿನೊಂದಿಗೆ ಆಡಲು ನಮಗೆ ಖುಷಿ. ಕರುಗಳಿಗೆ ಯೋಚಿಸಿ ಒಳ್ಳೆಯ ಹೆಸರನ್ನಿಡುತ್ತಿದ್ದೆವು. ಗಂಡಾದರೆ, ದಾಮೋಧರ, ಭುಜಂಗ, ದಾಸ, ಬಲರಾಮ ಇತ್ಯಾದಿ. ಹೆಣ್ಣಾದರೆ ಗಂಗೆ, ಕನಕ, ಸೀತೆ, ದಾಸಿ, ಹೀಗೆ.. ಕೋಣಗಳ ಹೆಸರು ಸಾಧಾರಣವಾಗಿ ಕಾಳ..... ಬೆಳ್ಳ. ಆದರೆ ಎಮ್ಮೆಯ ಹೆಸರು ಬೆಳ್ಳಿ, ಕುಮ್ಮಿ ಹೀಗೇನಾದರೂ ಆಗಿರುತ್ತಿತ್ತು, ಎಮ್ಮೆ ಮಣಕ ಅಂದರೆ ಇನ್ನೂ ಕರು ಹಾಕದ್ದು. ನಾಯಿಗಳಿಗೂ ಟೈಗರ್, ಜಿಮ್ಮಿ, ಟಾಮಿ..... ಮುಂತಾದ ಹೆಸರುಗಳನ್ನಿಡುತ್ತಿದ್ದೆವು. ನಾಯಿ ಮರಿಗೆ ಚೈನು ಕಟ್ಟಿ, ಅದಕ್ಕೆ ಏನೆಲ್ಲ ಕಲಿಸಲು ಹೋಗಿ ಗೋಳಾಡಿಸುತ್ತಿದ್ದೆವು. ಮಲೆನಾಡಿನ ಮನೆಗಳಲ್ಲಿ ನಾಯಿಗಳ ಪ್ರಾಮಾಣಿಕತೆ ಬಗ್ಗೆ ಹಲವಾರು ಕತೆಗಳು ಕೇಳಿಬರುತ್ತವೆ. ನೀರವ ರಾತ್ರಿಗಳಲ್ಲಿ ಜೋರಾಗಿ ನಾಯಿಗಳು ಕೂಗಿಕೊಂಡರೆ..... ಏಕೆ ಕೂಗುತ್ತವೆಂದು ಆತಂಕವಾಗುತ್ತದೆ. ರಾತ್ರಿ ಹೊತ್ತಿನಲ್ಲಿ ಜಗಳವಾಡುವ ಬೆಕ್ಕುಗಳು ಮಾಡುವ ಶಬ್ದವೂ ಒಂದು ರೀತಿಯ ಗಾಬರಿ ಹುಟ್ಟಿಸುವಂತಹುದೇ. ಜಾನುವಾರುಗಳಂತೆ ನಾಯಿ ಬೆಕ್ಕುಗಳನ್ನು ಅತಿ ಪ್ರೀತಿಯಿಂದ ಸಾಕುವುದನ್ನು ಮಲೆನಾಡಿನಲ್ಲಿ ಕಾಣಬಹುದು. ನಾವು ಜಗಳವಾಡುವಾಗ ಯಾರಾದರೂ ಸುಳ್ಳು ಹೇಳಿದರೆ ಕರಿನಾಯಿ ಹೇಲು ತಿಂದಂಗೆ ಅನ್ನುತ್ತಿದ್ದೆವು. ಹಾಗೆಯೇ ಜಗಳದಲ್ಲಿ ಆಣೆ ಭಾಷೆ ಹಾಕುವುದೂ ಇತ್ತು. ಕರುಗಳಿಗೆ ತೋಟದಿಂದ ಬಾಳೆಹಂಬೆ ಹೆರಕಿತರುವುದು. ಕರುವಿನ ಮೈ ತೊಳೆಸುವುದು (ಹಾಗೇ ನಾಯಿ ಮರಿಯದೂ ಸಹ!) ಇವೆಲ್ಲ ಒಂದು ರೀತಿಯ ಆಟವೇ ಆಗಿತ್ತು. ದನಕರುಗಳನ್ನು ಅತಿ ಪ್ರೀತಿಯಿಂದ ನೋಡಿಕೊಳ್ಳುವುದನ್ನು ಮಲೆನಾಡಿನಲ್ಲಿ ಕಾಣಬಹುದು. ನಮ್ಮೂರಲ್ಲಿದ್ದ ಪದ್ದಜ್ಜಿ ದನಕರುಗಳೊಂದಿಗೆ ಸದಾ ಮಾತಾನಾಡುತ್ತಲೇ ಇರುತ್ತಿದ್ದರು. ಅಜ್ಜಿ ಹೇಳಿದರೆ ಕೊಟ್ಟಿಗೆಯತ್ತ ಹೆಜ್ಜೆ ಹಾಕುತ್ತಿದ್ದವು. ಅಜ್ಜಿ ಬೈದರೆ ಅಂಬಾ ಎಂದು ಕೂಗುವುದನ್ನು ನಿಲ್ಲಿಸುತ್ತಿದ್ದವು. ಅಜ್ಜಿ ದೂರದಾಗ ಅವೆಷ್ಟು ವ್ಯಥೆ ಪಟ್ಟವೋ ಏನೋ.....

ಮಂಚಿಗೆ ಕಾವಲು!

ಬೆಳೆ ಬೆಳೆಯುವುದಷ್ಟೇ ಅಲ್ಲ, ಅದನ್ನು ಉಳಿಸಿಕೊಳ್ಳುವುದೂ ರೈತ ಕಷ್ಟವೇ. ಫಸಲು ಬಂದ ಗದ್ದೆಗೆ ಹಂದಿಗಳು ದಾಳಿ ಇಡುವುದು ಸಾಮಾ ರಾತ್ರಿಯ ಹೊತ್ತಿನಲ್ಲಿ ಅಂಗಳದ ತುದಿಯಲ್ಲಿ ನಿಂತು ಜೋರಾಗಿ ಕೂಗಿ ಹಂದಿಗಳ ಹೆದರಿಸಿ ಓಡಿಸುತ್ತಾರೆ. ಗದ್ದೆಯ ನಡುವೆ ಮಂಚಿಗೆ ಕಟ್ಟಿ ಕಾವಲು ಕಾಯುತ್ತಾ ಮರ, ಮುಟ್ಟು, ಸೋಗೆಯನ್ನು ಉಪಯೋಗಿಸಿ ಒಂದಿಬ್ಬರು ಕುಳಿತುಕೊಳ್ಳುವ ಮಾಡಿರುತ್ತಾರೆ. ರಾತ್ರಿ ಹೊತ್ತಿನಲ್ಲಿ ಡಬ್ಬಿ ಬಡಿಯುತ್ತಾ ಆಗಾಗ ಕೂಗು ಹಾಕು ಕಾಡುಪ್ರಾಣಿಗಳು ದಾಳಿ ಇಡದಂತೆ ನೋಡಿಕೊಳ್ಳುತ್ತಾರೆ.

ಬೇಟೆಗೆ ಹೋಗಿ ಮೊಲ, ಕಾಡುಬೆಕ್ಕು, ಹಂದಿಗಳನ್ನು ಬೇಟೆಯಾಡುವವ ಇದ್ದಾರೆ. ಕಾಡಿನಲ್ಲಿ ಸಾಧಾರಣವಾಗಿ ಹಂದಿಗಳು ಗದ್ದೆಗೆ ಬರುವ ಗಿಂಡಿಯ ಅಂದಾಜು ಮಾಡಿ ಅಲ್ಲಿ 'ಕೋವಿ' ಕಟ್ಟುತ್ತಾರೆ. ಹಂದಿಗಳ ಕಾಲು ದಾ ತಾಗಿದೊಡನೆ ಕೋವಿ ಈಡಾಗುತ್ತದೆ. ರಾತ್ರಿಯಲ್ಲಿ ಕೋವಿ ಈಡಾದರೆ ಬೆ ಕಾಡಿಗೆ ಹೋಗಿ ಸತ್ತಿರಬಹುದಾದ ಪ್ರಾಣಿಯ ಪತ್ತೆ ಹಚ್ಚುತ್ತಾರೆ. ಕೋವಿ ಕಟ್ಟುವು ಒಂದು ಕಲೆ.

ಗದ್ದೆಯ ನಡುವೆ ಅಲ್ಲಲ್ಲಿ ಬೆದರು ಗೊಂಬೆ ಮಾಡಿ ನಿಲ್ಲಿಸಿ ಪಕ್ಷಿಗಳ ಕಾ ತಡೆಯಲು ಪ್ರಯತ್ನಿಸುತ್ತಾರೆ. ಒಂದು ಕೋಲಿಗೆ ಮಡಿಕೆ ಸಿಕ್ಕಿಸಿ, ಒಂದಿಷ್ಟು ಒಣ ಹುಲ್ಲು ಸೇರಿಸಿ ಹಳೇ ಷರಟು ನೇತು ಹಾಕಿದರಾಯ್ತು. ಹೀಗೆ ಬೆಳೆ ಬೆಳೆಯನ್ನು ರಕ್ಷಿಸಲು ಹಲವಾರು ಉಪಾಯಗಳನ್ನು ಮಾಡುತ್ತಾರೆ. ನಾವು ಹಗಲು ಹೊತ್ತಿನಲ್ಲಿ ಮಂಚಿಗೆಯಲ್ಲಿ ಹತ್ತಿ ಕುಳಿತು ಆಟವಾಡುತ್ತಿದ್ದೆವು. ಬೇಟೆ ಹೋದವರ ಸಾಹಸ ವೃತಾಂತವನ್ನು ಕೇಳಿ ಆನಂದಿಸುತ್ತಿದ್ದೆವು. ಹಗಲಿನಲ್ಲಿ ಗದ್ದೆಗೆ ಯಾವುದಾದರೂ ದನ ನುಗ್ಗಿದರೆ ಒಂದೇ ಸಮನೆ ಓಡಿ ಹೋಗಿ ದನವನ್ನು ಓಡಿಸುತ್ತಿದ್ದೆವು. ಎಷ್ಟೋ ಬಾರಿ ಬೇಲಿ ನುಸುಳಿ ಬಂದ ಜಾನುವಾರುಗಳು ದಾಟಲಾಗದೆ ಸಿಕ್ಕಿ ಹಾಕಿಕೊಂಡು ಚೆನ್ನಾಗಿ ಲಕ್ಕಿ ಬರ್ಲಿನಲ್ಲಿ ಹೊಡೆದದ್ದಿದೆ. ಹಾಗೆಯೇ ನಮ್ಮ ಮನೆಯ ದನ ಅಥವಾ ಎತ್ತು ರಾತ್ರಿ ಕೊಟ್ಟಿಗೆಗೆ ಬಾರದಿದ್ದರೆ

ಯಾರ ಗದ್ದೆಗೆ ಅಥವಾ ಕಾಫಿತೋಟಕ್ಕೆ ನುಗ್ಗಿತೋ..... ಯಾರಾದರೂ 'ದೊಡ್ಡಿ'ಗೆ ಹೊಡೆದರೋ ಎಂಬ ಚಿಂತೆ ಕಾಡುತ್ತಿತ್ತು.

ನಮ್ಮ ದನದ ಕೊಟ್ಟಿಗೆಯಲ್ಲಿ ತುಂಬಾ ಲಕ್ಷಣವಾಗಿದ್ದ ಕನಕಿ ದನವನ್ನು ದುರ್ಗದಗುಡ್ಡದ ತಪ್ಪಲಿನಲ್ಲಿ ಹುಲಿ ಹಿಡಿಯಿತಂತೆ ಎಂಬ ವಾರ್ತೆ ಕೇಳಿ ನಾವು ತುಂಬಾ ದುಃಖಿತರಾಗಿದ್ದೆವು. ಬಹುಶಃ ಈಗ ಕಾಡಿನಲ್ಲಿ ಹುಲಿಗಳಿಲ್ಲ. ಕೆಲವೇ ಕೆಲವರು ಹಿರಿಯರು ಹುಲಿಯನ್ನು ಕಂಡವರು ಇದ್ದರು. ಅವರ ಬಾಯಲ್ಲಿ ಅವರ ಅನುಭವ ಕೇಳಲು ನಮಗೆ ಖುಷಿಯಾಗುತ್ತಿತ್ತು.

ಬರಿಯಕ್ಕಿ ದೋಸೆ ಕಾಯಿ ಚಟ್ನಿ

ಮಲೆನಾಡಿನ ಆಹಾರಗಳಲ್ಲಿ ಅಲ್ಲಿ ಬೆಳೆವ ಅಕ್ಕಿಯೇ ಸಹಜವಾಗಿ ಪ್ರಧಾನ, ಅನ್ನವೇ ದೇವರು! ಬೆಳಗಿನ ತಿಂಡಿಗೂ ಅಕ್ಕಿಯನ್ನೇ ಬಳಸುವುದು ಹೆಚ್ಚು. ಸಾಂಬಾರು, ಸಾರು, ಸಾಸಿವೆ, ಗೊಜ್ಜು, ಪಲ್ಯ, ತಂಬುಳಿ, ಮಜ್ಜಿಗೆಹುಳಿ, ಹುಳಿಶಾಸ, ಕಾಯಿರಸ, ಅಂಡುಸುಟ್ಟು ಹುಳಿ. ಹೀಗೆ ವೈವಿಧ್ಯಮಯ ಅಡುಗೆಯಲ್ಲಿ ಮಲೆನಾಡಿನ ಹೆಣ್ಣು ಮಕ್ಕಳು ಹುಷಾರು! ಬೋಂಡ, ಚಕ್ಕುಲಿ, ಕೋಡುಬಳೆ, ಅತ್ರಸ, ಅರಲು, ಕಾಯಿಪಾಕ, ಅಪ್ಪಾಲು, ಉಂಡೆಗಳೇ ಮುಂತಾದ ತಿನಿಸನ್ನೂ ಇವರು ಬಾಯಿರುಚಿಗೆ, ಹಬ್ಬಕ್ಕೆ ಅಥವಾ ಅತಿಥಿಗಳು ಬಂದಾಗ ಮಾಡುವುದುಂಟು. ಬೆಳಗಿನ ತಿಂಡಿಗೆ ಉದ್ದಿನ ದೋಸೆ, ಕೊಟ್ಟು ದೋಸೆ, ಬರಿಯಕ್ಕಿ ದೋಸೆ, ಮಜ್ಜಿಗೆ, ಕಡಬು, ಹಲಸಿನ ಕಡಬು, ಅಕ್ಕಿ ರೊಟ್ಟಿ (ಉಬ್ರೊಟ್ಟಿ) ಎಣ್ಣೆರೊಟ್ಟಿ, ಅಕ್ಕಿ ತರಿ ಉಪ್ಪಿಟ್ಟು, ಪತ್ರೊಡೆ ಇತ್ಯಾದಿ ಹಲವು ತಿನಿಸುಗಳು.

ಬರಿಯಕ್ಕಿ ದೋಸೆಗೆ ನೀರು ದೋಸೆ ಅಂತ ಕನ್ನಡ ಜಿಲ್ಲೆಯಲ್ಲಿ ಕರೆಯುತ್ತಾರೆ. ಕೊಟ್ಟಿಗೆಹಾರದಲ್ಲಿ ನೀರು ದೋಸೆ ಖ್ಯಾತಿಯ ಹೋಟೆಲ್ ಇದೆ. ನಗರಗಳಲ್ಲಿ ಬೆಳಿಗ್ಗೆ ಬ್ರೆಡ್ ಜಾಮ್ ಅಥವಾ ಎರಡು ಇಡ್ಲಿ ಇಲ್ಲವೇ ಒಂದು ಹಿಡಿ ಉಪ್ಪಿಟ್ಟು ಒಂದು ಲೋಟ ಟೀ ಕುಡಿದರೆ ತಿಂಡಿ ಆದಂತೆ!

ನಾವು ಬಾಲ್ಯದಲ್ಲಿ ತಿಂಡಿ ತಿನ್ನುತ್ತಿದ್ದ ಪರಿಯೇ ಬೇರೆ. ಊಟ ಮಾಡಿದ ಹಾಗೇ ಹೊಟ್ಟೆ ತುಂಬಾ ತಿನ್ನುತ್ತಿದ್ದೆವು. ತಿಂಡಿಗೆ ಮುಟ್ಟಿಸಿಕೊಳ್ಳಲು ತುಪ್ಪ, ಜೇನುತುಪ್ಪ ಅಥವಾ ಚಟ್ನಿ. ಒಂದೆರಡು ಸುತ್ತು ಆದ ಮೇಲೆ ಮಜ್ಜಿಗೆ ಹಾಕಿಕೊಂಡು ಕೊನೆಯ ಸುತ್ತು ಏನೇ ತಿಂಡಿ ಇರಲಿ ಮೊಸರು ಯಾ ಮಜ್ಜಿಗೆಯೊಂದಿಗೇ ಮುಕ್ತಾಯ!

ಹಿಂದೆ ಅವಿಭಕ್ತ ಕುಟುಂಬಗಳೇ ಹೆಚ್ಚು ಇರುತ್ತಿತ್ತು. ಮನೆಯಲ್ಲಿ ಕನಿಷ್ಠ ಹತ್ತು ಹದಿನಾಲ್ಕು ಜನ ಮಾಮೂಲು. ಹಿಂದಿನ ದಿನವೇ ಗಂಟೆಗಟ್ಟಲೇ ಕಡೆದು ಮಾರನೆ ದಿನ ಗಂಟೆಗಟ್ಟಲೆ ಒಲೆ ಮುಂದೆ ಕೂತು ನವಿರಾದ ತೆಳ್ಳನೆಯ ಬರಿಯಕ್ಕಿ ದೋಸೆಯನ್ನು ಬಿಸಿಬಿಸಿಯಾಗಿ ನೀಡುವುದಕ್ಕೆ ಅದೆಷ್ಟು ತಾಳ್ಮೆ ಬೇಕು!

ಕಾಯಿ ಜುಟ್ಟನ್ನು ಎಣ್ಣೆಗದ್ದಿ ಕಾವಲಿ ತಿಕ್ಕಿ ಬರಿ ಅಕ್ಕಿ ದೋಸೆ ಹುಯ್ಯುವ ಕ್ರಮವೇ ಬೇರೆ. ಕಾಯಿ ಚಟ್ನಿಯ ಜೊತೆಗೆ ಅದೆಷ್ಟು ದೋಸೆ ತಿನ್ನುತ್ತಿದ್ದೆವೋ. ಅಮ್ಮ ಚಿಕ್ಕಮ್ಮಂದಿರಿಗೇ ಗೊತ್ತು! ತಿಂಡಿಯ ನಡುವೆ ಕಾಫಿಯೂ ಎರಡೋ ಮೂರೋ ಸುತ್ತು ಆಗುತ್ತಿತ್ತು. ಆರೋಗ್ಯಕ್ಕೆ ಹೀಗೆ ತಿನ್ನುವುದು ಎಷ್ಟರಮಟ್ಟಿಗೆ ಸರಿ ಎಂಬ ಪ್ರಶ್ನೆ ನಮ್ಮನ್ನೆಂದೂ ಆಗ ಕಾಡುತ್ತಿರಲಿಲ್ಲ. ಮಲೆನಾಡಿನಲ್ಲಿ ಊಟ, ತಿಂಡಿ ಹಸಿವು ಹಿಂಗುವವರೆಗಲ್ಲ ಹೊಟ್ಟೆ ತುಂಬುವವರೆಗೆ! ಸಾಕು ಎಂದ ಮೇಲೂ ಒಂದಿಷ್ಟು ಬಡಿಸಿದರೆ ತಾಯಂದಿರಿಗೆ ಸಮಾಧಾನ.

ತಾಯತದಿಂದ ತಾಪತ್ರಯ ದೂರ

ಹಿಂದೆ ಮಲೆನಾಡಿನಲ್ಲಿ ಕಾಯಿಲೆ ಕಸಾಲೆಗೆ ನಾಟಿ ಔಷಧವನ್ನೇ ಹೆಚ್ಚಾಗಿ ಅವಲಂಬಿಸುತ್ತಿದ್ದರು. ತೀರಾ ಅನಿವಾರ್ಯವಾದಾಗ ಪಟ್ಟಣದ ವೈದ್ಯರ ಬಳಿ ಹೋಗುತ್ತಿದ್ದರು. ಹೀಗೆ ವೈದ್ಯರ ಬಳಿಗೆ ಹೋಗುವಾಗ ಔಷಧ ತರಲು ಖಾಲೀ ಶೀಷ ಹುಡುಕಿ ತೆಗೆದುಕೊಂಡು ಹೋಗುತ್ತಿದ್ದರು. ಆಸ್ಪತ್ರೆಗಳಲ್ಲಿ ಬಣ್ಣ ಬಣ್ಣದ ಔಷಧಿ ಇರುತ್ತಿತ್ತು. ಜ್ವರಕ್ಕೆ ಕೊಡುವ ಔಷಧಿ ಸಿಹಿಯಾಗಿರುತ್ತಿತ್ತು. ಮನೆಯಲ್ಲಿ ಕಸ್ತೂರಿ ಮಾತ್ರ ಸದಾ ಇರುತ್ತಿತ್ತು.

ಮಲೆನಾಡಿನ ಹಳ್ಳಿಗಳಲ್ಲಿ ಸಾಧಾರಣವಾಗಿ ನಾಟಿ ಔಷಧಿ ಕೊಡುವವರು, ಮಂತ್ರಿಸಿದ ತಾಯತ ಕೊಡುವವರು, ನಿಮಿತ್ತ ಹೇಳುವವರು ಒಬ್ಬರಾದರೂ ಇರುತ್ತಾರೆ. ಮಂತ್ರಿಸಿದ ತಾಯತದ ಪರಿಣಾಮ ಮುಖ್ಯವಾಗಿ ನಂಬಿಕೆಯನ್ನೇ ಆಧರಿಸಿದ್ದು.

ನಿಮಿತ್ತ ಹೇಳುವುದು ಒಂದು ಶಾಸ್ತ್ರ, ಕವಡೆ ಶಾಸ್ತ್ರ ಅಂತಲೂ ಅದನ್ನು ಕರೆಯುತ್ತಾರೆ. ಒಂದು ದೊಡ್ಡ ಮಣೆಯ ಮೇಲೆ ಸಾಲಾಗಿ ದೊಡ್ಡ ದೊಡ್ಡ ಹನ್ನೆರಡು ಕವಡೆಗಳನ್ನು ಮುಂದೆ ಇಟ್ಟು ನಡುವೆ ಚಿಕ್ಕ ಕವಡೆಗಳ ರಾಶಿಯನ್ನು ಮುಷ್ಠಿಯಿಂದ ಮಂತ್ರಪಠಿಸಿ ಎತ್ತಿ ಹಾಕುತ್ತಾರೆ. ಅಂಗಾತ ಬಿದ್ದ ಕವಡೆಗಳನ್ನು ಎಣಿಸಿ ಪಂಚಾಂಗ ನೋಡಿ ಶಾಸ್ತ್ರ ಹೇಳುತ್ತಾರೆ. ಶಾಸ್ತ್ರ ಕೇಳಲು ಬಂದವನು ಮಣೆಗೆ ನಮಸ್ಕರಿಸಿ ತಾನು ತಂದ ನಾಣ್ಯವನ್ನು ಯಾವುದಾದರೂ ಒಂದು ಕವಡೆಯ ಮುಂದೆ ಇಡಬೇಕು. "ನೀನು ದೇವಕ್ಕೆ ಹೇಳಿಕೊಂಡ ಹರಕೆಯನ್ನು ನಡೆಸಿಲ್ಲ ಅದಕ್ಕೆ ಹೀಗಾಗಿದೆ" ಅಂದರೆ ಆತ "ಈ ವರ್ಷ ಅನುಕೂಲ ಆಗ್ಲಿಲ್ಲ. ದೇವರೇ ಏನಾದರೂ ಅನುಕೂಲ ಮಾಡಿಕೊಟ್ಟರೆ ಹರಕೆ ಸಲ್ಲಿಸುತ್ತೇನೆ" ಅನ್ನುತ್ತಾನೆ. ಈ ಪರಿಯಲ್ಲಿ ಕೆಲವು ಪ್ರಶ್ನೋತ್ತರ ನಡೆದ ಮೇಲೆ ಆತ ನೆಮ್ಮದಿಯಿಂದ ಹಿಂದಿರುಗುತ್ತಾನೆ. ಮುಖ್ಯವಾಗಿ ದೂರದಿಂದ ಬಂದ ಆತ ತನ್ನ ಕಷ್ಟಗಳನ್ನೆಲ್ಲಾ ಮತ್ತೊಬ್ಬರಲ್ಲಿ ಹೇಳಿಕೊಂಡು ಹಗುರಾಗಿರುತ್ತಾನೆ, ಶಾಸ್ತ್ರ ಹೇಳುವವರೂ ಅವನಿಗೆ ಸೂಕ್ತ ಸಲಹೆಯನ್ನು ಕೊಟ್ಟು, ಮಾನಸಿಕವಾಗಿ ಧೈರ್ಯ ತುಂಬಿ ಕಳಿಸುತ್ತಾರೆ.

ಮಲೆನಾಡಿನ ಮನೆಗಳಲ್ಲಿ ಹೆಚ್ಚು ಅನಾರೋಗ್ಯಕ್ಕೆ ತುತ್ತಾದವರು ಇದ್ದಾಗ ಅವ್ವ ಕೊಡುವುದೇ ಮದ್ದು. ಎಡೆಬಿಡದೆ ಮಳೆಯಲ್ಲಿ ದಟ್ಟಕಾನನದ ನಡುವೆ ಇರುವ ಒಂಟಿ ಮನೆಗಳಲ್ಲಿ ಅಸಹಾಯಕತೆ ಎದುರಾದಾಗ ನಗರದ ವೈದ್ಯರನ್ನು ಕರೆಯುವುದು ದೂರದ ಯೋಚನೆ ಮಾಡಬೇಕಾದ ಕೃತಿ. ಅಂತಹ ಸಂದರ್ಭಗಳಲ್ಲಿ ಮುಗ್ಧವಾದ ಹಾಡುತ್ತಲೇ ಕಾದಿರುವ ಮನಸ್ಸಿಗೆ ಧೈರ್ಯ ತುಂಬುತ್ತಿತ್ತು.

ಮಲೆನಾಡಿನ ಜನರ ಸಹಕಾರ ಸಹಬಾಳ್ವೆಯ ಮನೋಭಾವ ಎತ್ತಿ ಹಿಡಿಯುವ ಮನೆಯ ಹಬ್ಬ ಹರಿದಿನಗಳಿಗೆ ಹೆಚ್ಚಾಗಿ ಸ್ಪಂದಿಸಿ ತುಂಬು ಹೃದಯದ ಸಹಕಾರ ನೀಡುತ್ತಿದ್ದರು. ಬೇಸಿಗೆಯಂತಹ ಕೆಲಸಗಳಲ್ಲಿ ಬಳಗದ ಸಂಬಂಧಿಕರು ಬರುತ್ತಿದ್ದರು. (ಅದಕ್ಕೆ ನಾವುಗಳ್ ಹೆಂಗಸರೇ ಹೆಚ್ಚು) ಯಾರಿಗಾದರೂ ಬಿಡುವಿಲ್ಲ ಅಂತ ಗೊತ್ತಾದರೆ ನೋಡಿಕೊಂಡು ಹೋಗುವಂತೆ ಅಕ್ಕಪಕ್ಕದವರು ಬರುತ್ತಿದ್ದರು. ಏನಾದರೂ ಸಹಾಯ ಬೇಕಾ ಅಂತ ಕೇಳುತ್ತಿದ್ದರು. ಹೀಗೆ ನೆರೆಹೊರೆ, ಬಂಧು-ಮಿತ್ರರು ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ಪ್ರಾಮಾಣಿಕ ಸ್ವಾಭಾವಿಕ ತಮ್ಮ ಕರ್ತವ್ಯವೆಂದು ಆಚರಣೆಗಳಿಗೆ ನಿಷ್ಠೆಯಿಂದ ನಡೆಸುತ್ತಿದ್ದರು.

ಹಾರ್ಮೋನಿಯಲ್ಲಿ ಸರಿಗಮ

ಮಲೆನಾಡಿನ ಕೆಲವು ಮನೆಗಳಲ್ಲಿ ತಬಲ, ಹಾರ್ಮೋನಿಯಂ, ಮದ್ದಳೆ, ತಾಳ, ಚಂಡೆ, ಕೊಳಲು ಮುಂತಾದ ವಾದ್ಯಗಳನ್ನು ಕಾಣಬಹುದು. ಬಿದಿರಿನ ಕೊಳಲನ್ನು ಮನಬಂದಂತೆ ನುಡಿಸುತ್ತಿದ್ದೆವು. ಹಾರ್ಮೋನಿಯಂನಲ್ಲಿ ಶ್ರುತಿ ಹಿಡಿಯುತ್ತಿದ್ದೆವು. ಭಾಗವತರು ಕರೀ ಎರಡು-ಬಿಳೀ ಮೂರು ಎಂದೇನೋ ಹೇಳಿ ಶೃತಿ ಇಟ್ಟುಕೊಟ್ಟರೆ ಒಂದೇ ಸಮನಾಗಿ ದನಿ ಬರುವಂತೆ ಬಾರಿಸುವುದಷ್ಟೇ ನಮ್ಮ ಕೆಲಸ. ನಾವೂ ಹಾರ್ಮೋನಿಯಂನಲ್ಲಿ ಸರಿಗಮ ಗುರುತಿಸಿ, 'ಹಸೆಗೇಳು ರಾಮಚಂದ್ರ' ಅಂತ ಹಾಡು ಹೇಳುತ್ತಾ ಬಾರಿಸುತ್ತಾ ಆನಂದ ಪಡುತ್ತಿದ್ದೆವು. ಮನಬಂದಂತೆ ಮದ್ದಳೆ ಬಡಿದು ಪದ ಹೇಳುತ್ತಿದ್ದೆವು. ಮದ್ದಳೆಯ ಒಂದು ಬದಿಯಲ್ಲಿ ಕರ್ಣ ಇರುತ್ತದೆ. ಮತ್ತೊಂದು ಬದಿಗೆ 'ಬೋನ' ಹಾಕುತ್ತಿದ್ದರು. ಅನ್ನ ಬೂದಿಯನ್ನು ಕಲಸಿ ಬೋನ ಹಾಕುತ್ತಿದ್ದರು. ಬೋನ ಹಾಕಿದ ನಂತರ ಧ್ವನಿಯಲ್ಲಿ ಬದಲಾವಣೆ ಇರುತ್ತಿತ್ತು. (ಹಾಗೆಯೇ ಹಲಗೆ ಬಾರಿಸುವ ಮೊದಲು ಅದನ್ನು ಸಣ್ಣ ಬೆಂಕಿಯಲ್ಲಿ ಕಾಯಿಸುವುದುಂಟು.) ಇನ್ನು ತಾಳ ಭಜನೆಯಲ್ಲಿ ಉಪಯೋಗವಾಗುತ್ತಿತ್ತು. ಶಾಸ್ತ್ರೀಯವಾಗಿ ಸಂಗೀತ ವಾದ್ಯಗಳನ್ನು ನುಡಿಸುವುದನ್ನು ಕಲಿಯಲು ಮಲೆನಾಡಿನಲ್ಲಿ ಅನುಕೂಲವಿರಲಿಲ್ಲವಾದರೂ, ಬೇಸರ ಕಳೆಯಲು ಇಂತಹ ವಾದ್ಯಗಳನ್ನು ತಂದಿಟ್ಟುಕೊಂಡು, ಬಲ್ಲವರು ಬಂದಾಗ ಒಂದಷ್ಟು ದಿನ ಉಳಿಸಿಕೊಂಡು, ಹೇಳಿಸಿಕೊಂಡು ತಮ್ಮ ಬಿಡುವಿನ ಸಮಯವನ್ನು ಆನಂದದಿಂದ ಕಳೆಯುವ ಕಲಾಭಿರುಚಿ ಮಲೆನಾಡಿನವರದು. ತಾವೇ ತಯಾರಿಸಿದ ಕೊಳಲನ್ನು ಸುಂದರವಾಗಿ ನುಡಿಸಬಲ್ಲ ದನಗಾಹಿಗಳನ್ನು ಮಲೆನಾಡಿನಲ್ಲಿ ಕಾಣಬಹುದು. ಹಾಡಿ ಹಾಡಿ ರಾಗ ಅನ್ನುವ ಹಾಗೆ ಸ್ವಪ್ರಯತ್ನದಿಂದ ಸಂಗೀತವಾದ್ಯಗಳನ್ನು ಸುಂದರವಾಗಿ ನುಡಿಸಬಲ್ಲವರೂ ಅಲ್ಲಲ್ಲಿ ಕಾಣಿಸುತ್ತಾರೆ. ಗ್ರಾಮದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಅಥವಾ ಬೇರೆಯವರ ಮನೆಯಲ್ಲಿ ಕಾರ್ಯಕ್ರಮಕ್ಕೆ ಬೇಕಾದ ಸಂಗೀತ ವಾದ್ಯಗಳು ಯಾರ್ಯಾರ ಮನೆಯಲ್ಲಿದೆಯೋ ಅಲ್ಲಿಂದ ತರಿಸಿಕೊಳ್ಳಲಾಗುತ್ತಿತ್ತು. ಹೆಚ್ಚಾಗಿ ಹರಿಕಥೆ, ತಾಳಮದ್ದಳೆ ಮತ್ತು ಭಜನೆಗಳಲ್ಲಿ ಈ ವಾದ್ಯಗಳ ಉಪಯೋಗವಾಗುತ್ತಿತ್ತು.

ಗಣಪತಿ ಬಂದ.....!

ಎಲ್ಲೆಲ್ಲೂ ಗಣಪತಿ ಹಬ್ಬದ ಸಡಗರ ಸಂಭ್ರಮ! ಬೀದಿ ಬೀದಿಗಳಲ್ಲಿ ದೊಡ್ಡ ದೊಡ್ಡ ಗಣಪತಿಯನ್ನು ಇರಿಸಿ, ದಿನವೂ ಮನರಂಜನಾ ಕಾರ್ಯಕ್ರಮಗಳನ್ನು ಏರ್ಪಡಿಸುವುದನ್ನು ನಗರಗಳಲ್ಲಿ ಕಾಣುತ್ತೇವೆ. ಆ ವೈಭವ ಅಲಂಕಾರ ನೋಡುವುದಕ್ಕೆ ಚಂದ! ಎಲ್ಲರಿಗೂ ಕುಟುಂಬ ಸಮೇತರಾಗಿ ವಿವಿಧ ರೀತಿಯ ಗಣಪತಿ ದರ್ಶನ ಮಾಡಿ, ಸುಂದರ ಕಾರ್ಯಕ್ರಮಗಳನ್ನು ನೋಡುವ ತವಕ! ಮಲೆನಾಡಿನಲ್ಲಿ ಮನೆ ಮನೆಗಳಲ್ಲಿ ಗಣಪತಿ ಹಬ್ಬವನ್ನು ಸರಳವಾಗಿ ಸುಂದರವಾಗಿ ಆಚರಿಸುತ್ತಾರೆ. ಬಾಲ್ಯದಲ್ಲಿ ನಮಗೆ ಗಣಪತಿ ಹಬ್ಬ ಬಂತೆಂದರೆ ಬೇಕಾದಷ್ಟು ಚಕ್ಕುಲಿ, ಕಾಯಿ ಕಡುಬು ತಿನ್ನುವ ಖುಷಿ, ಬಾಯಿ ತುಂಬಾ ಪಂಚಕಜ್ಜಾಯ ಹಾಕಿಕೊಂಡು 'ಬುಧವಾರ' ಅನ್ನುವ ಚಪಲ! ನಾವೂ ಹಿತ್ತಲ ಮಣ್ಣಲ್ಲಿ, ಕೆಸುವಿನ ಎಲೆಯ ಮೇಲೆ ಸುಂದರ ಗಣಪತಿಯ ಮೂರ್ತಿಯನ್ನು ಮಾಡಿ ಹೆಮ್ಮೆ ಪಟ್ಟುಕೊಳ್ಳುತ್ತಿದ್ದೆವು. ಮಲೆನಾಡಿನಲ್ಲಿ ಗಣಪತಿ ಹಬ್ಬ ಕೇವಲ ಒಂದು ಹಬ್ಬವಲ್ಲ, ಅದೊಂದು ವ್ರತ! ಶ್ರದ್ಧೆ ಮತ್ತು ಭಕ್ತಿಯಿಂದ ಹಬ್ಬ ಇನ್ನೂ ಕೆಲವು ದಿನ ಇರುವಾಗಲೇ ಬೇಕಾದ ತಯಾರಿ ಮಾಡಿಕೊಳ್ಳುತ್ತಾರೆ. ಗೆಜ್ಜೆವಸ್ತ್ರ ಮತ್ತು ಬಣ್ಣದ ಕಾಗದಗಳನ್ನು ಉರುಟಾಗಿ ಕತ್ತರಿಸಿ ಮಂಟಪದ ಅಲಂಕಾರಕ್ಕೆಂದು ಹಲವು ಸಿದ್ಧತೆ ಮಾಡುತ್ತಾರೆ. ವಿಶೇಷ ತಿನಿಸುಗಳು ಆಗಬೇಕು. ಈ ಹಬ್ಬದ ದಿನ ಸಕತ್ತಾಗಿ ಕುಮಚೆಟ್ ಹಾರುತ್ತಿದ್ದೆವು. ಯಾರು ಎಷ್ಟು ಹಾರಿದರೆಂದು ಎಣಿಸಿ ಸ್ಪರ್ಧಾತ್ಮಕವಾಗಿ ಜಗಿಯುತ್ತಿದ್ದುದುಂಟು. ಕಾಲ ಹಿಮ್ಮಡಿ ಕುಂಡೆಗೆ ತಾಕದಿದ್ದರೆ ಲೆಕ್ಕದಿಂದ ವಜಾ! ಒಟ್ಟಿನಲ್ಲಿ ಹಬ್ಬ ಅಂದರೆ ನಮಗೆಲ್ಲ ಮಜಾ! ಚೌತಿಯಂದು ಚಂದ್ರನನ್ನು ನೋಡಬಾರದೆಂದು ಹಿರಿಯರು ಹೇಳುತ್ತಿದ್ದುದಕ್ಕೋ ಏನೋ, ನಮಗೆ ಅವತ್ತು ತಪ್ಪದೇ ಚಂದ್ರ ಕಾಣುತ್ತಿದ್ದ! ಪಕ್ಕದಲ್ಲಿ ಬಾವಿ ಇಲ್ಲದಿದ್ದರೆ, ದೊಡ್ಡ ಕಡಾಯದಲ್ಲೇ ಗಣಪತಿಯನ್ನು ಬಿಡುವುದುಂಟು, ಮಾರನೇ ದಿನ ಗದ್ದೆಯ ಹಾದಿಯುದ್ದಕ್ಕೂ ಜಾಗಟೆ ಬಡಿದುಕೊಂಡು ಹೋಗಿ ಹಳ್ಳಕ್ಕೆ ಬಿಟ್ಟು ಬರುವುದೇ ಚೆಂದ! ಹೀಗೆ ಮಲೆನಾಡಿನ ಹಬ್ಬಗಳಲ್ಲಿ ಸರಳತೆ, ಆನಂದ, ಭಕ್ತಿ ಎಲ್ಲವನ್ನು ಕಾಣಬಹುದು. ನಿರಾಡಂಬರ, ಸರಳ, ಸುಂದರ! ವಿನಾಯಕನು ಎಲ್ಲರಿಗೂ ಒಳಿತನ್ನು ಮಾಡಲಿ.

ಶ್ರೀ ಕೃಷ್ಣ ಕೊನೆ ತೆಗೆದ!

ಅಡಿಕೆ ಕೊಯ್ಲಿನಲ್ಲಿ ಕೊನೆ ತೆಗೆಯುವರಿಗೆ ಭಾರೀ ಬೇಡಿಕೆ. ಕೊ ತೆಗೆಯುವುದು ಸುಲಭದ ಕೆಲಸವಲ್ಲ, ಅಪಾಯಕಾರಿ ಕೆಲಸ. ತುಂಬ ಎಚ್ಚರಿಕೆಯಿಂ ಮಾಡಬೇಕಾದ ಸಾಹಸದ ಕೆಲಸ. ಈ ಕೊನೆ ತೆಗೆಯುವ ಕ್ರಿಯೆಯ ಬಗ್ಗ ಯೋಚಿಸುವಾಗ ನನ್ನ ಮನದಲ್ಲಿ ಕೆಲವು ಸಾಲುಗಳು ಮೂಡಿ ಕವನವಾಯ್ತು ಕೆಲವು ಸಾಲು ಹೀಗಿದೆ.

ಶ್ರೀಕೃಷ್ಣ ಕೊನೆ ತೆಗೆದ
ಅರ್ಜುನನು ನೇಣ್ ಹಿಡಿದ
ಗೀತೆಯಾ ಗೊಂಚಲೇ ಭುವಿಗೆ ಬಂತು
ಜ್ಞಾನದಾ ಸಂಪತ್ತ ಇಳೆಗೆ ತಂತು!

ಯಾವ ಮರ ಹತ್ತಿದರೆ ಸುತ್ತಮುತ್ತಲಿನ ಹಲವು ಮರಗಳಿಗೆ ದಾಟಬಹುದೆಂದು ಯೋಚಿಸಿ ಮರಹತ್ತಿ ಭಾರವಾದ ಕೊನೆಯನ್ನು ತೆಗೆದು ಸಮಭಾರದಲ್ಲಿ ಸೊಂಟಕ್ಕೆ ಕಟ್ಟಿದ ನೇಣಿನಲ್ಲಿ ಇಳಿಯಬಿಡಬೇಕು (ಅನುಭವದ ಹೊರೆಭಾರ, ಸುಖ ಕಷ್ಟ ಸಮಪಾಲು) ನೇಣು ಹಿಡಿಯುವುದೂ ಸುಲಭದ ಕೆಲಸವಲ್ಲ..... ರಭಸದಿಂದ ಬರುವ ಕೊನೆಯ ವೇಗವನ್ನು ಎದುರಿಸಿ ನಿಲ್ಲಬೇಕು. ಏಕಾಗ್ರತೆ ಬೇಕು. ಕೊನೆ ಜಾರಿ ಉರುಳಿ ಉದುರಾಗದಂತೆ ಎಚ್ಚರವಹಿಸಬೇಕು. ದೃಢ ಮನಸ್ಸು, ಬಿಗಿ ಹಿಡಿತ ಭರಭರನೆ ಬರುವ ಭಾರಕೆ ಕಂಪಿಸುವ ನೇಣು, ಕ್ಷಣ ಜಾರಿ, ಕೈಸೇರೆ ಒಡೆತನದ ಹುಮ್ಮಸ್ಸು!

ಸಿಂಗಾರ ನೋಡಲು ಚೆಂದ! ಹೊಂಬಾಳೆಯಲ್ಲಿ ಊಟ ಮಾಡುವುದೆಂದರೆ ಮಕ್ಕಳಿಗೆ ಖುಷಿ! ಯಜಮಾನನಿಗಾದರೋ "ಉದುರುದುರು ಹುಡುಕಿ ಹೆರಕಿ ಏನೂ ಕಳೆದುಕೊಂಡಿಲ್ಲವೆಂದು ಅನ್ನಿಸಿದಾಗ ಮನಸ್ಸಿಗೇನೋ ನೆಮ್ಮದಿ!" ಕೊನೆತುಂಬಾ ಹಸಿರು ಕಾಯಿಗಳು! ಮನದೊಳಗೆ ನೂರಾರು ವಿಚಾರಗಳು!

ಬೇಯಬೇಕು, ಒಣಗಬೇಕು, ಬೆಲೆ ಬರಲು ಕಾಯಬೇಕು!

ಭೂತ ಕೋಲ!

ಮಕರ ಸಂಕ್ರಾತಿಯ ನಂತರ ಸುಮಾರು ಮೇ ತಿಂಗಳವರೆಗೆ ಕರಾವಳಿ ಹಾಗೂ ಮಲೆನಾಡಿನಲ್ಲಿ ಭೂತ ಕೋಲಗಳು ಅಲ್ಲಲ್ಲಿ ನಡೆಯುವುದುಂಟು. ಕರಾವಳಿಯಷ್ಟು ಇದು ಮಲೆನಾಡಿನಲ್ಲಿ ಜನಪ್ರಿಯವಲ್ಲದಿದ್ದರೂ ಅನೇಕ ದೇವಾಲಯ ಮತ್ತು ಜಮೀನುದಾರರ ಮನೆಯಲ್ಲಿ ಕೋಲ ನೇಮ ನಡೆಸುವುದುಂಟು.

ನಮ್ಮ ಊರಿನ ಆಪ್ತ ಜೈನರೊಬ್ಬರ ಮನೆಯಲ್ಲಿ ಕೋಲ ನಡೆಸುತ್ತಿದ್ದರು. ಈಗಲೂ ನಡೆಸುತ್ತಾರೆ. ನಮಗೆ ಬಾಲ್ಯದಲ್ಲಿ ಕೋಲ ನೋಡಲು ಕುತೂಹಲ, ಬಣ್ಣ, ಕುಣಿತ, ಎಲ್ಲವೂ ವಿಶಿಷ್ಟ! ರಾತ್ರಿಯಿಡೀ ನಡೆಯುವ ಈ ಕೋಲವನ್ನು ನೋಡಲು ನೂರಾರು ಜನ ಸೇರಿರುತ್ತಾರೆ. ಕೋಲ ನೋಡುತ್ತಾ ಕುಳಿತವರ ನಡುವೆ ಯಾರಿಗೋ ಮೈ ಮೇಲೆ ಬಂದು ಬಿಡುತ್ತಿತ್ತು.

ಗೌಜೋ ಗೌಜು! ಎಲ್ಲರ ಗಮನ ಅತ್ತ ಸರಿಯುತ್ತಿತ್ತು. ಕೋಲ ನಡೆಯುವಾಗ ಇಂತಹ ಪ್ರಸಂಗಗಳು ಸಾಮಾನ್ಯ. ಆ ಸಂಗೀತ ವಾದ್ಯ ನೃತ್ಯದ ಪ್ರಭಾವಕ್ಕೆ ಭಾವುಕರು ಮೈ ಮರೆತರೆ ಆಶ್ಚರ್ಯವೇನಿಲ್ಲ. (ಇತ್ತೀಚಿಗೆ ಬೆನ್ನಿಹಿನ್ ಬಂದಾಗ ಅದ್ಭುತ ಬೆಳಕಿನ ವ್ಯವಸ್ಥೆಯ ವೇದಿಕೆಯ ಮೇಲೆ ನೂರಾರು ಜನ ಸಂಗೀತ ನುಡಿಸಲಾರಂಭಿಸಿದಾಗ ಅನೇಕ ಅಶಕ್ತ ಅನಾರೋಗ್ಯ ಪೀಡಿತ ಜನ ಕಂಪಿಸಿ ಮೈ ಮರೆತರಂತೆ ಎಂಬುದನ್ನು ನೀವು ಕೇಳಿರಬಹುದು) ಜಕಣಿ, ಪಂಜುರ್ಲಿ, ಜಟಿಗ ಮುಂತಾದ ಅನೇಕ ದೈವಗಳಿಗೆ ಅವರದ್ದೇ ಆದ ಕತೆ, ಭಿನ್ನ ವೇಷ ಇದೆ.

ಕೋಲಕ್ಕೆ ವೇಷ ಕಟ್ಟುವವರ ಕಲಾಗಾರಿಕೆಯನ್ನು ಯಾರಾದರೂ ಮೆಚ್ಚಲೇಬೇಕು. ಕೈಗೆ ಕಾಲಿಗೆ ಗಗ್ಗರ ಹಾಕಿಕೊಂಡು ಝಣ್ ಎಂದು ಕುಣಿಯುವ ದೈವ ತಟ್ಟನೆ ಮೆಟ್ಟಿಲು ಹತ್ತಿ ಮನೆಯೊಳಗೆ ಇಣುಕಿ ಎಲ್ಲರ ಮುಖವನ್ನೂ ವೀಕ್ಷಿಸಿ ತಲೆ ಅಲ್ಲಾಡಿಸುವಾಗ ಅಬ್ಬಾ..... ನಮ್ಮ ಬಳಿಗೆ ಬಂದು ಬಿಡುತ್ತದೋ ಎಂಬ ಭಯ ನಮಗೆ! ಎಣ್ಣೆ ತೆಗೆದುಕೊಳ್ಳುವುದು, ಇತ್ಯಾದಿಯೆಲ್ಲಾ ಆದ ಮೇಲೆ

ಕೊನೆಯಲ್ಲಿ ಪ್ರಶ್ನೆ–ಉತ್ತರ! ಜನರು ಕೇಳುವ ಪ್ರಶ್ನೆಗಳಲ್ಲಿ ಅನಾರೋಗ್ಯ, ಜಮೀನು ವಿವಾದ ಮುಂತಾದವೇ ಹೆಚ್ಚು. ಈಗ ಕೋಲ ನೋಡುವಾಗ ಕೆಲವೊಮ್ಮೆ ನಾವು ಮೈಮೇಲೆ ಬಂದವರಂತೆ ಅಣಕವಾಡಿ ಹಿರಿಯರಿಂದ ಬೈಸಿಕೊಳ್ಳುತ್ತಿದ್ದೆವು! ಕೋಲ ನಡೆಸುವುದರಿಂದ ಊರಿಗೆ ಒಳಿತೆಂಬ ನಂಬಿಕೆ. ದೈವ ಸುಮ್ಮನೆ ಬಿಡದಲ್ಲವೇ? ನಲಿವ ದೈವದ ಮುಂದೆ ಕರ ಜೋಡಿಸಿ ಹರಕೆ ಸಲ್ಲಿಸಿದಾಗ ಅನೇಕರಿಗೆ ನೆಮ್ಮದಿ! ದೈವದ ಕೃಪೆಯಿಂದ ಬದುಕು ಸಫಲವಾಗಬಹುದೆಂಬ ಆಶಯ!

ಜಿಗಳೆ ಅಂಟಿದ ಹಾಗೆ

ಮಳೆಗಾಲ ಬಂತೆಂದರೆ ಮಲೆನಾಡಿನಲ್ಲಿ ಜಿಗಳೆಗಳು ಪ್ರತ್ಯಕ್ಷವಾಗಿ ಬಿಡುತ್ತವೆ. ಸುಳಿವು ಕೊಡದ ಇವುಗಳ ಇರುವಿಕೆ ಗೊತ್ತಾಗುವುದು ಕಾಲು ತುರಿಸಿದಾಗಲೇ! ಸದ್ದಿಲ್ಲದೇ ರಕ್ತಹೀರಿ ಬಿಟ್ಟಿರುತ್ತವೆ. ಕಾಲಿನಲ್ಲಿ ಜಿಗಳೆ ಇಲ್ಲ ಅಂತ ಖಾತರಿ ಪಡಿಸಿಕೊಂಡು ಕಾಲು ತೊಳೆದುಕೊಂಡು ಕುಳಿತರೆ, ಕಾಲಬೆರಳ ಸಂದಿಯಲ್ಲೆಲ್ಲೋ ತುರಿಕೆ ಅನ್ನಿಸಿ ತುರಿಸಲು ಹೋದರೆ ತಣ್ಣನೆ ರಬ್ಬರಿನಂತಿರುವ ಜಿಗಳೆ ಬೆಚ್ಚಿ ಬೀಳಿಸುತ್ತದೆ! ಎಳೆದರೂ ಸುಲಭಕ್ಕೆ ಬರುವುದಿಲ್ಲ. ಜಿಗಳೆಯನ್ನು ನಿಷ್ಕ್ರಿಯಗೊಳಿಸಲು ಸುಣ್ಣವನ್ನು ಹಾಕುವುದುಂಟು. ಮನುಷ್ಯ ಪ್ರಾಣಿಗೆ ಎಲ್ಲ ಪ್ರಾಣಿಗಳೂ ಭಯಪಟ್ಟರೂ ಈ ಜಿಗಳೆ ಮತ್ತು ಸೊಳ್ಳೆಗಳು ಭಯಪಡುವುದಿಲ್ಲ!

ಅತೀ ಹಿಂದೆ ವೈದ್ಯಕೀಯ ಪಂಡಿತರುಗಳಿಗೆ ರಕ್ತ ಪರೀಕ್ಷೆ ನಡೆಸಲು ಜಿಗಳೆಗಳೇ ಶಸ್ತ್ರವಾಗಿದ್ದಿತೆಂದು ಪ್ರತೀತಿ! ಕೆಲವು ಬಾರಿ ಜಿಗಳೆಗಳು ರಕ್ತಹೀರಿ ಕೆಂಪಾಗಿ ಬಿದ್ದು ಹೋಗಿರುತ್ತವೆ ಗಮನಕ್ಕೇ ಬಾರದಂತೆ. ಮಲೆನಾಡಿನಲ್ಲಿ ಮಳೆಗಾಲದಲ್ಲಿ ಜಿಗಳೆಯಿಂದ ತಪ್ಪಿಸಿಕೊಳ್ಳುವುದು ಅಸಾಧ್ಯ. ಚಿಕ್ಕವರಿದ್ದಾಗ ಕಾಲಲ್ಲಿ ಜಿಗಳೆ ಕಂಡರೆ ತೆಗೆಯಲು ಹೇಸಿಗೆ! "ಜಿಗಳೆ ಜಿಗಳೆ" ಅಂತ ಕೂಗಿ ಕುಣಿದಾಡಿದಾಗ, ಯಾರಾದರೂ ಬಂದು ಎಳೆದು ತೆಗೆಯುತ್ತಿದ್ದರು. ನಮಗೆ ಇಷ್ಟವಿರದಿದ್ದವರು ಜೊತೆಗೇ ಬಂದು ಬಿಟ್ಟರೆ ಒಳ್ಳೆ ಜಿಗಳೆ ಅಂಟಿದ ಹಾಗೆ ಅಂಟಿಕೊಂಡ ಅನ್ನುವುದುಂಟು. ಅವನಿಂದ ಬಿಡಿಸಿಕೊಳ್ಳುವುದೇ ಕಷ್ಟವಾಯ್ತು ಅಂತ. ಹಾಗೇ ಬಡ್ಡಿಗೆ ಸಾಲಕೊಡುವವರ ಬಗ್ಗೆಯೂ ಅವನು ಜಿಗಳೆ ಹಾಗೆ, ರಕ್ತ ಹೀರುತ್ತಾನೆ ಅನ್ನುವುದುಂಟು! ನಕ್ಷತ್ರಿಕನ ಕಾಟ ಒಂದು ಬಗೆಯಾದರೆ ಜಿಗಳೆಯ ಕಾಟ ಮತ್ತೊಂದು ಬಗೆ! ಬಾಲ್ಯದಲ್ಲಿ ಜಿಗಳೆಯ ಚಲನವನ್ನು ಗಮನಿಸಿ ಆಶ್ಚರ್ಯ ಪಡುತ್ತಿದ್ದೆವು. ನಮ್ಮ ಕಾಲಲ್ಲೇ ಜಿಗಳೆ ಇದ್ದಾಗ ಭಯ! ಬೇರೆಯವರ ಕಾಲಲ್ಲಿದ್ದರೆ ನಗು! ನೆನೆದು ಬಿದ್ದಿರುವ ತರಗೆಲೆಯ ಮೇಲೆಲ್ಲೋ ಇರುವ ಜಿಗಳೆಯ ಹಾಗೆ ಕೆಲವೊಮ್ಮೆ ಮನದಲ್ಲಿ ಅಸಂಗತ ವಿಚಾರಗಳು ಅಂಟಿಕೊಂಡು ಬಿಟ್ಟಿರುತ್ತವೆ. ಅವನ್ನು ತೆಗೆದು ಹಾಕುವುದು ಸುಲಭ ಸಾಧ್ಯವಲ್ಲ. ಆದರೆ ಸಾಧ್ಯ ಅಲ್ಲವೇ!

ಮನೆಯೊಳಗೆ ಉದಿಸಿದ ಸೂರ್ಯ

ಹಿಂದೆಲ್ಲಾ ಮಲೆನಾಡಿನ ಮನೆಗಳಿಗೆ ಪಾತ್ರೆಗೆ ಕಲಾಯಿ ಹಾಕುವವರು, ಹಾಸಿಗೆ ರಿಪೇರಿ ಮಾಡುವವರು ಮುಂತಾದವರೆಲ್ಲಾ ಭೇಟಿ ನೀಡಿ ಕೊಟ್ಟಿಗೆಯಲ್ಲೇ ಒಂದೆರಡು ದಿನ ಬಿಡಾರ ಹೂಡುತ್ತಿದ್ದರು. ಮನೆಯಲ್ಲಿ ಕಂಚು, ಹಿತ್ತಾಳೆ ಪಾತ್ರೆಗಳೇ ಅಧಿಕವಾಗಿ ಇರುತ್ತಿದ್ದರಿಂದ ಆಹಾರ ಕಿಲುಬು ಹತ್ತಬಾರದೆಂದು ಕಲಾಯಿ ಹಾಕಿಸುತ್ತಿದ್ದರು. ಪಾತ್ರೆಯ ಒಳಭಾಗ ಬೆಳ್ಳಿಪಾತ್ರೆಯ ಹಾಗೆ ಹೊಳೆಯುತ್ತಿದ್ದವು. ಸೋರುವ ಬಕೀಟುಗಳು ರಿಪೇರಿ ಕಾಣುತ್ತಿದ್ದವು.

ಹೊಸ ಹಾಸಿಗೆ ಸಿದ್ಧಪಡಿಸಿದಾಗ ಅದನ್ನು ಮತ್ತೆ ಮತ್ತೆ ಮುಟ್ಟಿ ನೋಡಿ ಮಲಗುವ ಖುಷಿಯೇ ಬೇರೆ. ಮಲೆನಾಡಿನ ಮನೆಗಳಲ್ಲಿ ಹಾಸಿಗೆ ಹಾಕುವುದು ಮತ್ತೆ ಆ ಥಡಿಗಳನ್ನು ಜೋಡಿಸಿ ಇಡುವುದೇ ಒಂದು ಕೆಲಸ. ಹೆಚ್ಚಿನ ಸಂಖ್ಯೆಯಲ್ಲಿ ಅತಿಥಿಗಳು ಬಂದರೆ ಜಮಖಾನವಂತೂ ಇದ್ದೇ ಇರುತ್ತದೆ. ಮನೆಗೆ ನೆಂಟರಿಷ್ಟರು ಬಂದಾಗ ಗ್ಯಾಸ್‌ಲೈಟ್ ಹಚ್ಚುತ್ತಿದ್ದರು. ಹೊಚ್ಚುವಾಗ ಹತ್ತಿ ಕೂರಬಾರದೆಂದು ಎಚ್ಚರಿಸುತ್ತಿದ್ದರೂ ನಮಗೆ ಅದು ಭಗ್ ಭಗ್ ಎಂದು ಹೊತ್ತುವುದನ್ನು ನೋಡುವ ಕುತೂಹಲ. ಭುಸ್ ಎಂಬ ಶಬ್ದದೊಂದಿಗೆ ಅದು ಉರಿಯುವಾಗ ಮನೆಯೊಳಗೇ ಸೂರ್ಯ ಉದಯಿಸುವ ಹಾಗೆ! ಒಂದು ರೀತಿಯ ಸಂಭ್ರಮದ ವಾತಾವರಣ ಮೂಡುತ್ತಿತ್ತು. ನೆಂಟರಿಷ್ಟರನ್ನು ಮಾತಾಡಿಸಿಕೊಂಡು ಹೋಗಲೆಂದೇ ಬರುವ ಅಕ್ಕಪಕ್ಕದ ಮನೆಯವರು ಹೊತ್ತು ಬಹಳ ಆಯ್ತೆಂದು ಹೊತ್ತೆ ಹಿಡಿದು ಹೊರಡುತ್ತಿದ್ದರು. ಅಡಿಕೆ ದಬ್ಬೆಗಳನ್ನು ಸಣ್ಣಗೆ ಸೀಳಿ ಹೊತ್ತೆಯನ್ನು ಕ್ಷಣದಲ್ಲಿ ತಯಾರಿಸುತ್ತಾರೆ. ಈ ಹೊತ್ತೆಗಳನ್ನು ಹಚ್ಚಿಕೊಂಡು ಅದು ಕೆಡದಂತೆ ಬೀಸುತ್ತಾ ಮೇಲ್ಮುಖವಾಗಿ ಹಿಡಿದು ಸಾಗುವುದೇ ಚಂದ!

ಕಡೆಗೋಲೇ ಗದೆ.....

ತಾಯಿ ಯಶೋದೆಯೋ, ಗೋಪಿಕಾ ಸ್ತ್ರೀಯರೋ ಮೊಸರು ಕಡೆಯುವ ಚಿತ್ರವನ್ನು ಈಗ ನೋಡುತ್ತೇವೆ. ಮಲೆನಾಡಿನ ಮನೆಮನೆಗಳಲ್ಲಿ ಪ್ರತಿ ದಿನವೂ ಮೊಸರು ಕಡೆಯುತ್ತಿದ್ದರು. ಸಾಧಾರಣವಾಗಿ ಅಡಿಗೆ ಮನೆಯ ಒಂದು ಮೂಲೆಯಲ್ಲಿ ಇದಕ್ಕಾಗಿ ಒಂದು ಚಿಕ್ಕ ಕಂಬ. ಕಂಬಕ್ಕೆ ಕಡಗೋಲು ಕಟ್ಟಿ ಅದನ್ನು ಮೊಸರು ತುಂಬಿದ ಪಾತ್ರೆಗೆ ಇಳಿಬಿಟ್ಟು, ಹಗ್ಗವನ್ನು ಎಳೆದಾಡುವುದಕ್ಕೆ ಒಂದಿಷ್ಟು ಕುಶಲತೆ ಬೇಕು. ಮೊಸರು ಕಡೆವುದು ಚಂದ. ಬೆಣ್ಣೆ ತೆಗೆದ ಮೇಲೆ ಮಜ್ಜಿಗೆ ಕುಡಿವುದಕ್ಕೆ ಆನಂದ! ನಾವು ಕಡೆಗೋಲನ್ನೇ ಗದೆಯನ್ನಾಗಿಸಿ ಆಟವಾಡುತ್ತಿದ್ದೆವು. ಹಾಲು ಅಥವಾ ಮಜ್ಜಿಗೆಯನ್ನು ಅಡಿಗೆ ಮನೆಯಲ್ಲಿ ಕಟ್ಟಿದ ಸಿಂಬಿಯಲ್ಲಿ ಇಡುತ್ತಿದ್ದರು. ಈಗ ಇವು ಕಾಣೆಯಾಗಿವೆ. ಬೆಕ್ಕಿಗೆ ಸಿಗದಿರಲಿ ಎಂದಿರಬೇಕು.

ಅಡಿಗೆ ಮನೆಯ ತೊಲೆಗಳಲ್ಲಿ ಸಾಧಾರಣವಾಗಿ ಸಾಲಾಗಿ ಕಟ್ಟಿದ ಬಂಡಸೌತೆ (ಬಣ್ಣದ್ಗಸೌತೆ)ಯು ಇರುತ್ತಿತ್ತು. ಈ ಸೌತೆಕಾಯಿಗೆ, ಹಲಸಿನ ಬೀಜ ಸೇರಿಸಿ ಮಾಡಿದ ಹುಳಿ ಅದ್ಭುತ! ಹಲಸಿನ ಬೀಜ, ಹುಣಸೆಬೀಜಗಳನ್ನು ಒಲೆಯಲ್ಲಿ ಸುಟ್ಟು ತಿನ್ನುತ್ತಿದ್ದೆವು. ಹಲಸಿನ ಬೀಜವನ್ನು ಒಂಚೂರು ಕತ್ತಿಯಲ್ಲಿ ಕೊಚ್ಚಿ ಹಾಕಿದರೆ ಸಿಡಿಯುವುದಿಲ್ಲ. ಇಲ್ಲವಾದರೆ 'ಡಬ್' ಎಂಬ ಶಬ್ದದೊಂದಿಗೆ ಬೂದಿ ಹಾರಿದಾಗ ಬೆಚ್ಚಿ ನಗುತ್ತಿದ್ದೆವು.

ಕೆಲವರು ಬಹಳಷ್ಟು ತರಕಾರಿ ಬೆಳೆದು ಗಾಡಿಯಲ್ಲಿ ಸಂತೆಗೆ ಒಯ್ಯುವುದುಂಟು. ಬದನೆಕಾಯಿ, ಬೆಂಡೆಕಾಯಿ, ತಿಂಗಳವರೆ, ಸೀಮೇಸೌತೆಕಾಯಿ, ಬಂಡಸೌತೆ, ಮುಳ್ಳುಸೌತೆ, ಟೊಮೊಟೋ, ಹೂಕೋಸು, ಮೂಲಂಗಿ ಹೀಗೆ ಹಲವು ತರಕಾರಿಗಳನ್ನು ಮಲೆನಾಡಿನಲ್ಲಿ ಬೆಳೆಯುತ್ತಾರೆ. ಸಾಧಾರಣವಾಗಿ ಮಲೆನಾಡಿನ ಮನೆಗಳಲ್ಲಿ ಸೀಮೆಸೌತೆ, ಕುಂಬಳಕಾಯಿ ಬಳ್ಳಿಗಳು, ಮನೆಯ ಹಿಂಬದಿ ಹಿತ್ತಲಲ್ಲಿ ಮೆಣಸಿನಕಾಯಿ ಮತ್ತಿತರ ನಾಲ್ಕಾರು ತರಕಾರಿ ಗಿಡ ಇರುತ್ತದೆ. ಸಾಧಾರಣವಾಗಿ ಗೃಹಿಣಿಯರು ಸಂಜೆಯ ಹೊತ್ತಿನಲ್ಲಿ ಹಿತ್ತಲಿನಲ್ಲಿ ತಿರುಗಾಡಿ, ಗಿಡಗಳ ಆರೈಕೆಯತ್ತ ಗಮನ ಹರಿಸುತ್ತಾರೆ. ಬಸಲೆಸೊಪ್ಪು ಹರವೆಸೊಪ್ಪು, ಒಂದೆಲಗ ಮುಂತಾದವನ್ನು ಬೆಳೆಯುತ್ತಾರೆ. ಮಲೆನಾಡ ಅಡುಗೆಗಳಲ್ಲಿ ತಂಬುಳಿಗಳು ರುಚಿ ಹಾಗೂ ವಿಶಿಷ್ಟ.

ಕಡೆಗೋಲಿನಿಂದ ಪ್ರಾರಂಭವಾದ ಲೇಖನ ತರಕಾರಿಗಳತ್ತ ಹೋಯಿತು. ಅಂದಹಾಗೆ ಮಲೆನಾಡಿನ 'ಮಜ್ಜಿಗೆ ಪಲ್ಯ'ವೂ ತುಂಬಾ ರುಚಿಕರ! ಮೊಸರು ಕಡೆಯುವುದಕ್ಕೆ ಕೆಲವು ಕಡೆ ಭಾರೀ ಬಿದಿರಿನ ಬೊಂಬು ಮತ್ತು ಗರಟ ಸಿಕ್ಕಿಸಿದ ಕೋಲನ್ನು ಉಪಯೋಗಿಸುತ್ತಾರೆ. ದಣಿದು ಬಂದವರಿಗೆ ಮಜ್ಜಿಗೆ ಬೆರೆಸಿದ ನೀರು ಅಂತ ನೀರು ಮಜ್ಜಿಗೆಗೆ ಕೊತ್ತಂಬರಿ ಸೊಪ್ಪು, ಹಸಿಮೆಣಸು, ಉಪ್ಪು ಬೆರೆಸಿ ಕೊಡುವುದುಂಟು. ಮಲೆನಾಡಿನ ಮಹಿಳೆಯರಿಗೆ ಕಡೆಯುವುದು, ಬೀಸುವುದು ತಪ್ಪಿದ್ದಲ್ಲ. ಬೀಸುವ ಕಲ್ಲು ಬಳಸಿ ತಮಗೆ ಬೇಕಾದ ಹಿಟ್ಟು ಅಥವಾ ತರಿ ತಯಾರಿಸುತ್ತಾರೆ. ಈಗ ವಿದ್ಯುತ್ ಬಂದ ಮೇಲೆ ಮಲೆನಾಡಿಗೂ ಮಿಕ್ಸಿ–ಗ್ರೈಂಡರ್‌ಗಳು ಬಂದಿವೆ. ಆದರೂ ಕಡೆಯುವ ಕಲ್ಲು, ಬೀಸುವ ಕಲ್ಲುಗಳನ್ನು ಮಲೆನಾಡಿನ ಮನೆಗಳಲ್ಲಿ ಈಗಲೂ ಕಾಣಬಹುದು.

ಅಂಗಳದಲ್ಲೇ ಕ್ಷೌರ!

ತಲೆಗೆ ಮುಂಡಾಸು ಕಟ್ಟಿಕೊಂಡು ಬಿಳಿಮೀಸೆಯ ನಗುಮುಖದ ಮುದುಕ ಬಂದರೆ ನಮಗೆ ಇವತ್ತು ಕ್ಷೌರ ಮಾಡುತ್ತಾರೆ ಅಂತ ಗೊತ್ತಾಗಿ ಬಿಡುತ್ತಿತ್ತು. ಅಂಗಳದ ಮೂಲೆಯಲ್ಲಿ ಮಣೆ ಇರಿಸಿಕೊಂಡು ಕೂತರೆ ಅಬ್ಬಾ! ಕ್ಷೌರ ಮುಗಿಯುವವರೆಗೂ ಒಂಥರ ಶಿಕ್ಷೆ ಅನುಭವಿಸಿದ ಹಾಗೆ. ಇಕ್ಕಳದ ಥರದ ಒಂದು ಯಂತ್ರ (ಮೆಷೀನ್ ಕಟ್) ದಿಂದ ಅವನು ತಲೆಯ ಹಿಂಭಾಗ ಮತ್ತು ಕಿವಿಯ ಸಂದುಗಳಲ್ಲಿ ಕೂದಲು ಕತ್ತರಿಸುವಾಗ ಕಣ್ಣಲ್ಲಿ ನೀರೇ ತುಂಬಿ ಬರುತ್ತಿತ್ತು. ಅದು ಯಾವ ಕಾಲದ ಆಯುಧವೋ..... ಒಳ್ಳೆ ಏಡಿಯ ಆಕಾರದ ಇಕ್ಕಳದಂತಿದ್ದ ಅದು ಗರಗರ ಎಂದು ಕುತ್ತಿಗೆಯ ಮೇಲ್ಭಾಗದಲ್ಲಿ ಹರಿದಾಡುತ್ತಿದ್ದರೆ ನಮಗೆ ಮೈಯೆಲ್ಲ ಝುಂ ಅನ್ನುತ್ತಿತ್ತು. ಒಂದಿಷ್ಟೂ ಕುತ್ತಿಗೆ ಎತ್ತದ ಹಾಗೇ ಗಟ್ಟಿಯಾಗಿ ನಮ್ಮ ತಲೆಯನ್ನು ಬಗ್ಗಿಸಿ ಹಿಡಿದಿರುತ್ತಿದ್ದ ಆ ಪುಣ್ಯಾತ್ಮ! ಅವನು ಬಂದರೆ ನಾವು ಕ್ಷೌರ ಮಾಡಿಸಿಕೊಳ್ಳುವುದಿಲ್ಲ ಅಂತ ಹಠ ಹಿಡಿಯುತ್ತಿದ್ದೆವು. ಅವನು ಹಳೆಯ ಕಾಲದವನು, ಚೆನ್ನಾಗಿ ಮಾಡುವುದಿಲ್ಲ ಅಂತ ಏನೇನೋ ಸಬೂಬು ಹೇಳಿ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೆವು. ನಾವು ಪೇಟೆಗೆ ಹೋದಾಗ ಮಾಡಿಸಿಕೊಳ್ಳುತ್ತೇವೆ ಅನ್ನುತ್ತಿದ್ದೆವು. ಅಲ್ಲಿ ಕ್ಷೌರದಂಗಡಿಯ ಎತ್ತರದ ತಿರುಗುವ ಕುರ್ಚಿ ನಮಗೆ ಖುಷಿಕೊಡುತ್ತಿತ್ತು. ಬಹುಶಃ ಕುರ್ಚಿಯಲ್ಲಿ ಅದಕ್ಕಿಂತ ಉತ್ತಮವೂ ಹಿತಕರವೂ ಆದ ಕುರ್ಚಿಯೇ ಇಲ್ಲ ಅಂತ ನಮಗನ್ನಿಸಿತ್ತು. ಮುಂದೆ ದೊಡ್ಡ ಕನ್ನಡಿ ಬೇರೆ! ಆ ವೈಭವವನ್ನು ಬಿಟ್ಟು ಅಂಗಳದ ತುದಿಯಲ್ಲಿ ಮಣೆ ಮೇಲೆ ಕುಳಿತು ಕ್ಷೌರ ಮಾಡಿಸಿಕೊಳ್ಳೋದು ಯಾಕೆ? ಅಂತ ನಮ್ಮ ತಕರಾರು. ನಮ್ಮ ಹಠದಿಂದ ಕೆಲವೊಮ್ಮೆ ಅವನು ಹಾಗೇ ಹಿಂದಿರುಗಬೇಕಾಗುತ್ತಿತ್ತು. ಸುಕ್ಕುಗಟ್ಟಿದ್ದರೂ ಸುಂದರವಾಗಿದ್ದ ಆ ಬಿಳಿಮೀಸೆಯ ಮುದುಕ, ಒಮ್ಮೊಮ್ಮೆ ಕ್ಷೌರ ಮಾಡಿಕೊಳ್ಳುವಾಗ ನೆನಪಾಗುತ್ತಾನೆ!

ಅಡಿಕೆ ಕೊಯ್ಲು

ಅಡಿಕೆ ಕೊಯ್ಲು ಶುರುವಾಯ್ತೆಂದರೆ ಮಲೆನಾಡಿನವರಿಗೆ ಪುರುಸೊತ್ತಿಲ್ಲ. ಎಲ್ಲರಿಗೂ ಕೈತುಂಬಾ ಕೆಲಸ. ಕೊನೆ ತೆಗೆಯುವವರಿಗೆ ಭಾರೀ ಬೇಡಿಕೆ. ತೆಗೆದ ಕೊನೆಗಳನ್ನು ಹೊತ್ತುತಂದು ಕೊಟ್ಟಿಗೆಯಲ್ಲಿ ಪೇರಿಸಿಡುವುದು. ಅಡಿಕೆ ಕೊನೆಯನ್ನು ಉದುರು ಮಾಡಿ ಅಂಗಳದಲ್ಲಿ ಸಾಲಿಗೆ, ಸುಲಿಯುವವರಿಗೆ ಅನುಕೂಲವಾಗುವಂತೆ ಸುರಿಯುವುದು. ನಾವು ಚಿಕ್ಕ ಮೆಟ್‌ಕತ್ತಿ ಮಣೆಯನ್ನು 'ನಂದು' ಅಂತ ಗುರುತಿಸಿಕೊಂಡು ಪುಟ್ಟ ಬುಟ್ಟಿಯನ್ನಿಟ್ಟುಕೊಂಡು ಅಡಿಕೆ ಸುಲಿಯುತ್ತಿದ್ದೆವು. ಮೊದಮೊದಲು ಮೂರು ಸಿಪ್ಪೆ ಮಾಡಿ ಸುಲಿದರೆ ಕ್ರಮೇಣ ಎರಡು ಸಿಪ್ಪೆ ಮಾಡಿ ಸುಲಿಯಲು ಕಲಿತೆವು. ಅಡಿಕೆ ಸುಲಿಯುವಾಗ ಇದು ಮಾಲಿಂಗ, ಗೋಟು, ಬೆನವ..... ಮುಕ್ಕಣ್ಣ ಅಂತೆಲ್ಲಾ ಗುರುತಿಸುತ್ತಿದ್ದೆವು.

ಅಡಿಕೆ ಸುಲಿಯಲು ಬಯಲು ಸೀಮೆಯಿಂದಲೂ ಜನ ಬರುತ್ತಿದ್ದರು. ಬೆಳಿಗ್ಗೆ ಎದ್ದೊಡನೆ ಅಡಿಕೆ ಸಿಪ್ಪೆಯನ್ನೆಲ್ಲಾ ಮಗೆದು ಗದ್ದೆಯಲ್ಲಿ ಒಂದೆಡೆ ರಾಶಿ ಹಾಕುತ್ತಿದ್ದೆವು. ಆ ರಾಶಿಯ ಮೇಲೆ (ಜಾರುಗುಪ್ಪೆ) ಆಡುತ್ತಿದ್ದೆವು. ಹೆಚ್ಚು ಬೆಳೆ ಇರುವವರು ದಿನವೂ ಮೂರ್‍ನಾಲ್ಕು ಹಂಡೆ ಬೇಯಿಸುವುದುಂಟು. ಮನೆಯ ಅಂಗಳದಲ್ಲಿ ಅಡಿಕೆ ಒಣಗಿಸಲು ಚಪ್ಪರ ಮೊದಲೇ ಸಿದ್ಧವಾಗಿರುತ್ತದೆ. ಅಡಿಕೆ ಮರದ್ದೇ ಕಂಬ, ತೊಲೆ ಮತ್ತು ದಬ್ಬೆಗಳಿಂದ ಸಿದ್ಧವಾಗುವ ಈ ಚಪ್ಪರದ ಮೇಲೆ ತಟ್ಟಿಗಳನ್ನು ಹಾಕಿ ಅದರ ಮೇಲೆ ಬೇಯಿಸಿದ ಅಡಕೆಯನ್ನು ಹರಡಿ ಒಣಗಿಸುತ್ತಾರೆ.

ಅಡಿಕೆ ತೊಲೆಗೆ ಭಾರಿಗಾತ್ರದ ಕುಂಟೆಗಳನ್ನು (ದಿಮ್ಮಿ) ಬೆಂಕಿ ಮಾಡಲು ಉಪಯೋಗಿಸುತ್ತಾರೆ. ಬೇಕಾದಷ್ಟು ಉರುವಲನ್ನು (ಕುಂಟೆ, ಸೌದೆ, ಹಾಳೆ) ಮೊದಲೇ ಸೌದೆ ಕೊಟ್ಟಿಗೆಯಲ್ಲಿ ಶೇಖರಿಸಿಟ್ಟಿರುತ್ತಾರೆ. ಸುರಿದ ಅಡಕೆಗಳನ್ನು ಹಂಡೆಯಲ್ಲಿ ಬೇಯಿಸುವಾಗ ಬಣ್ಣ ಬರಲು 'ಚೊಗರು' ಹಾಕುತ್ತಾರೆ. ಕೆಂಪುದ್ರವದಲ್ಲಿ ಅದ್ದಿತೆಗೆದಂತೆ ಹಬೆಯಾಡುವ ಅಡಿಕೆಗಳನ್ನು ಬುಟ್ಟಿಯಲ್ಲಿ ಹೊತ್ತು ಏಣಿ ಹತ್ತಿ ಚಪ್ಪರದ ಮೇಲೆ ಹಾಕುತ್ತಿದ್ದಂತೆ ಅದನ್ನು ಒಪ್ಪವಾಗಿ ಹರಗಲಾಗುವುದು. ದಿನವೂ ಸಂಜೆ ಅಡಿಕೆ ರಾಶಿ ಮಾಡಿ ಗೋಣಿ ಚೀಲ ಮುಚ್ಚುವುದು. ಬೆಳಿಗ್ಗೆ ಮತ್ತೆ

ಆಗುವುದು. ಸ್ವಲ್ಪ ಮೋಡ ಕವಿದು ಮಳೆ ಸುರಿಯುತ್ತದೆ ಅಂತಾದರೆ ಮಳೆ ಬರುತ್ತದೆ ಅಂತ ಎಲ್ಲರೂ ಚಪ್ಪರಕ್ಕೆ ಓಡಿ ಅಡಿಕೆ ರಾಶಿಮಾಡುವುದು. ಒಣಗಿದ ಅಡಕೆಗಳನ್ನು ಹಸ-ಬೆಟ್ಟೆ ಅಂತ ಆರಿಸಿ ಪ್ರತ್ಯೇಕಿಸಿ ಮೂಟೆ ಮಾಡಿ ಮಂಡಿಗೆ ಕಳಿಸುತ್ತಾರೆ. ನಾವು ದೊಡ್ಡವರೊಂದಿಗೆ ಈ ಎಲ್ಲ ಕೆಲಸಗಳಲ್ಲಿ ಖುಷಿಯಿಂದ ತೊಡಗಿಕೊಳ್ಳುತ್ತಿದ್ದೆವು.

ಭೇಣಿ–ಆಕಾರ

ಮಲೆನಾಡಿನಲ್ಲಿ ಅಡಿಕೆ ತೋಟ ಭೇಣಿ ಹಿಡಿಯುವುದು ಒಂದು ಭಾರೀ ವ್ಯವಹಾರ. ಅಡಿಕೆ ತೋಟ ನೋಡಿಯೇ ಎಷ್ಟು ಮರಗಳಿರಬಹುದು, ಎಷ್ಟು ಕೊನೆ ಹಿಡಿಯುತ್ತದೆ? ಎಷ್ಟು ಕ್ವಿಂಟಾಲ್ ಅಡಿಕೆಯಾಗಬಹುದು? ಸದ್ಯದ ಧಾರಣೆ ಏನು? ಕೊನೆ ತೆಗೆದು ಪರಿಷ್ಕರಿಸಿ ಮಂಡಿಗೆ ಕಳಿಸುವವರೆಗೆ ಆಗಬಹುದಾದ ಖರ್ಚು ಎಲ್ಲವನ್ನೂ ಲೆಕ್ಕಹಾಕಿ ಲಾಭ ಬರುವಂತೆ ಭೇಣಿ ಹಿಡಿಯುವುದಕ್ಕೆ ವ್ಯವಹಾರ ಜ್ಞಾನ ಅಗತ್ಯ. ಅಡಿಕೆ ಕೊಯ್ಲಿನ ತಲೆಬಿಸಿಯೇ ಬೇಡ ಅಂತ ಕೆಲವರು ತೋಟವನ್ನು ಭೇಣಿಗೆ ಕೊಟ್ಟು ಇಂತಿಷ್ಟು ಅಂತ ಹಣ ಪಡೆದುಬಿಡುತ್ತಾರೆ. ಇನ್ನು ಕೆಲವರು ಆಕಾರಕ್ಕೆ ಅಂತ ಕೊಡುತ್ತಾರೆ. ಇದೊಂದು ರೀತಿಯ ಒಪ್ಪಂದ. ಅಡಿಕೆ ಕೊನೆ ತೆಗೆಸಿ, ಸುಲಿಸಿ, ಬೇಯಿಸುವ ಪೂರ್ಣ ಕೆಲಸ ನಿರ್ವಹಿಸುವುದು. ಈ ಕೆಲಸಕ್ಕೆ ಹಣ ಪಡೆದುಬಿಡುತ್ತಾರೆ. ಅಡಿಕೆ ಧಾರಣೆ ಆಕಾರ ಮಾಡುವವರಿಗೆ ಪರಿಣಾಮ ಬೀರುವುದಿಲ್ಲ. ಅಡಕೆ ಧಾರಣೆಯ ಏರಿಳಿತ ಭೇಣಿ ಮಾಡುವವರ ಮೇಲೆ ಪರಿಣಾಮ ಬೀರುತ್ತದೆ. ಆದ್ದರಿಂದ ಭೇಣಿಯಲ್ಲಿ ರಿಸ್ಕ್ ಜಾಸ್ತಿ. ನಶೀಬಿದ್ದರೆ ಲಾಭವೂ ಜಾಸ್ತಿ. ಭೇಣಿಯಲ್ಲಿ ತೊಡಗಿಕೊಳ್ಳಲು ಕೈಯಲ್ಲಿ ಹಣವಿರಬೇಕು.

ಅದೇ ಗದ್ದೆಯಲ್ಲಿ ಭತ್ತ ಬೆಳೆಯಲು ಬೇರೆಯವರಿಗೆ ಕೊಟ್ಟರೆ ಗೇಣಿಗೆ ಕೊಡುವುದು ಅನ್ನುತ್ತಾರೆ. ನೀರಿನ ಸೌಲಭ್ಯ ಇರುವವರು ಭತ್ತದ ಎರಡನೇ ಬೆಳೆ ತೆಗೆಯುತ್ತಾರೆ. ಪೂರ್ತಿ ಗದ್ದೆಗಳಿಲ್ಲದಿದ್ದರೂ ಸ್ವಲ್ಪಭಾಗದಲ್ಲಿ ಬೆಳೆಯುತ್ತಾರೆ. ಇದನ್ನು ಕೋಡೆ ಗದ್ದೆ ಅಂತಲೂ ಅನ್ನುತ್ತಾರೆ. ಕೆಲವರು ಭತ್ತದ ಪ್ರಧಾನ ಬೆಳೆ ತೆಗೆದ ನಂತರ ದ್ವಿದಳಧಾನ್ಯ ಬೆಳೆವುದೂ ಉಂಟು ಶೇಂಗಾ ಇತ್ಯಾದಿ. ಗದ್ದೆ ಕೊಯ್ಲಾದ ಮೇಲೆ ಸಾಮಾನ್ಯವಾಗಿ ಜಾನುವಾರುಗಳನ್ನು ಗದ್ದೆಯಲ್ಲೇ ಮೇಯಿಸುವುದನ್ನು ಕಾಣಬಹುದು.

ಊಟಕ್ಕೆ ಕರೆಯೇ..... ಅಮ್ಮ ನೀನು.....

ಹಳ್ಳಿಯ ಶಾಲೆಗೆ ವರ್ಗಾವಣೆಯಾಗಿ ಬಂದ ಉಪಧ್ಯಾಯರು ಯಾರದಾದರೂ ಮನೆಯಲ್ಲಿ ತಂಗುವುದು ಅನಿವಾರ್ಯವಾಗಿತ್ತು. ಮಲೆನಾಡಿನವರಿಗೆ ಒಬ್ಬರು ಹೊರೆಯೇನೂ ಅಲ್ಲ. ನಾಲ್ಕು ಜನರೊಟ್ಟಿಗೆ ಮತ್ತೊಬ್ಬರು ಎಂಬಂತೆ. ದಿನವೂ ಕತ್ತಲು ಕವಿಯುತ್ತಿರುವಂತೆ ಆಟ ಆಡುವುದು ನಿಲ್ಲಿಸಿ ಕೈ ಕಾಲು ತೊಳೆದುಕೊಂಡು ಚಾವಡಿಯಲ್ಲಿ ಹಚ್ಚಿದ ದೀಪದ ಮುಂದೆ ಕುಳಿತು ಬಾಯಿಪಾಠ ಒಪ್ಪಿಸುತ್ತಿದ್ದೆವು. 'ಕಕಾಕಿಕೀ..... ಎರಡೊಂದ್ಲೆ ಎರಡು, ಎರಡೆರಡ್ಲ ನಾಲ್ಕು..... ವಾರಗಳು..... ತಿಂಗಳು..... ಸಂವತ್ಸರ'ಗಳನ್ನು ಹೇಳುತ್ತಿದ್ದೆವು, ಮತ್ತೆ ಪಾಠ ಓದುವುದು. ಊಟವಾದ ನಂತರ ನಿದ್ದೆ. ಆದರೆ ರಾತ್ರಿ ಊಟಕ್ಕೆ ಕರೆಯುವವರೆಗೂ ಓದಲೇಬೇಕಲ್ಲಾ ಎಂಬ ಚಿಂತೆ! ಅದಕ್ಕಾಗಿ ಮೆಲ್ಲನೆ ಉಚ್ಚೆ ಹೊಯ್ಯಲು ಹೋಗುವಂತೆ ಎದ್ದು ಹೋಗಿ ಅಮ್ಮ ಬೇಗ ಊಟಕ್ಕೆ ಕರೆಯೇ..... ಅಂತ ಅಮ್ಮನನ್ನು ಒತ್ತಾಯಿಸುತ್ತಿದ್ದೆವು. ಮನೆಗೆ ಯಾರಾದರೂ ಅತಿಥಿಗಳು ಬಂದರೆ, ಎಲ್ಲರೂ ಸೇರಿ ಇಸ್ಪಿಟ್ ಆಟ ಆಡುತ್ತಿದ್ದರೆ ನಾವು ಒಂದು ಬದಿಯಲ್ಲಿ ಪುಸ್ತಕ ಹಿಡಿದುಕೊಂಡು ನಮ್ಮದೇ ಆಟ ಮಾತುಕತೆಯಲ್ಲಿ ಮುಳುಗುತ್ತಿದ್ದೆವು. ಏಳೆಂಟು ಜನ ಹಿರಿಯರು ಸೇರಿದರೆ ರಾತ್ರಿ ಇಡೀ ಇಸ್ಪಿಟ್ ಆಡುವುದು ಇತ್ತು. ಬೆಳ್ಳಿಗ್ಗೆ ಚಾಪೆ ಮಡಿಸುವಾಗ ನಮಗೆ ಚೆಂದದ ಖಾಲಿ ಸಿಗರೇಟು ಪ್ಯಾಕುಗಳು, ಕೆಲವೊಮ್ಮೆ ನಾಣ್ಯಗಳು ಸಿಗುತ್ತಿದ್ದವು. ಖಾಲೀ ಸಿಗರೇಟು ಪ್ಯಾಕುಗಳನ್ನು ಒಟ್ಟುಹಾಕಿ ಅದರಲ್ಲಿ ಸರ ಅಥವಾ ಫೋಟೋ ಫ್ರೇಂ ಮುಂತಾದುವನ್ನು ಮಾಡುತ್ತಿದ್ದೆವು. ಖಾಲೀ ಪ್ಯಾಕನ್ನು ಅರ್ಧಮಾಡಿ ಬೆರಳು ತೂರಿಸಿ ಉರುಟು ಮಾಡಿ ಕಾಲಡಿ ಇಟ್ಟು ಒದ್ದು 'ಢಬ್' ಅನಿಸುತ್ತಿದ್ದೆವು. ನಾವೂ ಕತ್ತೆ..... ಛಾನೀಸ್ ಪಾಪರ್ ಇಸ್ಪಿಟ್ ಆಟಗಳನ್ನು ಆಡುತ್ತಿದ್ದೆವು. ರೆಮ್ಮಿ ಕಲಿತರೆ ಹೆಗ್ಗಳಿಕೆ! ಇಸ್ಪಿಟ್ ಎಲೆಯಲ್ಲಿ ಮನೆಕಟ್ಟುವುದು ಉಫ್ ಎಂದು ಊದಿ ಬೀಳಿಸುವುದು ಮಾಡುತ್ತಿದ್ದೆವು. ಇಸ್ಪಿಟ್ ಎಲೆಯನ್ನು ಬಳಸಿ ಅನೇಕ ಮೋಜಿನಾಟಗಳನ್ನು ಆಡುತ್ತಿದ್ದೆವು.

ಅಡ್ಡಂ ದಿಡ್ಡಂ ಹಾಯಾ ಪರಂಗಿ

ಮಲೆನಾಡಿನಲ್ಲಿ ಮಕ್ಕಳು ಆಡುವ ಆಟಗಳು ಹಲವಾರು. ನಾವು ಶಾಲೆಗೆ ಹೋಗುವಾಗ ಕಬಡ್ಡಿ, ಲಗೋರಿ, ಕಣ್ಣಾಮುಚ್ಚಾಲೆ ಮುಂತಾದವುಗಳೆಲ್ಲ ನಮ್ಮ ಪ್ರಿಯ ಆಟಗಳಾಗಿದ್ದವು. ಚಪ್ಪರದ ಕಂಬಗಳಲ್ಲಿ ಕಂಬದಾಟ, ದರಗು ತರುವ ಝಲ್ಲೆ ಅಥವಾ ಸುತ್ತಿದ್ದ ಚಾಪೆಯೊಳಗೆ, ಮನೆಯಾಟ! ಕಣ್ಣಾಮುಚ್ಚೆ, ಕಾಡುಗೋಡೆ, ಉದ್ದಿನ ಮೂಟೆ ಉರುಳೇ ಹೋಯ್ತು..... ಈ ಸಾಲುಗಳು ಎಷ್ಟು ಚನ್ನಾಗಿವೆ ಮತ್ತು ಎಷ್ಟು ಸೊಗಸು! ಹಾಗೆಯೇ ಅಡ್ಡಂ ದಿಡ್ಡಂ ಹಾಯಾ ಪರಂಗಿ! ಅವಲಕ್ಕಿ ಪವಲಕ್ಕಿ ಕಾಂಚನ ಮಿಣಾಮಿಣಾ ಮುಂತಾದ ಅರ್ಥವಿರದ ಸಾಲುಗಳಿಂದ ಕೂಡಿದ ಆದರೆ ಇಂದಿಗೂ ನೆನಪಲ್ಲಿರುವಷ್ಟು ಸುಂದರವಾದ ಮನೆಯೊಳಗೇ ಆಡುವ ಆಟಗಳನ್ನು ಅದು ಯಾರು ಸೃಷ್ಟಿಸಿದರೋ? ಕೆಲವು ಶಬ್ದಗಳಿಗೆ 'ಕ' ಸೇರಿಸಿ ನಗುತ್ತಿದ್ದುದುಂಟು. 'ಅತ್ತೆ ಗಿತ್ತೆ, ಮನೆ ಮನೆ ಮತ್ತೆ, ಕಸ್ತೂರಿ ಕತ್ತೆ' ಅಂತ ಯಾರದ್ದಾದರೂ ಹೆಸರಿಗೆ ಗ, ಮ, ಕ ಸೇರಿಸಿ ಹೇಳುವುದು ಮತ್ತೊಂದು ಪರಿ. (ಉದಾಹರಣೆ "ಸುಧಾ, ಗಿದಾ, ಮನೆಮನೆ ಮಧಾ, ಕಸ್ತೂರಿ ಕಧಾ") ಮಾತನಾಡುವಾಗ ಪ್ರತಿಯೊಂದು ಅಕ್ಷರಕ್ಕೂ ಕ ಅಥವಾ ಪ ಸೇರಿಸಿ ಚುರುಕಾಗಿ ಮಾತನಾಡುವುದು ಬಹಳ ಮೋಜು ನೀಡುತ್ತಿತ್ತು. ನೀನು ಬಾ ಅನ್ನಲು "ಕನೀ ಕನು ಕ ಬಾ" ಅನ್ನುವುದು. ಅದು ಬೇಸರವಾದರೆ "ನಿಗರ್ ನೀನು ಬಗರ್ ಬಾ" ಅಂತ ಮಾತಾಡುವುದು. ಇಂತಹ ಹಲವಾರು ಆಟಗಳಿಗೆ ಯಾವ ಉಪಕರಣಗಳೂ ಬೇಕಾಗಿರಲಿಲ್ಲ. ಮಾತೇ ಬಂಡವಾಳ. ಇಸ್ಪೀಟ್ ಎಲೆಗಳಲ್ಲಿ ಆಡುತ್ತಿದ್ದೆವು. ಹಲವು ಮೋಜಿನ ಲೆಕ್ಕಗಳನ್ನು ಮಾಡುತ್ತಿದ್ದೆವು. ಮಲೆನಾಡಿನ ಪಗಡೆ ಮತ್ತು ಚನ್ನೆಮಣೆ ಸಾಮಾನ್ಯ. ಪಗಡೆ ಆಟದಲ್ಲಿ ಕಾಯಿ ಹಣ್ಣಾಗಿ ಒಂದು ಬೀಳದೆ ಚಿಂತೆಯಾದರೆ ಚೆನ್ನೆಯಾಟದಲ್ಲಿ 'ಕರು' ಹಾಕಿದರೆ ಖುಷಿ! ಮಲೆನಾಡಿನ ಇಂಥ ಹಲವಾರು ಜನಪ್ರಿಯ ಆಟಗಳು ಈಗಿನ ಮಕ್ಕಳಿಗೆ ಅಪರಿಚಿತವಾಗುತ್ತಿದೆಯೇನೋ ಅನ್ನಿಸುತ್ತಿದೆ.

ಮನೆಗೆ ಮೂರು ಹಂಡೆ!

ಮಲೆನಾಡ ಮನೆಗಳಲ್ಲಿ ಮೂರು ಹಂಡೆ ಸಾಮಾನ್ಯ!. ಸ್ನಾನದ ಹಂಡೆ, ಅಡಿಕೆ ಬೇಸುವ ಹಂಡೆ ಮತ್ತು ಮುರು ಬೇಯಿಸುವ ಹಂಡೆ! ಮುರುವಿನ ಹಂಡೆ ಅಂದ್ರೆ ಜಾನುವಾರುಗಳಿಗೆ ಸೊಪ್ಪು ತೌಡು ನೀರು ಬೆರೆಸಿ ಬೇಯಿಸುವ ಹಂಡೆ. ಕಾಡಿನಿಂದ ಸೊಪ್ಪು ತಂದು ಹೆಚ್ಚಿ ಬೆಳಿಗ್ಗೆ ಮುಂಚೆ ಬಿಸಿಬಿಸಿ ಮುರುವನ್ನು ದನ ಎತ್ತುಗಳಿಗೆ ನೀಡುತ್ತಾರೆ. ಮುರು ಬೇಯಿಸುವಾಗ ಸೊಪ್ಪಿನ ಜೊತೆಗೆ ಹಲಸಿನ ಸ್ಯಾಡೆ ಇತ್ಯಾದಿಗಳನ್ನು ಹಾಕಿ ಬೇಯಿಸುವುದುಂಟು. ಹಂಡೆಯಿಂದ ಮುರುವನ್ನು ಬಕೇಟಿಗೆ ಸುರುವಿಕೊಂಡು ಬೈಪಾನೆಗೆ ಹಾಕುವುದನ್ನೇ ಕಾಯುತ್ತಿರುವಂತೆ, ಕೋಣಗಳು ಉಸಿರು ಬಿಡುತ್ತಾ ಮುಖ ಮುಂದೆ ಮಾಡಿ ನಿಲ್ಲುತ್ತವೆ.

ಮಲೆನಾಡಿನ ಮನೆಗಳಲ್ಲಿ ಅದರಲ್ಲೂ ಅವಿಭಕ್ತ ಕುಟುಂಬಗಳಲ್ಲಿ ಭಾರೀ ಗಾತ್ರದ ಪಾತ್ರೆಗಳು ಸಾಮಾನ್ಯ. ದೊಡ್ಡ ದೊಡ್ಡ ಕಡಾಯ, ಎಣ್ಣೆಬಳ್ಳೆ, ಕೈಬಟ್ಟಲು, ತಂಬಿಗೆ, ಹರಿವಾಣ, ಬಟ್ಟಲು ಮತ್ತಿತರ ಪಾತ್ರೆಗಳನ್ನು ಕಾಣಬಹುದು. ಮನೆಗಳೂ ದೊಡ್ಡವೇ. ಮನೆಯ ಪ್ರತಿಯೊಂದು ಕೋಣೆಯೂ ಒಂದು ರೀತಿಯ 'ಹಾಲ್'ಗಳೇ. ಈ ಕೋಣೆಗಳನ್ನ ಗುರುತಿಸುವ ಪರಿ ಚಂದ. ಉದಾಹರಣೆ ಮುಂಚೆಕಡೆ (ಹಾಲ್), ಜಗಲಿ, ನಡುಮನೆ, ಅಡಿಗೆ ಕೊಟ್ಟಿಗೆ, ಅಡಿಗೆ ಮನೆ, ಉಪ್ಪರಿಗೆ ರೂಮು, ಕತ್ತಲೆಕೋಣೆ, ಪಾತಾಳಂಕನ, ಹೀಗೆ. ಅಂತೆಯೇ ರೇಡಿಯೋ ಇರುವ ಕೋಣೆ 'ರೇಡಿಯೋ ಕೋಣೆ' ಆಗಿರುತ್ತಿತ್ತು. ಆಗೆಲ್ಲ ಭಾರೀ ಗಾತ್ರದ ರೇಡಿಯೋಗಳು. ಮನೆಗೊಂದು ಇರುತ್ತಿದ್ದ ಗಡಿಯಾರವೂ ದೊಡ್ಡವೇ. ಬಾಲ್ಯದಲ್ಲಿದ್ದಾಗ ಎಲ್ಲಿಯೋ ಕೆಲವರ ಮನೆಯಲ್ಲಿ ರೇಡಿಯೋ ಇರುವುದನ್ನು ಗಮನಿಸಿದ್ದೇವೆ. ನಮ್ಮ ಮನೆಯಲ್ಲಿ ರೇಡಿಯೋ ಇರಲಿಲ್ಲವಾದರೂ, ಲಾಟರಿಯಲ್ಲಿ ಬಂದಿದ್ದ ದೊಡ್ಡ ಗಡಿಯಾರವೊಂದಿತ್ತು! ಬರುಬರುತ್ತಾ ಬದಲಾವಣೆ ತೀವ್ರಗತಿಯಲ್ಲಿ ಆಗಿ ಟ್ರಾನ್ಸಿಸ್ಟರ್‌ಗಳು ಬಂದವು. ಈಗ ಟಿ.ವಿ.ಗಳು ಬಂದಿವೆ.

ಹಾಂ! ಮಲೆನಾಡಿನ ಮನೆಗೆ ಹಂಡೆಗಳಂತೆ ಮೂರ್ನಾಲ್ಕು ಕೊಟ್ಟಿಗೆಗಳೂ ಇರುತ್ತವೆ. ಪಣತದ ಕೊಟ್ಟಿಗೆ, ಮುರುವಿನ ಕೊಟ್ಟಿಗೆ, ಸೌದೆ ಕೊಟ್ಟಿಗೆ, ದನದ

ಕೊಟ್ಟಿಗೆ ಹಾಳೆ ಕೊಟ್ಟಿಗೆ ಹೀಗೆ. ಪಣತ ಎಂದರೆ ಭತ್ತವನ್ನು ಸಂಗ್ರಹಿಸುವ ಮರದಿಂದ ಮಾಡಿದ ಭಾರೀ ಗಾತ್ರದ ಸಣ್ಣ ಕೋಣೆಯಂತಹ ಪೆಟ್ಟಿಗೆ ಅನ್ನಬಹುದು. ಮೇಲೆ ಬಾಗಿಲು ತೆಗೆದು ಭತ್ತ ಸುರಿಯುವುದು. ಭತ್ತ ಹೊರತೆಗೆಯಲು ಮುಂದೆ ಕಿಂಡಿ. ಭತ್ತ ತೆಗೆಯಬೇಕಾದಾಗ ಪಣತಕ್ಕೆ ಇಳಿಯುತ್ತಿದ್ದೆವು. ಒಳಗೆ ತುಂಬಾ ಸೆಖೆ, ಜೊತೆಗೆ ಮೈತುರಿಕೆ! ಭತ್ತವನ್ನು ಕಿಂಡಿಯಿಂದ ದೂಡಿ ಭತ್ತ ಹೊರಗೆ ಸುರಿಯಲು ಅನುವು ಮಾಡಿಕೊಡುತ್ತಿದ್ದೆವು. ಭತ್ತವನ್ನು ಮಿಲ್ಲಿಗೆ ಕಳಿಸಿ ಆಗಾಗ್ಗೆ ಅಕ್ಕಿ ಮಾಡಿಸಿಕೊಂಡು ತರುತ್ತಾರೆ. ಪಣತದ ಕೊಟ್ಟಿಗೆ ಸಾಧಾರಣವಾಗಿ ಕೃಷಿ ಉಪಯೋಗಿ ಪರಿಕರಗಳನ್ನು ಇಟ್ಟಿರುವುದನ್ನು ಕಾಣುತ್ತೇವೆ. ಹಾರೆ, ಕತ್ತಿ, ಪಿಕಾಸಿ ಸಬ್ಬಲ್ಲು, ಇಸ್ಮಳ್ಳು, ತಳವಾರ, ಮಂಡಗತ್ತಿ, ಒನಕೆ, ಹೆಡಿಗೆ, ಬುಟ್ಟಿ, ತಟ್ಟಿ ಝಲ್ಲೆ (ತರಗು ತರಲು ಉಪಯೋಗಿಸುತ್ತಾರೆ) ಇತ್ಯಾದಿ. ಪಣತ ಇಲ್ಲದ ಕಡೆ ತಟ್ಟಿಯನ್ನು ಸುತ್ತಿ ಭತ್ತ ಸಂಗ್ರಹಿಸಲು ಉಪಯೋಗಿಸುತ್ತಾರೆ. ಮನೆಯಲ್ಲಿ ಮದುವೆ ಸಮಾರಂಭ ನಡೆವಾಗ ಈ ಕೊಟ್ಟಿಗೆಯೇ ಗಂಡಿನ ಮನೆಯಾಗಿ ಅಲಂಕೃತಗೊಂಡು, ಗಂಡಿನ ಕಡೆಯವರಿಗೆ ಉಳಿದುಕೊಳ್ಳಲು ಸಕಲ ವ್ಯವಸ್ಥೆ ಮಾಡಲಾಗುತ್ತಿತ್ತು.

ಸಿಹಿ ಸಿಹಿ ಮಿಠಾಯಿ

ಈಗ ಮಕ್ಕಳು ದೂರದರ್ಶನ ಜಾಹೀರಾತನ್ನು ನೋಡಿ ವಿವಿಧ ಬಗೆಯ ಚಾಕ್ಲೇಟ್, ಬಿಸ್ಕತ್‌ಗಳನ್ನು ಪರಿಚಯಿಸಿಕೊಂಡಿರುತ್ತಾರೆ, ಬೇಕಾದ್ದನ್ನು ಖರೀದಿಸಿ ಸವಿಯುತ್ತಾರೆ, ಗ್ಲೂಕೋಸ್ ಬಿಸ್ಕತ್, ಹಸಿರು ಬೇಗಡೆಯ ಚಾಕ್ಲೇಟ್, ಲಿಂಬೆಹುಳಿ ಮತ್ತು ಶುಂಠಿ ಪೆಪ್ಪರ್ಮೆಂಟ್ ಹೀಗೆ ನಾಲ್ಕಾರು ಬಗೆ ಮಾತ್ರ ನಮಗೆ ಬಾಲ್ಯದಲ್ಲಿ ಗೊತ್ತಿತ್ತು. ಮಾತ್ರೆಯ ಹಾಗೆ ಒಂದೊಂದೇ ಕೊಡುತ್ತಿದ್ದರು, ಅದೂ ಅಪರೂಪಕ್ಕೆ! ಪೇಟೆಗೆ ಹೋದವರು ತಂದರೆ! ಆಗಾಗ ತಿನ್ನಲು ಸುಟ್ಟ ಹುಣಸೆಬೀಜ ಅಥವಾ ಹಲಸಿನ ಬೀಜ! ಈ ಹಲಸಿನ ಬೀಜ ಸುಡುವಾಗ ಸ್ವಲ್ಪ ಕೊಚ್ಚಿ ಇಡದಿದ್ದರೆ 'ಡಬ್' ಅಂತ ಸಿಡಿದು ಗಾಬರಿಯ ಜೊತೆಜೊತೆಗೇ ನಗೆ ತರುತ್ತಿತ್ತು, ಅಮ್ಮ ಏನಾದರೂ 'ಅಪ್ಪಚ್ಚಿ' ಮಾಡಿದರೆ ಆವತ್ತು ನಮಗೆ ಖುಷಿಯೋ ಖುಷಿ! ಹುಟ್ಟಿದ ಹಬ್ಬವೆಂದು ನೆನಪಾದರೆ ಪಾಯಸ! ಪಾಯಸ ಬಿಟ್ಟರೆ ಸಿಹಿಯೇ ಅಪರೂಪವಾಗಿದ್ದಾಗ ಭಾರೀ ಸಂತಸ ಉಕ್ಕಿಸುವ ಬಣ್ಣ ಬಣ್ಣದ ಮಿಠಾಯಿ ವರ್ಷಕೊಮ್ಮೆ ಬರುತ್ತಿದ್ದುದುಂಟು! ದೂರದಲ್ಲಿ ಜುಬ್ಬ ಪಂಚೆ ಧರಿಸಿ, ತಕ್ಕಡಿ ಹಿಡಿದು ಮಿಠಾಯಿ ಶೆಟ್ರು ಮತ್ತು ಅವರ ಹಿಂದೆ ಭಾರಿ ಗಾತ್ರದ ಟ್ರಂಕು ಹೊತ್ತ ವ್ಯಕ್ತಿ ಬರುವುದು ಕಂಡರೆ ನಮಗೆ ಹಿಗ್ಗು! ಪೆಟ್ಟಿಗೆಯೊಳಗೆ ಸುಂದರವಾದ ಮೃದುವಾದ ಚಪ್ಪಡಿ ಕಲ್ಲಿನಂತಹ ಆಕಾರದ ಬಣ್ಣದ ಮಿಠಾಯಿಗಳು! ಅವರು ಅದನ್ನು ನಾಜೂಕಾಗಿ ತಕ್ಕಡಿಯ ಮೇಲಿಟ್ಟು ತೂಗುವಾಗ ನಮಗೆ ಬಾಯಲ್ಲಿ ನೀರೂರುತ್ತಿತ್ತು. ಒಮ್ಮೊಮ್ಮೆ ತೂಕ ಜಾಸ್ತಿಯಾದಾಗ ಮಿಠಾಯಿಯ ಅಂಚನ್ನು ತುಂಡು ಮಾಡಿ ದೊಡ್ಡ ಮಿಠಾಯಿ ತುಂಡನ್ನು ನಮಗೆ ಕೊಡುತ್ತಿದರು. ಆಗ ಸ್ವರ್ಗವೇ ಕೈಗೆ ಬಂದಂತೆ! ಆ ಅಗಲವಾದ ಮಿಠಾಯಿಗಳನ್ನು ಕಣ್ತುಂಬ ತುಂಬಿಕೊಳ್ಳುತ್ತಿದ್ದೆವು. ತೆಗೆದುಕೊಂಡ ಮಿಠಾಯಿಗಳನ್ನು ಅಮ್ಮ ಅದೆಲ್ಲಿ ಬಚ್ಚಿಟ್ಟಿರುತ್ತಿದ್ದಳೋ ಇದುವರೆಗೂ ತಿಳಿದಿಲ್ಲ! ಬಹುದಿನದವರೆಗೆ ಅದನ್ನು ಜೋಪಾನವಾಗಿಟ್ಟುಕೊಂಡು ನಮಗೆ ಆಗಾಗ್ಗೆ ಕೊಡುತ್ತಿದ್ದಳು. ವೈವಿಧ್ಯಮಯ ತಿನಿಸುಗಳನ್ನು ಈಗ ಬೇಕೆಂದಾಗ ತಿನ್ನಬಹುದು. ಆದರೆ ಆಗಿನ ಕಾತರ ತಕ್ಕಡಿ-ಟ್ರಂಕು ಹೊತ್ತು ತರುತ್ತಿದ್ದ ಖುಷಿ ನಿಜಕ್ಕೂ ಭಿನ್ನ!

ನನ್ನ ಪ್ರೀತಿಯ ಶಾಲೆ

ನಿತ್ಯ ಹರಿದ್ವರ್ಣ ವನದ ನಡುವೆ ಒಂದು ಪುಟ್ಟಶಾಲೆ. ಶಾಲೆಯ ನೆನಪು ನನ್ನನ್ನು ನಲವತ್ತು ವರ್ಷ ಹಿಂದಕ್ಕೆ ತೆಗೆದುಕೊಂಡು ಹೋಗುತ್ತದೆ. ಅಂಗಳದ ತುದಿಯ ಮೂರು ನೀಲಗಿರಿಮರ, ಕೆಳಗಿನ ರಸ್ತೆಯವರೆಗೂ ಓರೆಕೋರೆ ಮೆಟ್ಟಿಲುಗಳು. ಶಾಲೆಯ ಮುಂದಿನ ಕಟ್ಟೆಯನ್ನು ಹತ್ತಿ ಹಾರುವುದರಲ್ಲಿ ಏನು ಮಜಾ! ನಾಲ್ಕು ಬೆಂಚು ನಾಲ್ಕು ಕ್ಲಾಸು! ಅತಿ ಎತ್ತರದ ಬೆಂಚು ನಾಲ್ಕನೇ ಕ್ಲಾಸಿನದು. ಡೆಸ್ಕ್ ಇಲ್ಲ, ಸ್ಕೂಲ್ ಯೂನಿ ಫಾರಂ ಇಲ್ಲ, ಶೂ, ಕಾಲುಚೀಲಗಳಿಲ್ಲ. ಬಟ್ಟೆಯ ಚೀಲದಲ್ಲಿ ಪುಸ್ತಕಗಳ ಕಂತೆ. ಕರಿಹಲಗೆಯ ಮುಂದೆ ಕೋಲು ಹಿಡಿದು ನಿಂತ ಮೇಷ್ಟ್ರು. ಸ್ಲೇಟಿನ ಮೇಲೆ ಬಗ್ಗಿ ಬರೆಯುವ, ಅರೆಮಣ್ಣು ಬಟ್ಟೆಯ ಬರಿಗಾಲ ಮಕ್ಕಳು. ಶನಿವಾರಗಳಲ್ಲಿ ಮಂಜು ಮುಸುಕಿದ ಹಾದಿಯಲ್ಲಿ ಸ್ಕೂಲಿಗೆ ಪಯಣ. ಬೇಲಿಯ ಮೇಲೆ ಇಬ್ಬನಿಯ ಹನಿಗಳು. ವಿದ್ಯುತ್ ತಂತಿಯ ಮೇಲೆ ಸಾಲಾಗಿ ಕುಳಿತ ಪುಟ್ಟ ಪುಟ್ಟ ಹಕ್ಕಿಗಳು. ಗೆಳೆಯರೊಂದಿಗೆ ಲಗೋರಿ, ಕಬಡ್ಡಿ ಮುಂತಾದ ಆಟ. ಬಿದಿರು ಹಿಂಡಿಲ ನಡುವೆ ಎಲ್ಲೋ ಎದ್ದು ಹರಿವ ಜಲಕ್ಕೆ ದಬ್ಬೆ ಇಟ್ಟು ನೀರು ಕುಡಿಯುತ್ತಿದ್ದೆವು. ಶಾಲೆಯ ಒಂದು ತುದಿಯಲ್ಲಿ ಕಟ್ಟಿದ ಹಾರೆಯೇ ಬೆಲ್ಲು! "ಸ್ವಾಮಿದೇವನೆ ಲೋಕಪಾಲನೆ" ಇಂದಿಗೂ ನನ್ನ ಮೆಚ್ಚಿನ ಪ್ರಾರ್ಥನೆ. ಅಂದು ಶಾಲೆಯಲ್ಲಿ ಕಲಿತ ಹಲವು ಸಂಗತಿಗಳು ಹಲವು ವರ್ಷಗಳ ನಂತರ ಬದುಕಿನ ಹಾದಿಯಲ್ಲಿ ಅರ್ಥವಾಗತೊಡಗುತ್ತವೆ. ಪ್ರಾಥಮಿಕ ಶಾಲೆಗಳು, ನೀತಿ ಮತ್ತು ಮೌಲ್ಯವನ್ನು ಬಿಂಬಿಸುವ ಕೇಂದ್ರಗಳು, ದೇವಾಲಯಗಳಷ್ಟೇ ಪವಿತ್ರ! ಶಾಲೆಯ ಗೌರವ ಪಾವಿತ್ರ್ಯತೆ ಕಾಪಾಡುವಲ್ಲಿ ಶಿಕ್ಷಕರ ಜವಾಬ್ದಾರಿ ಹೆಚ್ಚು! ಸರಕಾರಿ ಶಾಲೆಯ ಶಿಕ್ಷಕರಿಗೆ ಖಾಸಗಿ ಶಾಲೆಯ ಶಿಕ್ಷಕರಿಗಿಂತ ಉತ್ತಮ ಸಂಬಳವಿದ್ದರೂ, ಸ್ಪರ್ಧೆಯಲ್ಲಿ ಹಿಂದೆ ಬೀಳುತ್ತಿವೆ. ವಿದ್ಯಾರ್ಥಿಗಳ ಶ್ರದ್ಧೆ, ಪಾಲಕರ ಬೆಂಬಲದ ಕೊರತೆಯೂ ಇದಕ್ಕೆ ಕಾರಣವಿರಬಹುದು. ಅಲ್ಲಲ್ಲಿ ಗ್ರಾಮೀಣ ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸಿ ಮಿಂಚುವುದು ಖುಷಿಕೊಡುತ್ತದೆ. ನನ್ನ ಪ್ರೀತಿಯ ಶಾಲೆಯಲ್ಲಿ ಹಲವು ಪ್ರತಿಭೆಗಳು ಅರಳಲೆಂದು ಆಶಿಸುವೆ.

ಹರ ಹರ ಮಹದೇವಾ!

ಹರಹರ ಮಹದೇವಾ! ಎನ್ನುತ್ತಾ ಕಿತ್ತೂರು ಚೆನ್ನಮ್ಮನ ಸೈನಿಕರು ವೈರಿ ಪಡೆಯತ್ತ ಮುನ್ನುಗ್ಗಿದರು ಎಂದು ಎಲ್ಲೋ ಓದಿದ ನೆನಪು. ಪ್ರಶಾಂತವಾದ ಮಲೆನಾಡಿನ ಮುಗಿಲು ಮುಟ್ಟುವಂತೆ "ಹರ ಹರ ಮಹದೇವ" ಎಂಬ ದನಿ ಕೇಳಿ ಬರುತ್ತಿದ್ದುದು ಊಟಕ್ಕೆ ಕುಳಿತಾಗ! ಮಲೆನಾಡಿನ ಊಟದ ಮನೆಗಳಲ್ಲಿ ಸಂತೋಷವೂ ಅಗತ್ಯವಾದ ಶಿಸ್ತೂ ಇರುತ್ತಿತ್ತು. ಬಾಳೆಎಲೆಗೆ ಪದಾರ್ಥಗಳನ್ನು, ಬಡಿಸಿಯಾಗುವವರೆಗೆ ಎಲ್ಲರೂ ಸುಮ್ಮನೆ ಕುಳಿತಿರಬೇಕು. ಮನೆಯ ಯಜಮಾನ "ಕೃಷ್ಣಾರ್ಪಣ" ಎಂದ ಮೇಲೇ ಊಟ! ಊಟಕ್ಕೆ ಕುಳಿತವರಿಗೆ ಗಂಧಾಕ್ಷತೆ ಕೊಡುವ ಕ್ರಮವೂ ಇದೆ. ಗಂಧ ತೇಯುವುದಕ್ಕೆ ನಮಗೆ ಖುಷಿ. ಆ ಪರಿಮಳವೇ ಚಂದ. ಆದರೆ ತೇದು ತೇದು ಬೇಜಾರು ಬರುತ್ತಿದ್ದುದುಂಟು. ಗಂಧಕ್ಕೆ ಚೂರು ಸುಣ್ಣ ಬೆರೆಸಿದಾಗ ಕಪ್ಪಾಗಿ ಅಕ್ಷತೆಯಾಗುತ್ತದೆ. ಯಾರ ಹಣೆಯಲ್ಲಿ ಗಂಧಾಕ್ಷತೆ ಕಾಣುವುದಿಲ್ಲವೋ ಅವರನ್ನು ಎರಡನೇ ಪಂಕ್ತಿಗೆ ಊಟಕ್ಕೆ ಕರೆಯಲು ಸುಲಭ ಎಂದು ಈ ಪದ್ಧತಿ ಮಾಡಿರಬೇಕು ಅಂತ ನಾವು ತಮಾಷೆ ಮಾಡುತ್ತಿದ್ದೆವು. ಊಟಕ್ಕೆ ಅಂಗಿ ತೆಗೆದೇ ಕುಳಿತುಕೊಳ್ಳಬೇಕು. ಹೊಟ್ಟೆ ತುಂಬಿತೆಂದು ನಡುವೆ ಏಳುವಂತಿಲ್ಲ. ಎಲ್ಲರ ಊಟ ಮುಗಿಯುವವರೆಗೆ ಕಾಲು ಮುರುಗಟ್ಟುತ್ತಿದ್ದರೂ ಕಾಯಲೇಬೇಕು. ಅನ್ನ, ಸಾರು, ಹುಳಿ ಎಲ್ಲಾ ಬಂದು ಹೊಟ್ಟೆ ತುಂಬಿತೆನ್ನುವಾಗ ಯಾವುದೋ ಒಂದು ಪಂಕ್ತಿಯ ನಡುವಿನಿಂದ ಸುಶ್ರಾವ್ಯವಾದ ಸುಭಾಷಿತ ಅಥವಾ ಶ್ಲೋಕ ಕೇಳಿಬರುತ್ತದೆ. ಶೋಕ್ಲದ ನಂತರ ಅವರು "ಹರಹರ ನಮಃ ಪಾರ್ವತೀ ಪತೆಯೇ" ಅಂದಾಗ ಊಟಕ್ಕೆ ಕುಳಿತ ಎಲ್ಲರೂ ಒಕ್ಕೊರಲಿನಿಂದ "ಹರಹರ ಮಹದೇವ" ಎನ್ನುತ್ತಾರೆ. ಮಹದೇವ ಎಂಬ ಪದವನ್ನು ಎಷ್ಟು ಸಾಧ್ಯವೋ ಅಷ್ಟು ಗಟ್ಟಿಯಾಗಿ, ದೇವ ಎಂಬ ಪದವನ್ನು ಎಷ್ಟು ಸಾಧ್ಯವೋ ಅಷ್ಟು ಎಳೆದು ಹೇಳುತ್ತಿದ್ದೆವು. ನಾವು ಶ್ಲೋಕಗಳನ್ನು ಆಸ್ಥೆಯಿಂದ ಕೇಳುವ ಅಥವಾ ಅದರ ಅರ್ಥವನ್ನು ಗ್ರಹಿಸುವ ಪ್ರಯತ್ನವನ್ನೆಂದೂ ಮಾಡುತ್ತಿರಲಿಲ್ಲ. ನಾವೇನಿದ್ದರೂ "ಹರಹರ ಮಹದೇವ" ಎನ್ನಲು ಕಾತರರಾಗಿರುತ್ತಿದ್ದೆವು. ಹೀಗೆ ಕೇಳುತ್ತಲೇ ನಂತರದ ಸಿಹಿಭಕ್ಷ್ಯ, ಚಿತ್ರಾನ್ನ, ಪರಮಾನ್ನಗಳನ್ನು ಸವಿಯುತ್ತಿದ್ದೆವು. ಸಂತೋಷದಿಂದ ಊಟ ಮಾಡುವುದು ಬಹಳ ಮುಖ್ಯ ಅಲ್ಲವೇ?

ಕಡೆನೆಟ್ಟಿ ಕಡೆಹಡ್ಲು

ಕಳೆ ತೆಗೆಯುವುದು, ಹಳು ಸವರುವುದು, ಸೌದೆ ತರುವುದು, ವಿವಿಧ ಸಸಿ ಬೆಳಸುವುದು ಅಡಿಕೆ, ಕಾಫಿ ತೋಟಗಳ ಔಷಧಿ ಹೊಡೆಯುವುದು ಹೀಗೆ ನಿರಂತರ ನಡೆಯುವ ಕೆಲಸಗಳಲ್ಲಿ ಮಲೆನಾಡಿನ ಪ್ರಕೃತಿ ಸೌಂದರ್ಯದ ಸೊಬಗು ವಿಜೃಂಭಿಸುವುದು ಸಸಿನೆಟ್ಟಿಯಲ್ಲಿ! ಅದರಲ್ಲೂ ಕಡೆನೆಟ್ಟಿ ಅಂದರೆ ಅಂದು ತುಂಬಾ ಜನ. ಅಂದು ಬಾಕಿ ಉಳಿದಿರುವ ಎಲ್ಲ ಗಣ್ಣಗಳನ್ನು ನೆಟ್ಟು ಮುಗಿಸುವುದು. ಮಳೆಗಾಲದ ತುಂತುರು ಮಳೆಯಲ್ಲಿ ಕಂಬಳಿ ಗೊರಬಲುಗಳನ್ನು ಸೂಡಿಕೊಂಡು ಹಾಡುತ್ತಾ ಹರಟುತ್ತಾ ಸಾಗುವ ಕೆಲಸ. ಹಬ್ಬದ ವಾತಾವರಣ. ಮನೆಯೊಳಗೆ ಸೌತೆಕಾಯಿ, ಹಲಸಿನ ಬೀಜದ ಹುಳಿ, ಬೆಳ್ಳುಳ್ಳಿಯ ಒಗ್ಗರಣೆಯ ಘಮ ಘಮ! ಹೆಡಿಗೆಯಲ್ಲಿ ಅಗಡಿಯಿಂದ ಧರೆಯ ಮೇಲೆ ತಂದಿಟ್ಟ ಕಟ್ಟುಗಳನ್ನು ಗದ್ದೆಗೆ ಎಸೆಯಲು ನಮಗೆ ಖುಷಿ! ಒಮ್ಮೊಮ್ಮೆ ನೆಡುವವರ ತೀರ ಸನಿಹಕ್ಕೆ ಬಿದ್ದು ಕೆಸರು ರಾಚಿದಾಗ ನಮಗೆ ನಗು, ಕೈಕಾಲು ಕೆಸರು ಮಾಡಿಕೊಂಡು ಗದ್ದೆಯಲ್ಲಿ ಓಡಾಡುವುದರಲ್ಲೇನೋ ಆನಂದ. ಗಂಡಾಳುಗಳು ಹೂಡುವುದು, ಅಂಚು ಹಾಕುವುದು, ನಳ್ಳೀ ಹೊಡೆಯುವುದು ಹೀಗೆ ಎಲ್ಲರೂ ಒಂದೊಂದು ಕೆಲಸದಲ್ಲಿ ನಿರತರಾಗಿರುತ್ತಾರೆ. ಜೊತೆ ಎತ್ತು ಅಥವಾ ಆಳನ್ನು ನೀಡುವ ಮೂಲಕ ನೆರೆಹೊರೆಯವರು ನೆಟ್ಟಿಗೆ ಸಹಕರಿಸುತ್ತಾರೆ. ಸಂಭ್ರಮ ಕಣ್ಣಿಗೆ ಹಬ್ಬ! ಒಕ್ಕಲಾಟದ ಕಡೆಯದಿನ 'ಕಡೆಹಡ್ಲು' ಕೂಡಾ ಒಂದು ಸಣ್ಣ ಹಬ್ಬದಂತೆ. ನಾವು ಪೇರಲೇಕಾಯಿ ಅಥವಾ ಕೈಗೆ ಸಿಕ್ಕಿದ ವಸ್ತುಗಳನ್ನು ರೋಣಗಲ್ಲು ಬರುವಾಗ ಅದರಡಿಯಲ್ಲಿ ಇಡಲು ಹೋಗಿ ಅಥವಾ ರೋಣಗಲ್ಲಿನ ಕಟ್ಟಿನ ಮೇಲೆ ನಿಂತು ಸವಾರಿ ಮಾಡಲು ಹೋಗಿ ಬೈಸಿಕೊಳ್ಳುತ್ತಿದ್ದೆವು. ಕಬೆಕೋಲಿನಲ್ಲಿ ಹುಲ್ಲನ್ನು ಮಗುಚಿ ಹಾಕುತ್ತಾ ನಂತರ ಹುಲ್ಲಿ ಹಿಡಿಯುದು (ಹುಲ್ಲಿನ ಕಟ್ಟು ಕಟ್ಟುವುದು), ಭತ್ತ ತೂರುವುದು (ಶುಚಿಗೊಳಿಸುವುದು) ಇತ್ಯಾದಿ ಕೆಲಸ ನಡೆಯುತ್ತದೆ. ಕಣದಲ್ಲಿ ಕುತ್ರಿ ತಲೆ ಎತ್ತುತ್ತದೆ. ಆಡಿ ಮನೆಗೆ ಬಂದು ಕೈಕಾಲು ತೊಳೆದರೆ ಮೈಯಲ್ಲೆಲ್ಲಾ ತುರಿಕೆ! ಆದರೆ ಪಟ್ಟ ಆನಂದಕ್ಕೆ ಮೇರೆಯೇ ಇರುತ್ತಿರಲಿಲ್ಲ. ಕುತ್ರಿಯೇ ಕಣಕ್ಕೆ ಮೆರಗು! ವರ್ಷವಿಡೀ ಜಾನುವಾರಿಗೆ ಹುಲ್ಲು ಸಾಕೇ ಸಾಲ್ದೇ ಅಂತ ಕುತ್ರಿ ನೋಡಿ ಅಂದಾಜು ಮಾಡುತ್ತಾರೆ.

ಗೋಕುಲ ನಿರ್ಗಮನ

ಯುಗಾದಿ ಹಬ್ಬ ಬಂತೆಂದರೆ ಅಪ್ಪ ದೊಡ್ಡ ಬಟ್ಟೆಯ ಗಂಟನ್ನೇ ಹೊತ್ತು ತರುತ್ತಿದ್ದರು. ಮನೆಯವರಿಗೆ ಮತ್ತು ಕೆಲಸದವರೆಲ್ಲರಿಗೂ ಹೊಸಬಟ್ಟೆ. ಅಪ್ಪ ಚಿಕ್ಕಪ್ಪಂದಿರೂ ಸೇರಿದಂತೆ ನಮಗೆಲ್ಲಾ ಒಂದೇ ಬಗೆಯ ಅಂಗಿ. ನಮ್ಮ ಕಿವಿಗಳಲ್ಲಿ ಆಗ ಟಿಕ್ಕಿ ಇತ್ತು. ಈಗಲೂ ಮಲೆನಾಡಿನಲ್ಲಿ ಹಿರಿಯರ ಕಿವಿಗಳಲ್ಲಿ ಟಿಕ್ಕಿ ಅಥವಾ ಒಂಟಿಯನ್ನು ಕಾಣಬಹುದು. ಮಾಧ್ಯಮಿಕ ಶಾಲೆಯ ಓದಿಗೆ ಮಂಗಳೂರಿಗೆ ಹೊರಟ ಸಂದರ್ಭದಲ್ಲಿ ಟಿಕ್ಕಿಯನ್ನು ಕಳಚಿಟ್ಟ ನೆನಪು (ನಮ್ಮ ವಿದ್ಯಾಭ್ಯಾಸ ನಮ್ಮಿಬ್ಬರು ಅಕ್ಕಭಾವಂದಿರ ಆಶ್ರಯದಲ್ಲೇ ನಡೆಯಿತು). ಪಟ್ಟಣದಲ್ಲಿ ಮಲೆನಾಡಿನ ಆಡುಮಾತುಗಳಾದ ವೈನಾಗಿದೆ, ಹಂಗೆ ಹಿಂಗೆ ಮತ್ತು ಪ್ರತಿವಾಕ್ಯದ ಕೊನೆಗೆ ಕಣ ಕಣೆ ಮುಂತಾದವನ್ನು ಬಳಸದಂತೆ ಎಚ್ಚರವಹಿಸಬೇಕೆಂಬ ಕಸಿವಿಸಿ. ಗ್ರಾಮೀಣ ಭಾಷೆಗೆ ಆದರದ್ದೇ ಆದ ಸೊಗಡಿದೆ. ಪ್ರತಿಯೊಂದು ಪ್ರದೇಶಕ್ಕೂ ಅದರದ್ದೇ ಆದ ಭಾಷೆ, ತೊಡುಗೆ, ಆಹಾರ ಪದ್ಧತಿ ಇದೆ. ಅದು ಉಳಿದುಕೊಂಡರೆ ಚೆಂದ (ವಿವಿಧತೆಯಲ್ಲಿ ಏಕತೆ ಭಾರತದ ಲಕ್ಷಣ ಮತ್ತು ಸೌಂದರ್ಯವಲ್ಲವೇ) ಮನೆಯನ್ನು ತೊರೆದು ಹೋಗಲು ಬೇಸರ. ಯಾಕಾದರೂ ಓದಬೇಕೋ ಅನ್ನುವ ಪ್ರಶ್ನೆ ಮೂಡಿದರೂ ಕೇಳಲಾರದೇ ಅಳುವೇ ತುಟಿಗೆ ಬಂದಂತೆ! ಪ್ರೀತಿಯ ಅಪ್ಪ-ಅಮ್ಮ, ಚಿಕ್ಕಪ್ಪ-ಚಿಕ್ಕಮ್ಮಂದಿರು, ನೆರೆಹೊರೆ, ಸುಂದರ ಪರಿಸರ, ಆ ದನಕರುಗಳು, ನಾಯಿ ಎಲ್ಲವನ್ನೂ ಬಿಟ್ಟು ಬಹುದೂರ ಹೋಗುವ ಚಿಂತೆ! ದೂಬಳ ಕೈಮರದಲ್ಲಿದ್ದ ದೊಡ್ಡ ಮರವೇ ಬಸ್ ನಿಲ್ದಾಣವಾಗಿತ್ತು ಅಥವಾ ಹೇರೂರಿನ ಸಾಯ್ಬರ ಅಂಗಡಿಯ ಬೆಂಚಲ್ಲಿ ಬಸ್ಸಿಗಾಗಿ ಕಾಯುವುದಿತ್ತು. ಎಲ್ಲರೂ ಪ್ರೀತಿಯಿಂದ ಹಾರೈಸಿ ಬೀಳ್ಕೊಟ್ಟ ಮೇಲೆ ಗದ್ದೆಯಂಚಲ್ಲಿ ಬಿರಬಿರನೆ ನಡೆಯುತ್ತಾ ಮತ್ತೆ ಮತ್ತೆ ಹಿಂತಿರುಗಿ ನೋಡುತ್ತಿದ್ದೆವು. ಕಣದಂಚಲ್ಲಿ ನಿಂತು ಕೈಬೀಸುವ ಅಮ್ಮನನ್ನು ನೋಡುತ್ತಾ ತುಂಬಿ ಬರುವ ಕಣ್ಣೊರೆಸಿಕೊಂಡು ಕೊನೆಗೆ ಮನೆಯ ಒಂಚೂರು ಹಂಚು ಕಾಣುವವರೆಗೂ ತಿರುತಿರುಗಿ ನೋಡುತ್ತಾ ಭಾರವಾದ ಹೃದಯದಿಂದ ನಡೆಯುತ್ತಿದ್ದೆವು.

ವಿಮರ್ಶೆ

ಭಾವನಾ ಶಕ್ತಿಯ ಹೊಳಪು, ವಿಷಾದದ ನೆರಳು

[ಪ್ರೀತಿಯ ಹೂಗೊಂಚಲು (ಕವನ ಸಂಕಲನ); ಕವಿ : ಹು.ವಾ. ಶ್ರೀಪ್ರಕಾಶ್]

ಎರಡು ದಶಕಗಳಿಂದ ಕಾವ್ಯ ರಚಿಸುತ್ತಿರುವ ಶ್ರೀ ಎಚ್.ವಿ. ಶ್ರೀಪ್ರಕಾಶ್ (ಹುವಾಶ್ರೀ) ಅವರ ಮೊದಲ ಕವನ ಸಂಕಲನ 'ಪ್ರೀತಿಯ ಹೂಗೊಂಚಲು'. ಭಾರತೀಯ ಸ್ಟೇಟ್ ಬ್ಯಾಂಕಿನ ಕನ್ನಡ ಸಂಘದ ವಾರ್ಷಿಕ ಸಾಹಿತ್ಯಸಂಚಿಕೆ 'ಮಂದಾರ'ದ ಮಧುರ ನೆನಪುಗಳು 'ಮಂದಾರ' ಬಲ್ಲವರನ್ನು ಕಾಡದಿರಲು ಸಾಧ್ಯವಿಲ್ಲ. 'ಮಂದಾರ' ಅರಳುವ ಸಮಯದಲ್ಲಿ ಸಂಭ್ರಮದಿಂದ ಕಾವ್ಯರಚನೆಯಲ್ಲಿ ತೊಡಗುತ್ತಿದ್ದ ಕಾವ್ಯ ಭ್ರಮರಗಳಲ್ಲಿ ಹುವಾಶ್ರೀ ಅವರೂ ಒಬ್ಬರು.

ಎಲ್ಲರೂ ನೋಡುವುದನ್ನೇ ಕವಿಯೂ ನೋಡಿದರೂ ಅವನ ಒಳಗಣ್ಣಿಗೆ ಗೋಚರಿಸುವ ಸತ್ಯ ವಿಭಿನ್ನವಾದ್ದು. ಶಬ್ದಗಳ ಬಳಕೆಯಲ್ಲಿ ಕೌಶಲ್ಯ, ನಿರೂಪಣೆಯ ಕ್ರಮ ಹಾಗೂ ವಸ್ತುವಿನ ಒಳನೋಟಗಳಿಂದ ಕಾವ್ಯ ಓದುಗನ ಮನಸ್ಸಿಗೆ ಹತ್ತಿರವಾಗುತ್ತೆ. ಪದ್ಯ ಹೊಸೆಯುವುದು ಒಂದು ಕುಶಲಕಲೆ. ಹಲವಾರು ಕವಿತೆಗಳನ್ನು ರಚಿಸಿದ ಮೇಲೆ ಅಂಥದ್ದೇ ಕವಿತೆಗಳನ್ನು ಎಷ್ಟು ಬೇಕಾದರೂ ಬರೆಯಬಹುದೇನೋ. ಆದರೆ ಅವೆಲ್ಲವೂ – ಇತರರಿಗೆ ಇರಲಿ, ಬರೆದವರಿಗೇ ಖುಷಿ ಕೊಡಲಾರವು. ಪ್ರೀತಿಯ ಹೂಗೊಂಚಲಿನಲ್ಲಿ ಸಹಜವಾಗಿಯೇ ಎಲ್ಲ ಬಗೆಯ ಕವಿತೆಗಳೂ ಸೇರಿವೆ.

ಮೆಚ್ಚುಗೆಯಾಗುವಂಥ ಕೆಲವು ಕವಿತೆಗಳನ್ನು ಮೊದಲು ನೋಡಬಹುದು. 'ಈ ಹಾಡು ನನ್ನದಲ್ಲ.....' ಎಂದು ಆರಂಭವಾಗಿ ಕಾವ್ಯದ ನೆಲೆಯ ನಿಗೂಢತೆಯನ್ನು ಸೂಕ್ಷ್ಮವಾಗಿ ಗುರುತಿಸುವ ಸರಳ ಕವಿತೆ 'ನನ್ನದಲ್ಲದ ಹಾಡು'.

'ಹರಿದ ಹಳೆಯ ಬಟ್ಟೆಯ ಗಂಟು ರಂಗಿನ ಸಮಾರಂಭಗಳ ನಂಟು
ಮುಳ್ಳಿರದ ಗಡಿಯಾರದ, ಮುರಿದ ಆಟಿಕೆ ಬಿಸುಡಲಾರದ ನೆನಪಿನ ಗಂಟು!'

ಅನುಭವದ ಈ ಸಾಲುಗಳು ಅರ್ಥಗರ್ಭಿವಾಗಿದೆ. 'ಗಳಿಸಿದ್ದೆಲ್ಲಾ ಒಂದೋ ಹರಡ, ಇಲ್ಲ ಷೋ ಕೇಸಿನ ವಸ್ತು!' ಎಂಬ ಸತ್ಯವನ್ನು ಹೊರಪಡಿಸುವ ಈ ಕವಿತೆಯಲ್ಲಿ ಆಳವಾದ ಆತ್ಮಾವಲೋಕನವಿದೆ.

'ಮೆಲುಕು' ಇಷ್ಟವಾದ ಇನ್ನೊಂದು ಕವನ. ಕವಿಯ ಅಂತರಂಗದ ಭಾವನೆಗಳನ್ನು ಅವುಗಳ ಸ್ವರೂಪವನ್ನು ಸ್ಪಷ್ಟವಾಗಿ, ಸುಂದರವಾಗಿ ಹಿಡಿದಿಟ್ಟಿರುವ ಈ ಕವನ ಹುವಾಶ್ರೀಯವರ ಕಾವ್ಯಶಕ್ತಿಯ ದ್ಯೋತಕ. ಈ ಕವಿಯ ಬಗ್ಗೆ ಅಭಿಮಾನ ಮೂಡಿಸಬಲ್ಲ ಇನ್ನೊಂದು ಕವನ 'ವಿಕ್ಷಿಪ್ತ'. ಇಲ್ಲಿಯ ಚಿಂತನಕ್ರಮ ವಿಶಿಷ್ಟವಾಗಿದೆ. ಮನಸ್ಸಿನ ದ್ವಂದ್ವಗಳನ್ನು ಚಿತ್ರಿಸಿರುವ ಇಲ್ಲಿನ ರೀತಿ ಅನನ್ಯ. 'ವಿಕ್ಷಿಪ್ತ' ರೀತಿ ಕಣ್ಣಿಗೆ ಕಟ್ಟುತ್ತದೆ. 'ದನಗಾಹಿ ಹುಡುಗ' ಪಟ್ಟಣದ ಜನರಿಗೆ ಒಂದು ಹೊಸ ಚಿತ್ರ ನೀಡುವಲ್ಲಿ ಯಶಸ್ವಿಯಾಗಿದೆ. 'ರುಚಿ ನೋಡಿ ಮರ ಹೇಳುವನು' ಎಂಬ ಸಾಲು ಅದರ ಹಿಂದಿನ ಅನುಭವ ಎಂಥದು! ಕವನದ ಅಂತ್ಯವು ಚೆನ್ನಾಗಿದೆ.

ಹೊಸ ಹುಟ್ಟನ್ನು, ಆವಿಷ್ಕರಣವನ್ನು ಆದರಿಸುವ ದೃಷ್ಟಿಯೇ ಸ್ವಾಗತಾರ್ಹವಲ್ಲವೇ? 'ಹ್ಯಾಲಿಗೆ ಸ್ವಾಗತ'ದಲ್ಲಿ ಹೊಸ ಯುಗವನ್ನು ಸ್ವಾಗತಿಸುವ ಸಂಭ್ರಮ ಕಾಣುತ್ತೇವೆ, ಆಶಾವಾದವಿರುವ ಕೆಲವೇ ಕವಿತೆಗಳಲ್ಲಿ ಇದೂ ಒಂದು. 'ಗೆಳೆಯನಿಗೆ' ಕವಿತೆಯಲ್ಲಿ ಗೆಳೆಯನನ್ನು ಕುರಿತು ಕಳಕಳಿ, ಅವನು ಆರಿಸಿಕೊಂಡ ಹಾದಿಯ ಬಗ್ಗೆ ಅಭಿಮಾನವೂ ಕಂಡುಬಂದರೂ ಕೊನೆಯ ಸಾಲಲ್ಲಿ 'ರಾಮರಾಜ್ಯವೂ ಬರಲಿ ಇಳೆಗೆ' ಎಂಬ ವ್ಯಂಗ್ಯದಂತಿರುವ ಸಾಲು ಕವಿತೆಯ ಭಾವಕ್ಕೆ ಹೊಂದುವುದಿಲ್ಲ. 'ನಮ್ಮೂರ ದೇವಿಯ ಸಾವು' ಕವಿತೆ ಒಬ್ಬ ಸಾಮಾನ್ಯ ಗ್ರಾಮೀಣ ಮಹಿಳೆಯ ಸಹಜ ಚಿತ್ರ. ಒಗಟಿನಂತಿರುವ ನಿಗೂಢ ಕವನ 'ಜೊತೆಗಾರರು', ಮನಸ್ಸಿನ ದ್ವಂದ್ವಗಳ ನಿರಂತರತೆಯನ್ನು ಅರ್ಥಗರ್ಭಿತವಾಗಿ ಹೇಳುವ ಸಾಲುಗಳು ಮನನೀಯವಾಗಿವೆ. 'ನಾಲ್ಕು ಗೋಡೆಯ ಮಧ್ಯೆ' ಇನ್ನೊಂದು ಗಟ್ಟಿ ಕವಿತೆ. ಕವಿಯ ಪ್ರಾತಿನಿಧಿಕ ಕವಿತೆಗಳಲ್ಲಿ ಇದೂ ಒಂದಾಗಬಲ್ಲದು. ಅತಿಯಾದ ಅಂತರ್ಮುಖತೆಯಿಂದ ಭಾವನೆಗಳೂ ಹೊರಗೆ ಬರದಂಥ ಸ್ಥಿತಿಯ ಚಿತ್ರಣ ಚೆನ್ನಾಗಿದೆ. ಹುವಾಶ್ರೀ ಅಂತರ್ಮುಖಿ. ಕವಿಗೆ ಅಂತರ್ಮುಖ ಮುಖ್ಯ ನಿಜ. ಆದರೆ ಅವನು ಒಳಗು ಹೊರಗುಗಳ ಸಮನ್ವಯ ಮಾಡುತ್ತಾನೆ. ಅತಿ ಅಂತರ್ಮುಖತೆಯೇ ಇಲ್ಲಿನ ಕವಿತೆಗಳ ಮಿತಿಯೂ ಇದ್ದೀತು!

'ನಸು ನಸು ಬೆಳಕಲ್ಲಿ, ಸ್ಪರ್ಶ ಮೈಮರೆಸಿ,
ನೆಲ ಆಕಾಶಗಳ ಪೆಟ್ಟಿಯೊಳಗೆ ಕೂಡಿಟ್ಟ ಅಣುವಂತೆ
ಪಂಚಭೂತಗಳ ಸ್ಫುರಣೆಯಲಿ ಅನೇಕ ಏಕವಾಗುವುದು' [ತಾದಾತ್ಮ್ಯ]

ಮನಮುಟ್ಟುವ ಸಾಲುಗಳು. 'ನೆಲ ಆಕಾಶ ಪೆಟ್ಟಿಗೆ' ಹೊಸ ಪರಿಕಲ್ಪನೆ. ...ನಂತತೆಯಲ್ಲಿ ದೇಶದ ಪರಿಕಲ್ಪನೆಯೂ ಶೂನ್ಯವಾಗುವುದನ್ನು ಅಲ್ಲಲ್ಲಿ 'ಕೂಡಿಟ್ಟ ...ಣಗಳು' ಸೂಚಿಸಿತು. ಇಂಥ ಸಾಲುಗಳನ್ನು ಸೃಷ್ಟಿಸಬಲ್ಲ ಕವಿ ತನ್ನ ಕಾವ್ಯ ...ಕ್ತಿಯ ಮೇಲೆ ಅಳುಕಿಲ್ಲದೆ ಭರವಸೆ ಇಡಬಹುದು.

'ದೀಪಾವಳಿಯ ಮೊದಲು ಹತ್ತು ಸಾಲುಗಳಲ್ಲಿದ್ದ ಲಯ 'ಹೂವು ಕುಂಡ ...ಗೆಯ ಬುಗ್ಗೆ ಗಗನದಲ್ಲಿ ಮಿಂಚು. ಮೆಲ್ಲ ಹಚ್ಚಿ ದೂರ ಓಡು ಗಟ್ಟಿ ಮಾಡಿ ...ದೆ.....' ಇತ್ಯಾದಿ ಪಟಾಕಿ ಸರ ನೆನಪಿಗೆ ತರುವಂತೆ ಇದ್ದರೂ ಕೊನೆಯಲ್ಲಿ ...ಬಸ್ಸಾಗಿದೆ. ಲಯವನ್ನು ಕಡೆಯವರೆಗೂ ಕಾಯ್ದುಕೊಳ್ಳದ್ದಿರಲಿ, ಕೊನೆಯಲ್ಲಿ ಉಪದೇಶಕ್ಕೆ ತಿರುಗುವ ಅಗತ್ಯವಿತ್ತೆ?

ನಿಗೂಢವಾದ್ದನ್ನು ಹುಡುಕುವುದೇ ಬದುಕೇ? 'ಕಳೆದ ಕವನ ಸಿಕ್ಕುವುದಿಲ್ಲ..... ಕಳೆದದ್ದಾದರೂ ಎಲ್ಲಿ ಹುಟ್ಟಿಯೇ ಇಲ್ಲದ ಕವನ? ಇಲ್ಲಾ ಇಲ್ಲೇ ಹುಡುಕಬೇಕು. ಇಲ್ಲೇ ಮೂಡಿ ಮಾಯವಾಯಿತಲ್ಲಾ..... ಇಲ್ಲೇ ಅಲ್ಲವೇ?' ಎನ್ನುವ ಮಾತುಗಳು ಯಾವುದೋ ಆಕರ್ಷಣೆಯಿಂದ ಮನಸ್ಸಿಗೆ ಹತ್ತಿರವಾಗುತ್ತವೆ. [ಕಳೆದ ಕವನ]

ಅಶ್ಲೀಲತೆ ಸೋಂಕದಂತೆ ಪ್ರೇಮ ಕಾಮಗಳ ವಸ್ತುಗಳನ್ನು ಇವರು ಪ್ರಬುದ್ಧವಾಗಿ ನಿರ್ವಹಿಸಬಲ್ಲರೆಂಬುದಕ್ಕೆ ಈ ಕವಿತೆಯೇ ನಿದರ್ಶನ :

'ಮುತ್ತಿನ ಮಳೆ ಸುರಿದು
ಹಾವು ಹಕ್ಕಿಯ ಗೂಡು ಸೇರಿ
ಬಿಗಿದಪ್ಪುಗೆಯ ಉಸಿರ ಮಿಳಿತದಲ್ಲಿ
ಕಾಮದ ಕಂಪು
ಮೇಲೆ ಛಾವಣಿಯ ಮೀರಿ
ಚುಕ್ಕಿ ಚಂದ್ರಮರ ದಾಟಿ
ಮನಸುಗಳ ಮೇಳೈಸಿ ಹಾರಾಡುತ್ತದೆ' [ಕಾಮಿನಿ ನಿನ್ನ ಸನಿಹ]

'ಕರ್ಮಗಿಡದ ಫಲ ತರತರಹ
ಕ್ಷಣ ಕ್ಷಣ ನಾಳೆಗೆಂದು
ಕೂಡಿಟ್ಟ
ಬುತ್ತಿಯ ಬಿಚ್ಚಿದರೆ ಬರೀ ಹಳಸಲು!' [ಹುಡುಕಾಟ]

ಸಂಗ್ರಹದ ನಿಷ್ಫಲತೆಯನ್ನು ಇದಕ್ಕಿಂತಲೂ ಚೆನ್ನಾಗಿ ಹೇಳಲಾದೀತೇ? [ವ್ಯಯತೋ ವೃದ್ಧಿಮಾಯಾತು, ಕ್ಷಯಮಾಯಾತು ಸಂಗ್ರಹಾತ್'..... ಎಂಬ

ಸಂಸ್ಕೃತದ ಶ್ಲೋಕಭಾಗ ಈಚೆಗೆ ವ್ಯಯ ಸಂವತ್ಸರ ಆರಂಭವಾದಾಗ ಚಾಲ್ತಿಯಲ್ಲಿತ್ತು.]

ಶಬ್ದಗಳನ್ನು, ಭಾವನೆಗಳನ್ನು ಬಿಡಿಸಿ ಬಿಡಿಸಿ ಅರ್ಥೈಸುವ, ವಿಶ್ಲೇಷಿಸುವ 'ಹೇಳಲು ಮರೆತಿದ್ದು' ಕವಿತೆ

'ನೆನಪಾಗಬಾರದಿತ್ತು ನನಗೆ
ಯಾರಿಗೋ ಹೇಳಬೇಕೆಂದಿದ್ದ
ಹುಟ್ಟುಹಬ್ಬದ ಶುಭಾಶಯ
ಹೀಗೆ
ನನ್ನವಳ ಅಪ್ಪುಗೆಯಲ್ಲಿ.....?

ಎಂಬ ಸಾಲುಗಳಲ್ಲಿ ಅಂತ್ಯವಾಗುತ್ತದೆ.

[ಅಂದಹಾಗೆ, 'ಕೂಡಿಟ್ಟ', 'ಹೀಗೆ' ಎಂಬ ಶಬ್ದಗಳಿಗೆ ಒಂದೊಂದು ಸಾಲು ಬೇಕಿತ್ತೇ?]

'......
ಮರೆಯಾಯ್ತೊಂದು ಮೋಹಕ ಕೋಳಿ
ಮಿಂಚಿ ಮಲ್ಲಿಗೆಯ ಪೊದೆಯಲ್ಲಿ ! [ಬೆಳಗು]

ಇಲ್ಲ, ಮತ್ತೇನೂ ಇರಲಿಲ್ಲ
ಚುಕ್ಕಿ ಚಂದ್ರಮ ಮಿಂಚು ಗುಡುಗು
ಏನೂ ಇಲ್ಲದ ಖಾಲೀ ಖಾಲೀ ನಭದಲ್ಲಿ
ನಾನೊಬ್ಬನೇ ಇದ್ದೆ ......

ಪ್ರೇಮ, ಕಾಮ, ಅಂತರ್ಮುಖತೆ, ಏನೋ ಕಳೆದುಕೊಂಡ ಭಾವ, ಅರಸಾಟ ಶ್ರೀಯುತರ ಕಾವ್ಯದ ಮೂಲದ್ರವ್ಯ. ಇದರ ನಡುವೆ ಅಲ್ಲಲ್ಲಿ ಕೆಲವೆಡೆ ಆಶಾವಾದವೂ ಜ್ಞಾನೋದಯದ ಸೆಳಕುಗಳೂ ಕಾಣುತ್ತವೆ :

'ಪೂರ್ವಕ್ಕೆ ಮುಖಮಾಡಿ ಇಡು ಕುಂಕುಮ' [ನೀ ಕಾಯುವೆಯಾದರೆ]

'ಕಣ್ಮುಚ್ಚಿ ಮಲಗಿರಲು ಬರೀ ಕತ್ತಲು
ಕಣ್ಣ ಬಿಟ್ಟರೆ ಅಹಾ ! ಎಂಥ ಬೆಳಗು!'

ಸಂವಹನದ ಸೂಕ್ಷ್ಮತೆಯನ್ನು 'ನನ್ನತ್ತ ಪ್ರೀತಿಯಿಂದ ನೋಡು' ಕವಿತೆಯಲ್ಲಿ ಕಾಣಬಹುದು. ಕೆಲವು ಕವಿತೆಗಳು ಕವಿಯ ಗ್ರಾಮೀಣ ಹಿನ್ನೆಲೆಯ ಬಾಲ್ಯದ ನೆನಪುಗಳನ್ನು ದಾಖಲಿಸಿವೆ :

'ರಾತ್ರಿ ಬೆಂಕಿಯ ಸುತ್ತ ಕುಳಿತ
ಅಡಿಕೆ ಸುಲಿತ
ಪದ ಹಾಡು ಕಥೆ
ರಾಜಕುಮಾರ ರಾಕ್ಷಸ ಸುಂದರಿ
ಏಳು ಸಮುದ್ರದಾಚೆ.... .....
ನೆಟ್ಟ ಔಷಧಿ ಕೊಯ್ಲು
ಮಣ್ಣು ರಸ್ತೆಯಲ್ಲಿ ಗಾಡಿ ಚಕ್ರ
ಉರುಳಿದ ಗುರುತು'

'ಕೆಂಡದ ಮೇಲೂ ನಂಬಿಕೆಯ ಹೆಜ್ಜೆಗಳು' [ನೆನಪಾಗುವ ನನ್ನೂರು]

ಎಲ್ಲ ಒಳ್ಳೆಯ ಸಂಗತಿಗಳಿಗೂ ಅಂತ್ಯವಿರುವಂತೆ ಇಲ್ಲಿಯ ಉತ್ತಮ ಕವಿತೆಗಳ ಬಗೆಗಿನ ಪ್ರಸ್ತಾಪವೂ ಮುಗಿಯಬೇಕಾಗುತ್ತದೆ. 'ಏತಕೀ ಸೃಷ್ಟಿ?'ಯಲ್ಲಿ ಹೆಪ್ಪುಗಟ್ಟಿರುವ ನಿರಾಶೆ ಆರೋಗ್ಯಕರವೆನಿಸುವುದಿಲ್ಲ. ಅದೂ ಮೊದಲ ಸಂಗ್ರಹದ ಮೊದಲ ಕವನ. ಕವಿಯೂ ಸೃಷ್ಟಿಕರ್ತನೇ ಆದ್ದರಿಂದ ಸೃಷ್ಟಿ ಕುರಿತ ಈ ಅನಾದರ ಒಪ್ಪಾಗಲಾರದು, ಸೃಷ್ಟಿ ಸ್ಥಿತಿ ಲಯ ಕರ್ತರಿಗೆ ಸಲಹೆಮಾಡಿರುವಂತೆ ಈ ಕವಿಯೂ ಅಂಥದೇ ಚಟುವಟಿಕೆಗಳಲ್ಲಿ ತೊಡಗಿ ಆನಂದವಾಗಿ ಏಕಿಲ್ಲ?

ಕೆಲವು ಚರ್ವಿತ ಚರ್ವಣ ಭಾವನೆಯ ಕವಿತೆಗಳು ಇಲ್ಲಿವೆ. ವಸ್ತು-ಅನುಭವ-ಆಲೋಚನೆಯ ಕ್ರಮದಲ್ಲಿ, ಭಾವನಿರೂಪಣೆಯಲ್ಲಿ, ಲಯದಲ್ಲಿ, ಶಬ್ದ ಪ್ರಯೋಗದಲ್ಲಿ ಅಥವಾ ತಂತ್ರದಲ್ಲಿ ಹೊಸತೇನೂ ಇಲ್ಲವೆನ್ನಿಸಿದರೆ ಅದು ಕವಿತೆಯಾಗಲಾರದು. [ಕವಿ ಬಾಲಕೃಷ್ಣಶರ್ಮ ನವೀನರ ಈ ಸಾಲುಗಳು ಮನನೀಯವಾಗಿವೆ :

'ಹೊಸಗತಿ ಹೊಸಲಯ ತಾಳ ಛಂದ ಹೊಸ
ಹೊಸತು ಕಂಠ ಹೊಸ ಮೇಘ ಮಂದ್ರ ಸ್ವನ
ಹೊಸ ಆಕಾಶದ ಹೊಸ ಹಕ್ಕಿಯ ಗುಂಪಿಗೆ
ಹೊಸ ಸ್ವರ ಹೊಸ ರೆಕ್ಕೆಯ ನೀಡು, ವರನೀಡು ವೀಣಾವಾದಿನಿ
ವರನೀಡು-']

ಅಚ್ಚಿನ ತಪ್ಪುಗಳಿಲ್ಲದೆ ಮುದ್ರಣವಾಗಿದ್ದರೂ ರೋಧನ, ಅಶೃತ, ಗಾಂಭೀರ್ಯತೆ, ಘಾಡ ಮುಂತಾದ ಕಾಗುಣಿತ ದೋಷಗಳಿವೆ,

ಹನಿಗವನಗಳು ವಿಮರ್ಶೆಗೆ ಪಕ್ಕಾಗಬಹುದೇ? ಇಲ್ಲಿರುವ 40ಕ್ಕೂ ಹೆಚ್ಚು ಹನಿಗಳಲ್ಲಿ ಕೆಲವು ಮಾತ್ರ 'ಹನಿ'ಯಂತೆಯೇ ಇವೆ. ಕನಸು, ಸಂಸಾರಿ, ವಿಪರ್ಯಾಸ, ಭಿಕ್ಷುಕಿ, ನಲ್ಲ, ವಿಸ್ಮಯ, ಕ್ಷಣ, ಅಣಕ, ನಿರಾಡಂಬರ, ಇನ್ನೂ ಸಿಟ್ಟಾ! ಭ್ರಮೆ, ಕಾವೇರಿ, ಅದೃಷ್ಟಹೀನ, ಕುಡಿತ ಮೆಚ್ಚುಗೆಯಾಗುವ ಹನಿಗಳು. ಸವಾಲು, ಪ್ರಾರ್ಥನೆಯಂಥ ಕೆಲವು ಹನಿಗಳು ಯಥಾರ್ಥ ಹೇಳಿಕೆಗಳು ಹನಿಗವಿತೆಗಳಾಗವು.

ಒಟ್ಟಾರೆ 'ಪ್ರೀತಿಯ ಹೂಗೊಂಚಲಿ'ನಲ್ಲಿ ಪ್ರೀತಿ, ಪ್ರೇಮ ಕುರಿತ ತೀವ್ರ ತುಡಿತಗಳುಳ್ಳ ಕವಿತೆಗಳು ಪ್ರಧಾನವಾಗಿವೆ. ವಿಷಾದ, ಒಂಟಿತನ, ನಿರಾಶೆ, ಶೂನ್ಯತೆಯ ಭಾವ ಹೆಚ್ಚಾಗಿ ಪ್ರಕಟಗೊಂಡಿದ್ದರೂ ಧನಾತ್ಮಕ ದೃಷ್ಟಿಯ, ಆಶಾವಾದದ ಬರವಣಿಗೆಯೂ ಇದೆ. ಭಾವನಾಶಕ್ತಿ ಅಧಿಕವಾಗಿದೆ; ವೈಚಾರಿಕತೆಯನ್ನು ಹುಡುಕಬೇಕೇನೋ. ಶಬ್ದಗಳ ಮೇಲೆ ಹತೋಟಿ ಇದೆ. ಆದರೆ ಇದೇ ಮಾತನ್ನು ಲಯ ಕುರಿತು ಹೇಳುವಂತಿಲ್ಲ. ವಸ್ತುವಿನ ಆಯ್ಕೆಯಲ್ಲಿ ಇನ್ನಷ್ಟು ವೈವಿಧ್ಯ ಬೇಕಾಗಿದೆ. ಹೊರಗಿನ ವಿದ್ಯಮಾನಗಳ ಪರಿವೆಯೇ ಇಲ್ಲದಂತೆ ಬರೆದಿರುವರೆನ್ನಲು ಅವಕಾಶವಿರುವಂತಿದೆ. ಮೊದಲ ಕೃತಿಗೆ ಶುದ್ಧ ಹಸಿರು ನಿಶಾನೆ.

– *ಬಿ.ಎಸ್. ಚಂದ್ರಶೇಖರ್*

ದಿನಾಂಕ : 23–03–2010

ಗೆಳೆಯ ಶ್ರೀಪ್ರಕಾಶ, ಪ್ರೀತಿಯ ಹೂಗೊಂಚಲ ಕವಿ. ಪ್ರೀತಿ, ಸಂಕೋಚ, ನೋವಿನಿಂದ ಘಮಘಮಿಸಿದ್ದು ಅವರ ಭಾವ. ತನ್ನ ನಿಲುವಿನಲ್ಲಿ ಆತ್ಮ ಶೋಧನೆ ಬರಹದ ಪಾಯ. ಅಂಕಣದ ಸಂಕಲನ 'ನನ್ನ ಪ್ರೀತಿಯ ಮಲೆನಾಡು' ಅರಳಿದ್ದು 'ಹೂಗೊಂಚಲು' ಬಿಟ್ಟ ನಾಲ್ಕು ವರ್ಷಗಳ ನಂತರ.

ಲೇಖಕರ ಅನುಭವಗಳು ಇಲ್ಲಿ ಮೂಸೆಗೊಂಡಿವೆ. 1960ರ ದಶಕದ ಆರಂಭದ ದಿನಗಳು ಅವರ ಬಾಲ್ಯ. ಅಂದಿನ ಜನಜೀವನವನ್ನು ಹಿಡಿದಿಡುವ ಪ್ರಯತ್ನ ಅಂಕಣದ ಲೇಖನಗಳಲ್ಲಿ. ಕಂಡಿದ್ದು, ನವಿರಾಗಿ ಬರಹವಾಗಿದೆ. ಬರಹ ತೀರ ವೈಯಕ್ತಿಕವಾಗದಂತೆ ನಾಡು, ಪರಿಸರ, ಸಂಸ್ಕೃತಿಯ ಭಿತ್ತಿ ಆಗುವಂತೆ ಎಚ್ಚರ ವಹಿಸಿದ್ದಾರೆ.

ದೈವಕ್ಕೆ, ಅಧ್ಯಾತ್ಮಕ್ಕೆ ಒಲಿಯುವ ಪ್ರಕಾಶರು ಇನ್ನಷ್ಟು ಬರೆಯಬೇಕು. ಆಗೊಮ್ಮೆ ಈಗೊಮ್ಮೆ ಬರೆಯುತ್ತಾ ಮಿಂಚುವುದು ಖುಷಿಯಾದರೂ ಆಳ ವಿಸ್ತಾರವಾಗಿ ಹಬ್ಬಿ ಮೆಚ್ಚಾಗಬೇಕು.

–ಬೆಂ. ಶ್ರೀ. ರವೀಂದ್ರ

